ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 243

ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com,

website: www.mysurumithra.com

ಅಪರಾಧ ತಡೆ, ಪತ್ತೆಯಲ್ಲಿ ಯುವ ಸಮೂಹದ ಪಾತ್ರ ಅವಶ್ಯ

- ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅಭಿಮತ
- ಅಪರಾಧ ಕಣ್ಮುಂದೆ ನಡೆದಾಗ ಪ್ರತಿಕ್ರಿಯಿಸುವ ಗುಣ ಬೆಳೆಸಿಕೊಳ್ಳಿ
- ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮದಲ್ಲಿ ಕಿವಿಮಾತು

ಮೈಸೂರು, ಡಿ.19(ಎಸ್‌ಬಿಡಿ)– ಅಪರಾಧ ತಡೆ ಹಾಗೂ ಪತ್ತೆ ಕಾರ್ಯದಲ್ಲಿ ಯುವಸಮೂಹದ ಪಾತ್ರ ಮುಖ್ಯವಾದುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಹೇಳಿದರು. ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ನಗರ ಪೊಲೀಸ್ ವತಿಯಿಂದ ಕೆಆರ್‌ಎಸ್ ರಸ್ತೆಯಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಎಂ.ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ಗುರುವಾರ ಆಯೋಜಿಸಿದ್ದ ಮಹಿಳೆಯರ ವಿರುದ್ಧದ ಅಪರಾಧಗಳ ಕುರಿತ ಕಾನೂನು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ನಮ್ಮ ಕಣ್ಮುಂದೆ ಅಪರಾಧ ನಡೆಯುವಾಗ ಅದು ನಮಗೆ ಸಂಬಂಧಿಸಿದ್ದಲ್ಲ ಎಂಬ ಭಾವನೆಯಿಂದಲೋ, ಭಯದಿಂದಲೋ ಅಲ್ಲಿಂದ ಹೋಗಬಾರದು. ಪರಿಸ್ಥಿತಿ ಗಮನಿಸಿ ಸಾಧ್ಯವಾದರೆ ಸ್ಥಳದಲ್ಲೇ ಪ್ರತಿಕ್ರಿಯಿಸಬೇಕು, ಇಲ್ಲವೇ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು. ಪ್ರತಿಭಟಿಸುವ ಗುಣ ಬೆಳೆಸಿಕೊಳ್ಳಬೇಕು. ಅಪರಾಧ ನಡೆದ ಬಳಿಕ ಪತ್ತೆ ಮಾಡುವುದಕ್ಕಿಂತ ಅಪರಾಧವೇ ನಡೆಯದಂತೆ ತಡೆಯುವುದು ಒಳ್ಳೆಯದು. ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಅದರಲ್ಲೂ ಯುವ ಸಮುದಾಯ ಅಪರಾಧ ತಡೆ ಹಾಗೂ ಪತ್ತೆಗೆ ಪೊಲೀಸರಿಗೆ ಸಹಕಾರ ನೀಡಬೇಕು ಎಂದು ತಿಳಿಸಿದರು. ನೀವು ಇಂಜಿನಿಯರಿಂಗ್ ನಂತರ ವಿವಿಧ ವೃತ್ತಿಗೆ ಹೋಗಬಹುದು. ಆದರೆ ಯಾವುದೇ ವೃತ್ತಿಯಾದರೂ ವೈಯಕ್ತಿಕ ಸಂರಕ್ಷಣೆ ಬಗ್ಗೆ ಜಾಗೃತಿ ಇರಬೇಕು. ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಬೇಕು. ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರ ರಕ್ಷಣೆಗೆ ಕಾನೂನುಗಳು ಬಲವಾಗಿವೆ. ಮಹಿಳೆಯ ಅನುಮತಿಯಿಲ್ಲದೆ ಆಕೆಯ ಕೈ ಮುಟ್ಟುವುದೂ ಅಪರಾಧವಾಗಬಹುದು. ಆದ್ದರಿಂದ ವಿದ್ಯಾರ್ಥಿನಿಯರು ಕಾನೂನು-ಕಾಯ್ದೆಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೋ ಕಾಯ್ದೆ ಸೇರಿದಂತೆ ಹಲವು ಕಾಯ್ದೆ-ಕಾನೂನುಗಳ ಬಗ್ಗೆ ಇದೇ ವೇಳೆ ಸೀಮಾ ಲಾಟ್ಕರ್ ಮಾಹಿತಿ ನೀಡಿದರು. ನೆರೆದಿದ್ದ ನೂರಾರು ವಿದ್ಯಾರ್ಥಿನಿಯರು, ಅತೀವ ಆಸಕ್ತಿಯಿಂದ ವಿಚಾರ ತಿಳಿದುಕೊಂಡರಲ್ಲದೆ, ಕಾರ್ಯಾಗಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ, ವಿಜಯನಗರ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಗಜೇಂದ್ರ ಪ್ರಸಾದ್,ಸೆನ್ ವಿಭಾಗದ ಎಸಿಪಿ ಸ್ನೇಹಾರಾಜ್, ವಕೀಲ ಸಾವಂತ್, ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್, ಹೆಬ್ಬಾಳ್ ಠಾಣೆ ಇನ್ಸ್‌ಪೆಕ್ಟರ್ ಮಲ್ಲೇಶ್, ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್, ಜೆಎಸ್‌ಎಸ್ ಕಾಲೇಜು ಆಡಳಿತ ಮಂಡಳಿ ಸದಸ್ಯರಾದ ಅನುಪಮ ಬಿ.ಪಂಡಿತ್, ಆರ್.ಕೆ.ಭರತ್, ಪ್ರಾಂಶುಪಾಲ ಡಾ.ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ನಗರ ಪೊಲೀಸ್ ವತಿಯಿಂದ ಜೆಎಸ್‌ಎಸ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಮಹಿಳೆಯರ ವಿರುದ್ಧದ ಅಪರಾಧಗಳ ಕುರಿತ ಕಾನೂನು ಕಾರ್ಯಾಗಾರದಲ್ಲಿ ಪೊಲೀಸ್ ಅಧಿಕಾರಿಗಳು, ಕಾಲೇಜು ಆಡಳಿತ ಮಂಡಳಿಯವರು ಭಾಗವಹಿಸಿದ್ದರು.

ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಮೈಸೂರಿನ ಒಂದು ವರ್ಷದ ಪುಟ್ಟ ಬಾಲಕಿ ದಾಖಲೆ



ಮೈಸೂರು, ಡಿ.19(ಬಿಎಲ್‌ಯು)– ಅಗಾಧ ಬುದ್ಧಿಶಕ್ತಿ ಪ್ರದರ್ಶಿಸುವ ಮೈಸೂರಿನ ಒಂದು ವರ್ಷದ ಪೋರಿಯೊಬ್ಬಳು ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದ್ದಾಳೆ.

ಮೈಸೂರಿನ ಇಂಡಿಯನ್ ಟಿವಿ ಸಿಇಒ ಎಸ್.ರಾಜು ಮತ್ತು ಕೆ.ಆರ್. ಪೂಜ್ಯಶ್ರೀ ಪುತ್ರಿ ವಂಶಿಕ ಹಿತನ್ಯ ಎಂಬಾಕೆಯೇ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ದಾಖಲೆ ಮಾಡಿರುವ ಒಂದು ವರ್ಷದ ಪುಟ್ಟ ಬಾಲಕಿಯಾಗಿದ್ದಾಳೆ.

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಒಂದು ವರ್ಷಕ್ಕೆ ವಂಶಿಕ ಹಿತನ್ಯಳಿಗೆ ಅಗಾಧ ಬುದ್ಧಿಶಕ್ತಿ ಇದೆ. ದೇಹದ ಅಂಗಾಂಗಗಳನ್ನು ಗುರುತಿಸುವುದು, ಪ್ರಾಣಿಗಳ ಧ್ವನಿ ಅನುಕರಣೆ ಮಾಡುವುದು, ವಿವಿಧ ಬಗೆಯ ಹಣ್ಣು ಮತ್ತು ತರಕಾರಿ ಹೆಸರು ಹೇಳುವುದು, ಎಲ್ಲಾ ರೀತಿಯ ಬಣ್ಣಗಳು ಹಾಗೂ ರಾಷ್ಟ್ರೀಯ ನಾಯಕರ ಹೆಸರನ್ನು ಈಕೆ ಸಲೀಸಾಗಿ ಹೇಳುತ್ತಾಳೆ.

ಅಷ್ಟೆ ಅಲ್ಲದೆ ಇಂಗ್ಲಿಷ್ ರೈಮಿಂಗ್‌ನ್ನು ಈಕೆ ಹರಳು ಹುರಿದಂತೆ ಹೇಳುತ್ತಾಳೆ. ವಯಸ್ಸಿಗೆ ಮೀರಿದ ಪ್ರತಿಭೆ ಇರುವ ಈ ಪುಟಾಣಿ ಈಗ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ಮುಡಿಗೇರಿಸಿಕೊಂಡಿದ್ದಾಳೆ.

ಅಷ್ಟೆ ಅಲ್ಲದೆ ಜೀನಿಯಸ್ ಚಾರ್ಮ್ ಆಫ್ ವರ್ಡ್ ರೆಕಾರ್ಡ್ ಹಾಗೂ ಭಾರತ್ ವಿಭೂಷಣ್ ಅವಾರ್ಡ್ ಕೂಡ ಪಡೆದಿದ್ದಾಳೆ. ಮೈಸೂರಿನ ಕೆ.ಜಿ.ಕೊಪ್ಪಲ್‌ನ ಎಂ.ಸೋನಿ ಕರಿಗೌಡರ ಮರಿ ಮೊಮ್ಮಗಳಾದ ವಂಶಿಕ ಹಿತನ್ಯ ಸಾಧನೆಯನ್ನು ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು ಪ್ರಶಂಶಿಸಿದ್ದಾರೆ.

ಅಮಿತ್ ಶಾ ಹೇಳಿಕೆ ಖಂಡಿಸಿ ಇಂದು ದಲಿತ ಸಂಘಟನೆಗಳಿಂದ ಪ್ರತಿಭಟನೆ

ಮೈಸೂರು, ಡಿ.19(ಬಿಎಲ್‌ಯು)– ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ದಲಿತ ಸಂಘಟನೆಗಳಿಂದ ನಾಳೆ (ಡಿಸೆಂಬರ್ 20) ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಬಗ್ಗೆ ಅಗೌರವದಿಂದ ಮಾತನಾಡಿರುವ ಅಮಿತ್ ಶಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಅಮಿತ್ ಶಾ ಅವರನ್ನು ಕೇಂದ್ರ ಸಂಪುಟದಲ್ಲಿ ಇನ್ನು ಮುಂದುವರೆಸುವ ಸ್ಥಾನ ನೀಡಿರುವ ಪ್ರಧಾನಿ ನರೇಂದ್ರ ಮೋದಿ ನಡೆ ಸರಿಯಲ್ಲ. ಈಗಲಾದರೂ ದಲಿತ ವಿರೋಧಿ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಮೈಸೂರಿನಲ್ಲಿ ಎಲ್ಲಾ ದಲಿತ ಸಂಘಟನೆಗಳು ಒಂದುಗೂಡಿ ನಾಳೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಸುನೀಲ್, ರಾಜು, ಮಹೇಶ್, ದೊರೆಸ್ವಾಮಿ, ಶಾಂತರಾಜು ಹಾಗೂ ಚಿನ್ನಸ್ವಾಮಿ ಉಪಸ್ಥಿತರಿದ್ದರು.

ಶ್ರೀ ಬಲಮುರಿ ಗಣಪತಿ ದೇವಸ್ಥಾನದ ವಾರ್ಷಿಕೋತ್ಸವ



ಮೈಸೂರು, ಡಿ.19–ಮೈಸೂರಿನ ರೈಲ್ವೆ ನಿಲ್ದಾಣದ ಆವರಣದಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನದ 35ನೇ ವಾರ್ಷಿಕೋತ್ಸವ ಸಮಾರಂಭ ಡಿ.21ರ ಶನಿವಾರ ಮತ್ತು 22ರ ಭಾನುವಾರ ವಿಜೃಂಭಣೆಯಿಂದ ನೆರವೇರಲಿದೆ ಎಂದು ಪ್ರಧಾನ ಅರ್ಚಕರಾದ ಜಿ.ಎಸ್.ನಾಗೇಶ್ ದೀಕ್ಷಿತ್, ಅರ್ಚಕ ಎನ್.ನಾಗೇಂದ್ರ ಪ್ರಸಾದ್ ದೀಕ್ಷಿತ್ ಹಾಗೂ ಎನ್.ಹೇಮಂತ್ ಕುಮಾರ್ ದೀಕ್ಷಿತ್ ತಿಳಿಸಿದ್ದಾರೆ.

ವಾರ್ಷಿಕೋತ್ಸವ ಅಂಗವಾಗಿ ಈ ಬಾರಿ ವಿಶೇಷವಾಗಿ ಶ್ರೀ ಸಹಸ್ರ ಮೋದಕ ಶ್ರೀ ಮಹಾಗಣಪತಿ ದೇವತಾ ಹೋಮ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಹೋಮ ನೆರವೇರಲಿದೆ. 22ರ ಬೆಳಗ್ಗೆಯಿಂದ ಪ್ರಾತಃಕಾಲ ಶ್ರೀ ಮಹಾಗಣಪತಿ ಪೂಜೆ, ಪುಣ್ಯಾಹಾ, ಕಲಶಸ್ಥಾಪನೆ ನಂತರ ಪರಿವಾರ ದೇವತಾ ಹೋಮಗಳು, ಶ್ರೀ ಸಹಸ್ರ ಮೋದಕ ಶ್ರೀ ಮಹಾಗಣಪತಿ ದೇವತಾ ಹೋಮ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಹೋಮ, ಶ್ರೀ ಧರ್ಮಶಾಸ್ತ್ರ ಹೋಮ, ಶ್ರೀ ಗುರುದತ್ತಾತ್ರೇಯ ಹೋಮ, ಶ್ರೀ ಆಂಜನೇಯ ಹೋಮ, ಶ್ರೀ ಪರಮೇಶ್ವರಸ್ವಾಮಿ ಹೋಮ, ಶ್ರೀ ನವಗ್ರಹ ದೇವಾತ ಹೋಮ, ನಾಗದೇವತಾ ಹೋಮ, ಕುಂಭಾಭಿಷೇಕ, ಈ ಮಂಗಳ ಕಾರ್ಯಕ್ಕೆ ಸಂತಾನ ದೋಷ ಪರಿಹಾರಕ್ಕಾಗಿ ಏರ್ಪಡಿಸಿದೆ. ಬೆಳಗ್ಗೆ 11ರಿಂದ ಮಹಾಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗವಾಗಲಿದೆ ಎಂದು ಹೇಳಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಎನ್.ನಾಗೇಂದ್ರ ಪ್ರಸಾದ್ ದೀಕ್ಷಿತ್ ಮೊ.9845836983, ಎನ್.ಹೇಮಂತ್‌ಕುಮಾರ್ ದೀಕ್ಷಿತ್, ಮೊ. 9845525082 ಸಂಪರ್ಕಿಸಬಹುದು.

ಛಲವಾದಿ ನಾರಾಯಣಸ್ವಾಮಿ ಅವರ ಭಟ್ಟಂಗಿತನದ ಹೇಳಿಕೆಗೆ ಖಂಡನೆ

ಮೈಸೂರು,ಡಿ.19–ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಅಮಿತ್ ಶಾ ಅವರನ್ನು ಓಲೈಸಿಕೊಳ್ಳಲು ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಅವರು ಭಾರತದ ಸಂವಿಧಾನದ ಪಿತಾಮಹ ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಯಿಂದ ರೂಪಿತಗೊಂಡಿರುವ ಸಂವಿಧಾನಿಕ ಹುದ್ದೆಯ ಫಲಾನುಭವಿಯಾಗಿದ್ದಾರೆ. ಅಮಿತ್ ಷಾ ಭಟ್ಟಂಗಿಯಾಗಲು ಹೊರಟಿರುವ ಅವರು ಸಾಂವಿಧಾನಾತ್ಮಕ ಹುದ್ದೆಯನ್ನು ತ್ಯಜಿಸಿ, ಬೇಕಿದ್ದರೆ ಅವರನ್ನು ಓಲೈಸಲಿ. ಭಾರತ ದೇಶದಲ್ಲಿನ ಪ್ರತಿಯೊಬ್ಬರು ಬಾಬಾ ಸಾಹೇಬರ ಸಂವಿಧಾನಾತ್ಮಕ ಫಲಾನುಭವಿಯಾಗಿದ್ದಾರೆ. ಇದನ್ನು ಅರಿಯದ ಅಮಿತ್ ಷಾ ಮತ್ತು ಛಲವಾದಿ ನಾರಾಯಣಸ್ವಾಮಿ ಅವರ ವಿರುದ್ಧ ನಾಗರಿಕರು ಪ್ರತಿಭಟನೆ ಹಮ್ಮಿಕೊಳ್ಳಬೇಕು. ಛಲವಾದಿ ನಾರಾಯಣಸ್ವಾಮಿ ವಿರುದ್ಧ ನ್ಯಾಯಾಲಯವು ಆರೋಪಿಯನ್ನಾಗಿ ಪರಿಗಣಿಸಬೇಕು ಎಂದಿದ್ದಾರೆ.

ಸುಗ್ರೀವಾಜ್ಞೆ ತರಲು ಒತ್ತಾಯ: ರಾಜ್ಯದ ಯಾವುದೇ ಭಾಗದಲ್ಲೂ ಭಾರತದ ಸಂವಿಧಾನ ಹಾಗೂ ಸಂವಿಧಾನ ಪಿತಾಮಹನ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ ತಕ್ಷಣ ಸದರಿ ವ್ಯಕ್ತಿ ಯಾರೇ ಆಗಿರಲಿ, ಜನಸಾಮಾನ್ಯನಾಗಿರಲಿ ಅವರ ವಿರುದ್ಧ ಮೊಕದ್ದಮೆ ದಾಖಲಿಸಲು ವಿಧಾನಸಭೆಯಲ್ಲಿ ಸುಗ್ರೀವಾಜ್ಞೆ ತಂದು ರಾಷ್ಟ್ರಕ್ಕೆ ಮಾದರಿಯಾಗಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಚಿತ್ರ, ಲೇಖನ ಪ್ರದರ್ಶನ

ಮೈಸೂರು, ಡಿ.19(ಬಿಎಲ್‌ಯು)– ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಾವು ಸಂಗ್ರಹಿಸಿರುವ ಪತ್ರಿಕೆಗಳ ಚಿತ್ರ, ಲೇಖನಗಳನ್ನು ಪ್ರದರ್ಶಿಸುತ್ತಿರುವುದಾಗಿ ಲೇಖಕ ಕಾಳಿಹುಂಡಿ ಶಿವಕುಮಾರ್ ತಿಳಿಸಿದರು. ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡು, ನುಡಿ, ಸಂಸ್ಕೃತಿ ಕುರಿತಂತೆ ಕಳೆದ 25 ವರ್ಷಗಳಿಂದ ಬರೆದಿರುವ ಚಿತ್ರ, ಲೇಖನಗಳನ್ನು ಸಂಗ್ರಹಿಸಿ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶಿಸುತ್ತಿರುವುದಾಗಿ ಹೇಳಿದರು. ಪ್ರದರ್ಶನವು ನಾಳೆಯಿಂದ ಡಿಸೆಂಬರ್ 22 ರವರೆಗೆ ಬೆಳಗ್ಗೆಯಿಂದ ರಾತ್ರಿತನಕ ಇರುತ್ತದೆ ಎಂದು ಶಿವಕುಮಾರ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಗೋವಿಂದಚಾರ್ಯ, ಮಿರ್ಲೆ ಚಂದ್ರಶೇಖರ್ ಉಪಸ್ಥಿತರಿದ್ದರು.

ಜಿಲ್ಲಾ ಜಾಗೃತ ಸಮಿತಿಗೆ ನೇಮಕ



ಮೈಸೂರು, ಡಿ.19–ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಅನ್ವಯ ಜಿಲ್ಲಾ ಮಟ್ಟದ ಜಾಗೃತಿ ಸಮಿತಿಗೆ ರಚಿಸಲ್ಪಟ್ಟ ಶಾಶ್ವತ ಆಹ್ವಾನಿತರ ಸದಸ್ಯರಾಗಿ ಮೈಸೂರು ಹೆಬ್ಬಾಳಿನ ಬಸವನಗುಡಿಯ ಕೆ.ನಂಜಪ್ಪ ಬಸವನಗುಡಿ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

ಸಿಎಸ್‌ಆರ್ ನಿಧಿಯಿಂದ ಶಾಲಾ ಕಟ್ಟಡ ನಿರ್ಮಾಣ, ದುರಸ್ತಿಪಡಿಸಿ

- ಸರ್ಕಾರಕ್ಕೆ ಶಾಸಕ ಜಿ.ಟಿ.ದೇವೇಗೌಡರ ಸಲಹೆ
- ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡದ ದುರಸ್ತಿ ಬದಲು ಪುನರ್ ನಿರ್ಮಾಣ ಮಾಡಿ



ಮೈಸೂರು, ಡಿ.19(ಎಸ್‌ಬಿಡಿ)– ಕೈಗಾರಿಕೆಗಳ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಧಿ(ಸಿಎಸ್‌ಆರ್ ಫಂಡ್)ಯಿಂದ ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ತಿಗೆ ಸರ್ಕಾರ ಕ್ರಮ ವಹಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಸಲಹೆ ನೀಡಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಸರ್ಕಾರಿ ಶಾಲಾ ಕಟ್ಟಡಗಳ ದುಸ್ಥಿತಿ ಬಗ್ಗೆ ಗಮನ ಸೆಳೆದ ಅವರು, ದಶಕಗಳ ಹಿಂದೆ ನಿರ್ಮಿಸಿರುವ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ. ಮಳೆ ಬಂದರೆ ಸೋರುತ್ತದೆ, ಇದ್ದಕ್ಕಿದ್ದಂತೆ ಛಾವಣಿ ಕುಸಿಯುತ್ತವೆ, ಪ್ಲಾಸ್ಟರಿಂಗ್ ಕಳಚಿ ಬೀಳುತ್ತದೆ. ಇಂತಹ ಕೆಟ್ಟ ಪರಿಸ್ಥಿತಿಯಿಂದ ಈಗಲೂ ಶಾಲೆ ಸಮೀಪದ ಯಾವುದೋ ಮರದ ಕೆಳಗೆ ಪಾಠ ಮಾಡಬೇಕಾಗಿದೆ. ಹಳೇ ಕಟ್ಟಡಗಳ ದುರಸ್ತಿ ಬದಲು ಅವುಗಳನ್ನು ನೆಲಸಮ ಮಾಡಿ, ಹೊಸ ಕಟ್ಟಡ ನಿರ್ಮಿಸಿಕೊಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರತಿಕ್ರಿಯಿಸಿ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 173 ಸರ್ಕಾರಿ ಶಾಲೆಗಳ 200 ಕೊಠಡಿಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಚಿವರ ಉತ್ತರಕ್ಕೆ ಸಮಾಧಾನವಾಗದ ಜಿ.ಟಿ.ದೇವೇಗೌಡರು, ಕೊಠಡಿ ದುರಸ್ತಿಗೆ ಕನಿಷ್ಟ 10 ಲಕ್ಷ ರೂ. ಬೇಕಾಗುತ್ತದೆ. ಸರ್ಕಾರದಿಂದ ಏಕಕಾಲಕ್ಕೆ ಅಷ್ಟೊಂದು ಅನುದಾನ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆಯಾ ಕ್ಷೇತ್ರ ವ್ಯಾಪ್ತಿಯ ಕೈಗಾರಿಕೆಗಳ ಸಿಎಸ್‌ಆರ್ ನಿಧಿಯನ್ನು ಬಳಸಿಕೊಂಡು ಹೊಸ ಕೊಠಡಿಗಳ ನಿರ್ಮಾಣ ಹಾಗೂ ನಿರ್ವಹಣೆಗೆ ಸರ್ಕಾರ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಗೌಡರ ಸಲಹೆಗೆ ಧ್ವನಿ ಗೂಡಿಸಿದ ಸಭಾಧ್ಯಕ್ಷರು ಸಿಎಸ್‌ಆರ್ ಫಂಡ್ ಜೊತೆಗೆ ಶಾಸಕರಿಗೆ ಬರುವ ವಿಶೇಷ ಅನುದಾನದಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಲು ಪ್ರಥಮ ಆದತ್ಯೆ ನೀಡಬೇಕು ಎಂದು ಸಲಹೆ ನೀಡಿದರು.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಏಕೆ ಬೇಕು?; ವಿಶೇಷ ಕಾರ್ಯಕ್ರಮ

ಮೈಸೂರು, ಡಿ.19–ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (ಕಾಸ್ಮೋಸ್), ಮೈಸೂರಿನ ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ, ಮೈಸೂರು ರೀಡರ್ಸ್ ಸಹಯೋಗದೊಂದಿಗೆ "ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ–ಏಕೆ ಬೇಕು?' ವಿಶೇಷ ಕಾರ್ಯಕ್ರಮವನ್ನು ಡಿ.22ರಂದು ಸಂಜೆ 4.30ಕ್ಕೆ ಶ್ರೀರಾಂಪುರದ ಅರಿವು ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದೆ. ನಿವೃತ್ತ ಮುಖ್ಯ ವಿಜ್ಞಾನಿ ಕೊಳ್ಳೇಗಾಲ ಶರ್ಮಾ ಉಪನ್ಯಾಸ ನೀಡಲಿದ್ದು ತದನಂತರ ಸಭಿಕರೊಂದಿಗೆ ಸಂವಾದವಿದೆ. ನೋಂದಣಿಗೆ +91 8310578413 / 9611240389 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.12.2024 ಶುಕ್ರವಾರ, ಮಳೆ ನಕ್ಷತ್ರ: ಮೂಲ, 16.12.2024ರಿಂದ 28.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧರ್ನುಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಪುಣ್ಯಕೋಟಿ ಸೇವಾ ಟ್ರಸ್ಟ್ :** ಉಪನ್ಯಾಸ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರ, ಪ್ರಧಾನ ಭಾಷಣಕಾರರು : ಡಾ. ರಕ್ಷಿತ್ ಶೃಂಗೇರಿ, ಅಧ್ಯಕ್ಷತೆ : ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಉದಯ್, ಉಪಸ್ಥಿತರು : ದಿವಾಕರ್ ದಾಸ್, ಎಸ್.ಆರ್. ರವಿಕುಮಾರ್, ಹನುಮಂತೇಶ್, ಸ್ಥಳ: ಯೋಗಾನರಸಿಂಹಸ್ವಾಮಿ ದೇವಸ್ಥಾನದ ಎದುರು, ಪಾರ್ಕ್ ಯೋಗಾ ಮಂಟಪ, ವಿಜಯನಗರ, ಬೆಳಗ್ಗೆ 7ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾಪೀಠ, ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಬಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಜನಪದ ಐತಿಹ್ಯಗಳು – ಅವಶ್ಯಕತೆ ಕುರಿತು ಅಂತರ ರಾಷ್ಟ್ರೀಯ ಸಮ್ಮೇಳನ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉದ್ಘಾಟನೆ: ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಕುಲಪತಿ ಪ್ರೊ. ಡಿ.ವಿ. ಪರಮಶಿವಮೂರ್ತಿ, ಮುಖ್ಯ ಅತಿಥಿಗಳು: ವೇಮುಲ ಲೆನಿನ್ ಬಾಬು, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಡೀನ್ ಪ್ರೊ. ಎನ್. ಲಕ್ಷ್ಮಿ, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನರಾಜ್, ಡೀನ್ ಪ್ರೊ. ಎಂ. ರಾಮನಾಥಂ ನಾಯುಡು, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಕರೆಂಟ್ ಟ್ರೆಂಡ್ಸ್ ಇನ್ ಜೆನೆಟಿಕ್ಸ್ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಆರ್‌ಜಿಯುಹೆಚ್‌ಎಸ್ ಡಾ. ಕೆ.ಸಿ.ಶಶಿಧರ, ಗೌರವ ಅತಿಥಿಗಳು : ಮಲ್ಲಿಗೆ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್.ವಿ. ರಾಜೇಂದ್ರ, ಡಾ. ಪಿ.ಟಿ. ಚೈತ್ರಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ತೇಯ ಮಠ: ಕ್ರೋಧಿನಾಮ ಸಂವತ್ಸರದ ಭಗವಾನ್** ಶ್ರೀ ದತ್ತಾತ್ರೇಯ ಸ್ವಾಮಿಯವರ 48ನೇ ವರ್ಷದ ಸಪ್ತಾಹ, ಹೋಮ, ಪೂರ್ಣಾಹುತಿ, ಮಧ್ಯಾಹ್ನ 12 ಗಂಟೆಗೆ ಭಜನೆ, ಶ್ರೀ ಗುರು ದತ್ತಾತ್ರೇಯ ಉತ್ಸವ, ಔದುಂಬರ ಪೂಜೆ, ಮಹಾಮಂಗಳಾರತಿ, ಬೆಳಗ್ಗೆ 9ಕ್ಕೆ ಗುರುಪಾದುಕೆ ಉತ್ಸವ, ಬೆಳಗ್ಗೆ 11ಕ್ಕೆ ಭಜನೆ, ಮಧ್ಯಾಹ್ನ 1.30ಕ್ಕೆ ಉತ್ಸವ, ಮಹಾಮಂಗಳಾರತಿ, ಪ್ರವಚನ, ನಂತರ ಅನ್ನಸಂತರ್ಪಣೆ, ಸ್ಥಳ : ದೇವಸ್ಥಾನದ ಆವರಣ, ಬೆಲವತ್ತ ಗ್ರಾಮ (ಮಂಟಿ).

■ **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ:** 64ನೇ ವಾರ್ಷಿಕ ಪೂಜಾ ಮಹೋತ್ಸವ, ಅನ್ನದಾನ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, 12.30 ರಿಂದ.

■ **ಶ್ರೀ ರಾಮಕೃಷ್ಣ ವಿದ್ಯಾಶಾಲಾ :** ಹಿರಿಯ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವ, ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಡಿಆರ್‌ಡಿಓ ಮಾಜಿ ಮುಖ್ಯಸ್ಥ ಪದ್ಮವಿಭೂಷಣ ಡಾ. ವಿ.ಕೆ. ಆತ್ರೆ, ಗೌರವ ಅತಿಥಿಗಳು : ಸಂಸದ ತೇಜಸ್ವಿ ಸೂರ್ಯ, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಯಾದವಗಿರಿ, ಮಧ್ಯಾಹ್ನ 3 ರಿಂದ.

■ **ಬಾಹುಸಾರ್ ನಾರಾಯಣ ಟ್ರಸ್ಟ್, ಮಹರ್ಷಿ ಇನ್ಸ್‌ಟಿಟ್ಯೂಷನ್ :** ವಾರ್ಷಿಕೋತ್ಸವ, ಮಹರ್ಷಿ ಕಹಳೆ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಾಂತ ಶಿವಯೋಗ ಸ್ವಾಮೀಜಿ, ಮುಖ್ಯ ಅತಿಥಿಗಳು : ಆದಿಚುಂಚನಗಿರಿ ವಿವಿ ಕುಲಪತಿ ಡಾ. ಎಂ.ಎ. ಶೇಖರ್, ಅಧ್ಯಕ್ಷತೆ : ಮಹರ್ಷಿ ಇನ್ಸ್‌ಟಿಟ್ಯೂಷನ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಭವಾನಿ ಶಂಕರ್, ಸ್ಥಳ: ಶಾಲೆ ಆವರಣ, ಸಂಜೆ 4.45ಕ್ಕೆ.

■ **ಅಹಂ ಬ್ರಹ್ಮಾಸ್ಮಿ ಫೌಂಡೇಷನ್ :** ವೇದಾಂತ ಶ್ರವಣ ಕಾರ್ಯಕ್ರಮ, ಸಂಜೆ 5 ರಿಂದ ವಿದ್ವಾನ್ ಶ್ರೀಪಾದ ಭಟ್ ಅವರಿಂದ ಶ್ರೀಶಿವಾಪರಾಧ ಕ್ಷಮಾಪಣಾ ಸ್ತೋತ್ರ ಮತ್ತು ಸಂಜೆ 6.30 ರಿಂದ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮಿಗಳಿಂದ ಸನಾತನ ಧರ್ಮ ಮತ್ತು ಶ್ರೀ ಶಂಕರ ಭಗವತ್ಪಾದರು ಕುರಿತು ಉಪನ್ಯಾಸ, ಸ್ಥಳ: ಶ್ರೀ ಶೃಂಗೇರಿ ಶಂಕರ ಮಠ, ಶ್ರೀ ಅಭಿನವ ಶಂಕರಾಲಯ.

■ **ಗಾನಭಾರತಿ :** ವಿದುಷಿ ವಿಪಂಚಿ ಮತ್ತು ವಿದುಷಿ ಮಹತೀ ರಘುರಾಂ ಅವರಿಂದ ಗಾಯನ, ವಿದುಷಿ ಅಮೋಘ್ ನಡಾದೂರ್–ಪಿಟೀಲು, ವಿದ್ವಾನ್ ಪ್ರಣವ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಇಸ್ರೇ :** ನ್ಯಾಷನಲ್ ಎನರ್ಜಿ ಕನ್ಸರ್ವೇಷನ್ ಡೇ ಕುರಿತು ಅನಿಲ್ ಕುಮಾರ್ ನಾಡಿಗೇರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ ; ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಮಹಾರಾಣಿ ಕಾಲೇಜು (ಬೆಂಗಳೂರು) ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್, ಸ್ಥಳ: ಸನಾತನೀ ಸಭಾ, ಜಯನಗರ, ಸಂಜೆ 6.15ರಿಂದ

■ **ವೇಣು ಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ, ತ್ಯಾಗರಾಜ ರಸ್ತೆ, ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮೀಪ, ಸಂಜೆ 6.30ಕ್ಕೆ.

■ **ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ವಿದುಷಿ ಯದುಶ್ರೀ ವೆಂಕಟೇಶ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಶ್ರೀ ರತ್ನತೇಜ–ಪಿಟೀಲು, ವಿದ್ವಾನ್ ಧೀಮಂತ್ ಭಟ್–ಮೃದಂಗ, ಸ್ಥಳ: ಶ್ರೀರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30ಕ್ಕೆ.


ಹಲಗಯ್ಯನಹುಂಡಿ, ಮೈಸೂರು ತಾಲೂಕು.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಪೊಲೀಸ್ ಇಲಾಖೆಯ ಎಸ್. ಲಿಂಗರಾಜು ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಎಂ.ಎಂ. ಮಹದೇವ, ಮುಖ್ಯ ಅತಿಥಿಗಳು : ಮಾದೇವು, ಶ್ರೀಮತಿ ವಡ್ಡಲಗಮ್ಮ ಕರಿವೆಂಕಟಯ್ಯ, ಪಿ. ತಮ್ಮಯ್ಯ, ಶ್ರೀಮತಿ ಮಂಜುಳ ರಂಗಸ್ವಾಮಿ, ಗೋವಿಂದ, ಸ್ಥಳ: ಹಲಗಯ್ಯನಹುಂಡಿ, ಮೈಸೂರು ತಾಲೂಕು, ಸಂಜೆ 6ಕ್ಕೆ

ಬರಡನಪುರ ಗ್ರಾಮ, ಮೈಸೂರು ತಾಲೂಕು.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಬೆಳಗ್ಗೆ 6.30ಕ್ಕೆ ಬರಡನಪುರ ಮಹಾಂತೇಶ್ವರ ಮಠದ ಗಣೇಶ್‌ಮೂರ್ತಿ ಅವರಿಂದ ಧ್ವಜಾರೋಹಣ, ಬೆಳಗ್ಗೆ 10 ರಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ, ಡಿ.ಜಿ. ಸೋಮಶೇಖರಮೂರ್ತಿ ಅವರಿಂದ ಸೇವೆ ಮತ್ತು ಯುವಜನರು ಕುರಿತು ಉಪನ್ಯಾಸ, ಅಧ್ಯಕ್ಷತೆ : ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಂ. ಸವಿತಾ, ಮುಖ್ಯ ಅತಿಥಿಗಳು : ಶ್ರೀಮತಿ ಡಿ.ಆರ್. ಕುಸುಮ, ಶಿವಮಲ್ಲಿಕಾರ್ಜುನ, ಬಿ.ಡಿ. ಶಿವಣ್ಣ, ಶಿವಣ್ಣ, ಸ್ಥಳ: ಬರಡನಪುರ ಗ್ರಾಮ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಎಸ್.ಎನ್. ಸತೀಶ್, ಉಪಕುಲಸಚಿವರು, ಪರೀಕ್ಷಾ ವಿಭಾಗ ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI ಕರ್ನಾಟಕ –ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ – 'ಧೂಮಪಾನ ಆರೋಗ್ಯಕ್ಕೆ ಹಾನಿಕರ' ಕುರಿತು ಶ್ವಾಸಕೋಶ ತಜ್ಞರಾದ ಡಾ. ಆರ್. ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ ನಂತರ 'ಡೀಪ್ ವೇಯ್ನ್ ಥ್ರಾಂಬೋಸಿಸ್' ಕುರಿತು ನರರೋಗ ಮತ್ತು ರಕ್ತನಾಳ ತಜ್ಞರಾದ ಡಾ. ರೂಪಾ ಶೇಷಾದ್ರಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00ಕರ್ನಾಟಕ ಶಾಸ್ತ್ರೀಯ ಸಂಗೀತ : ಆರ್. ಪಾರ್ಥಸಾರಥಿ–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ರಾಷ್ಟ್ರೀಯ ಗೋಕುಲ್ ಮಿಷನ್ ಕುರಿತು ಎನ್.ವಿ. ಫಣೀಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಜಾಂಪಣ್ಣ ಆಶೀಹಾಳ್, 1.20 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು ಎನ್. ಕಾರ್ತಿಕ್–ವೈಯೋಲಿನ್ ವಾದನ, 4.00 ಮಹಿಳಾರಂಗ–ಸಖೀ ಸಂವಾದ–ಹೊಸ ವರ್ಷ 2025ರ ನಿಮ್ಮ ಸಂಕಲ್ಪ ಏನು? ಪ್ರಸ್ತುತಿ : ಸಹನ ಮತ್ತು ಕೀರ್ತನ, 4.30 ವೃತ್ತಿ ಮಾರ್ಗದರ್ಶನ 'ಭಾರತದ ಸಂವಿಧಾನ–ಪ್ರಾಮುಖ್ಯತೆ, ಪ್ರಮುಖ ಅಂಶಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳು' ಕುರಿತು ಮೈಸೂರು ಜಿಲ್ಲೆ ಪಿರಿಯಾಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಗುರುಬಸವರಾಜಸ್ವಾಮಿ ಪಂಡಿತ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು : ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ : ಸಿರಿಧಾನ್ಯ ಮತ್ತು ಸಾವಯವ ಅಂತರಾಷ್ಟ್ರೀಯ ಮೇಳ, ಭಾಗವಹಿಸುತ್ತಾರೆ: ವೈ.ಎಸ್. ಪಾಟೀಲ, ಕೃಷಿ ಆಯುಕ್ತರು, ಕೃಷಿ ಇಲಾಖೆ, 7.20 ಕೃಷಿ ಹಾಡುಗಳು, 7.45 ಕನ್ನಡದಲ್ಲಿ ಭಾಷಣ–87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ರಸಗಳಿಗೆ ಮಾತನಾಡುತ್ತಾರೆ ಡಾ.ಪ್ರದೀಪ್ ಕುಮಾರ್ ಹೆಬ್ರಿ, 8.00 ಸಂಸತ್ ಸಮೀಕ್ಷಾ, 8.15 ರಸಮಂಜರಿ : ಸಂಸ್ಕೃತ ದಿನಪತ್ರಿಕೆಗಳನ್ನು ಕುರಿತು ಮಾತನಾಡುತ್ತಾರೆ ಡಾ. ವಿ.ಡಿ. ಹೆಗಡೆ, ಸಂಸ್ಕೃತ ಗೀತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಎ.ಕಲ್ಯಾಣ ಕೃಷ್ಣ ಭಾಗವತರ್– ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 243 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಕ್ಕರೆ ನಾಡಲ್ಲಿ ಇಂದಿನಿಂದ ಅಕ್ಷರ ಜಾತ್ರೆ

● 3ನೇ ಬಾರಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ● ಯಶಸ್ವಿ ಸಮ್ಮೇಳನಕ್ಕೆ ಮಂಡ್ಯ ಜಿಲ್ಲಾಡಳಿತದಿಂದ ಸಕಲ ವ್ಯವಸ್ಥೆ



ಮಂಡ್ಯ, ಡಿ.19–ಸಕ್ಕರೆ ನಾಡು ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ನಾಳೆ(ಡಿ.20) ಅಪಾರ ಕನ್ನಡಾಭಿಮಾನಿಗಳ ಸಮ್ಮುಖದಲ್ಲಿ ಚಾಲನೆ ದೊರೆಯಲಿದೆ. ಮೂರು ದಿನಗಳ ಕಾಲ ನಡೆಯುವ ಸಮ್ಮೇಳನಕ್ಕೆ ಮಂಡ್ಯ ನಗರದ ಸ್ಯಾಂಜೋ ಆಸ್ಪತ್ರೆ ಹಿಂಭಾಗದ ಮೈದಾನದಲ್ಲಿ ಪ್ರಧಾನ ವೇದಿಕೆ ಹಾಗೂ ಎರಡು ಸಮಾನಾಂತರ ವೇದಿಕೆ ಸಿದ್ಧಗೊಂಡಿದ್ದು, ಸಾರ್ವಜನಿಕರಿಗೆ ಯಾವುದೇ ಸಮಸ್ಯೆಯಾಗದಂತೆ ಎಲ್ಲಾ ಸೌಕರ್ಯವನ್ನು ಒದಗಿಸಲಾಗಿದೆ.

ಮೆರವಣಿಗೆ: ಶುಕ್ರವಾರ (ಡಿ.20)ಬೆಳಗ್ಗೆ 6 ಗಂಟೆಗೆ ಧ್ವಜಾರೋಹಣ ನೆರವೇರಲಿದೆ. 7 ಗಂಟೆಗೆ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರ ಮೆರವಣಿಗೆಯು ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಪ್ರಾರಂಭವಾಗಿ ಮೈಸೂರು–ಬೆಂಗಳೂರು ರಸ್ತೆ ಮಾರ್ಗವಾಗಿ ಸ್ಯಾಂಜೋ ■ 7ನೇ ಪುಟಕ್ಕೆ

> 70–80 ಎಕರೆ ಪ್ರದೇಶದಲ್ಲಿ ಪ್ರಧಾನ ವೇದಿಕೆ ನಿರ್ಮಿಸಲಾಗಿದೆ, ಎರಡು ಸಮಾನಾಂತರ ವೇದಿಕೆ, 60 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. 55 ವಸ್ತುಪ್ರದರ್ಶನ ಮಳಿಗೆಗಳು, 350 ವಾಣಿಜ್ಯ ಮಳಿಗೆ, 450 ಪುಸ್ತಕ ಮಳಿಗೆಗಳು ಕೂಡ ತಲೆ ಎತ್ತಿವೆ. ಊಟಕ್ಕೆ 100 ಕೌಂಟರ್, ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್‌ಗಳನ್ನು ತೆರೆಯಲಾಗಿದ್ದು, ಎಲ್ಲರಿಗೂ ಒಂದೇ ಊಟದ ಮೆನು ಇರಲಿದೆ.





ವಿದ್ಯುತ್ ದೀಪಾಲಂಕಾರದಲ್ಲಿ ಪ್ರಜ್ವಲಿಸುತ್ತಿರುವ ಸಾಹಿತ್ಯ ಸಮ್ಮೇಳನದ ಪ್ರವೇಶದ್ವಾರ. ಬಲಚಿತ್ರದಲ್ಲಿ ಬೃಹತ್ ವೇದಿಕೆಯನ್ನು ಕಾಣಬಹುದು.

ನಾಡೋಜ ಗೊ.ರು.ಚನ್ನಬಸಪ್ಪ ಪುರ ಪ್ರವೇಶ

ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ಸರ್ವಾಧ್ಯಕ್ಷರಿಗೆ ಅದ್ದೂರಿ ಸ್ವಾಗತ

ಮಂಡ್ಯ, ಡಿ.19– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರು, ಜಾನಪದ ವಿದ್ವಾಂಸರು, ನಾಡೋಜ ಗೊ.ರು.ಚನ್ನಬಸಪ್ಪ ಅವರು 'ಸಕ್ಕರೆ ನಾಡು ಜನಪದ ಬೀಡು' ಮಂಡ್ಯಕ್ಕೆ ಇಂದು ಆಗಮಿಸಿದರು. ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಸಮ್ಮೇಳನ ನಡೆಯಲಿರುವ ಸ್ಯಾಂಜೋ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಸಮೀಪ ಗೊ.ರು. ಚನ್ನಬಸಪ್ಪ ಅವರಿಗೆ ಪೂರ್ಣಕುಂಭದೊಂದಿಗೆ ನಾದಸ್ವರ, ಡೊಳ್ಳು ಕುಣಿತ, ಪೂಜಾ ಕುಣಿತ, ನಾನಾ ಜಾನಪದ ಕಲಾತಂಡಗಳೊಂದಿಗೆ ಬರಮಾಡಿಕೊಳ್ಳಲಾಯಿತು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಚಲುವರಾಯಸ್ವಾಮಿ, ಸಮ್ಮೇಳನಾಧ್ಯಕ್ಷರಿಗೆ ಮೈಸೂರು ಮಲ್ಲಿಗೆ ಹಾರ, ಕನ್ನಡದ ಶಾಲು ಹಾಕಿ, ಹೂಗುಚ್ಛ ನೀಡಿ ಸಕಲ ಗೌರವಗಳೊಂದಿಗೆ ಸ್ವಾಗತಿಸಿದರು. ಸಮ್ಮೇಳನಾಧ್ಯಕ್ಷರ ಪುರಪ್ರವೇಶ ವೇಳೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಮಹೇಶ್ ಜೋಶಿ, ಶಾಸಕರುಗಳಾದ ನರೇಂದ್ರಸ್ವಾಮಿ, ರವಿಕುಮಾರ್ ಗಣಿಗ, ರಮೇಶ್‌ಬಾಬು ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷರಾದ ಮೀರಾ ಶಿವ ಲಿಂಗಯ್ಯ ಹೂಗುಚ್ಛ ನೀಡಿ ಸ್ವಾಗತಿಸಿದರು. ಸಮ್ಮೇಳನಾಧ್ಯಕ್ಷರು ಮಂಡ್ಯ ನಗರ ಪ್ರವೇಶಿಸುತ್ತಿದ್ದಂತೆ ಬೆಂಗಳೂರು–ಮೈಸೂರು ರಸ್ತೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಸಮ್ಮೇಳನಾಧ್ಯಕ್ಷರಿಗೆ ಹೂ ನೀಡಿ ಸ್ವಾಗತ ಕೋರಿದರು. ನಂತರ ಜಿಲ್ಲಾಧಿಕಾರಿ ನಿವಾಸಕ್ಕೆ ಕರೆದೊಯ್ದು ಅತಿಥಿ ಸತ್ಕಾರ ನೀಡಲಾಯಿತು.



ನಾಡೋಜ ಗೊ.ರು.ಚನ್ನಬಸಪ್ಪ ಅವರನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ಚಲುವರಾಯಸ್ವಾಮಿ ಅದ್ದೂರಿಯಾಗಿ ಸ್ವಾಗತಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ

ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರ ಜೊತೆಗಿನ ಸಂವಾದವೂ ಸೇರಿದಂತೆ 11 ಗೋಷ್ಠಿಗಳು, 2 ಸಮಾನಾಂತರ ವೇದಿಕೆಗಳಲ್ಲಿ 20 ಗೋಷ್ಠಿಗಳು ನಡೆಯಲಿವೆ. ಸಮ್ಮೇಳನದ ಅಂಗವಾಗಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ, ಅಂಬೇಡ್ಕರ್ ಭವನ, ಸಮಾನಾಂತರ ವೇದಿಕೆ ಮತ್ತು ಪ್ರಧಾನ ವೇದಿಕೆಗಳಲ್ಲಿ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳು ನಡೆಯಲಿವೆ. ಪ್ರಧಾನ ವೇದಿಕೆಯಲ್ಲಿ "ನುಡಿ ಜಾತ್ರೆಯ ಸ್ವರ ಯಾತ್ರೆ" ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಡಿ.20ರ ಮೊದಲ ದಿನ ಸಾಧುಕೋಕಿಲ ಮತ್ತು ರಾಜೇಶ್ ಕೃಷ್ಣನ್ ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.21ರಂದು ಅರ್ಜುನ್ ಜನ್ಯ ಮತ್ತು ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಡಿ.22ರಂದು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಪೊಲೀಸ್ ಬ್ಯಾಂಡ್ ಇರಲಿದೆ.

ಸಮ್ಮೇಳನಕ್ಕೆ ಉಚಿತ ಬಸ್ ವ್ಯವಸ್ಥೆ



ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸುವವರಿಗೆ ಉಚಿತ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಸಮ್ಮೇಳನಕ್ಕೆ ಆಗಮಿಸುವ ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರಿಗೆ ಸಾಕಷ್ಟು ಸಂಖ್ಯೆಯಲ್ಲಿ ಕೆಎಸ್‌ಆರ್‌ಟಿಸಿ ವತಿಯಿಂದ ಬಸ್ ವ್ಯವಸ್ಥೆ ಮಾಡಲಾಗಿದೆ. ಸಮ್ಮೇಳನದ ಮೂರು ದಿನ 7 ತಾಲೂಕು ಕೇಂದ್ರಗಳಿಂದ ಸಮ್ಮೇಳನ ನಡೆಯುವ ಸ್ಥಳಕ್ಕೆ 15 ವಿಶೇಷ ವಾಹನಗಳನ್ನು ಒಳಗೊಂಡಂತೆ 105 ವಿಶೇಷ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಮೈಸೂರು ಮತ್ತು ಬೆಂಗಳೂರಿನಿಂದ ಪ್ರತಿ 30 ನಿಮಿಷಕ್ಕೆ ಒಂದರಂತೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಮಂಡ್ಯ ನಗರದ ವಿವಿಧ ಸ್ಥಳಗಳಿಂದ ■ 7ನೇ ಪುಟಕ್ಕೆ

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಬಗ್ಗೆ ಆಕ್ಷೇಪಾರ್ಹ ಪದ ಬಳಕೆ ಆರೋಪ; ಸುವರ್ಣಸೌಧದಲ್ಲಿ ರಂಪಾಟ, ಆರ್ಭಟ;

ಎಂಎಲ್ಸಿ ಸಿ.ಟಿ.ರವಿ ಬಂಧನ

ಲಕ್ಷ್ಮಿ ಹೆಬ್ಬಾಳ್ಕರ್ ಬೆಂಬಲಿಗರಿಂದ ಸುವರ್ಣಸೌಧದಲ್ಲಿ ದಾಂಧಲೆ; ರವಿ ಮೇಲೆ ಹಲ್ಲೆ ಯತ್ನ

● ಧರಣಿ ವೇಳೆಯೇ ಸಿ.ಟಿ.ರವಿ ಹೊತ್ತೊಯ್ದು ಪೊಲೀಸ್ ವ್ಯಾನ್‌ಗೆ ತುಂಬಿದ ಪೊಲೀಸರು ● ಇಂದು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರು

ಬೆಳಗಾವಿ, (ಸುವರ್ಣಸೌಧ), ಡಿ.19– ಬೆಳಗಾವಿ ಸುವರ್ಣ ಸೌಧದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಆಕ್ಷೇಪಾರ್ಹ ಪದ ಬಳಕೆ ಮಾಡಿದ ಆರೋಪದ ಮೇರೆಗೆ ಬಿಜೆಪಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿ ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ನೀಡಿದ ದೂರಿನನ್ವಯ ಸಿಟಿ ರವಿ ವಿರುದ್ಧ ಬಿಎಸ್‌ಎನ್ 75 ಮತ್ತು 79ರಡಿ ಪ್ರಕರಣ ದಾಖಲಾಗಿತ್ತು ಈ ಹಿನ್ನೆಲೆಯಲ್ಲಿ ಸುವರ್ಣ ಸೌಧದಲ್ಲಿ ಸಿ.ಟಿ.ರವಿ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪೊಲೀಸರು ಸಿ.ಟಿ.ರವಿ ಅವರನ್ನು ಬಂಧಿಸಲು ಬಂದಾಗ ಬಿಜೆಪಿ ನಾಯಕರು ಪ್ರತಿಭಟನೆ ನಡೆಸುತ್ತಿದ್ದರು.

> ನನಗೆ ಲಕ್ಷ್ಮಿ ಹೆಬ್ಬಾಳ್ಕರ್, ಡಿ.ಕೆ.ಶಿವಕುಮಾರ್ ಬೆದರಿಕೆ ಹಾಕಿದ್ದಾರೆ. ನನ್ನ ಏಕೆ ಬಂಧಿಸಿದ್ದಾರೆ ಎಂಬುದು ಇನ್ನು ಅರ್ಥವಾಗಿಲ್ಲ.
> –ಸಿ.ಟಿ.ರವಿ



ಸಿ.ಟಿ.ರವಿಯನ್ನು ಎತ್ತಿ ವ್ಯಾನಿಗೆ ತುಂಬುತ್ತಿರುವ ಪೊಲೀಸರು.

ಈ ವೇಳೆ ಸುವರ್ಣ ಸೌಧದ ಮೆಟ್ಟಿಲ ಮೇಲೆ ದೊಡ್ಡ ಹೈಡ್ರಾಮಾವೇ ನಡೆಯಿತು. ಸಿ.ಟಿ.ರವಿ ಅವರನ್ನು ಮೇಲೆತ್ತಿಕೊಂಡ ಪೊಲೀಸರು ಬಿಗಿ ಭದ್ರತೆ ನಡುವೆ ಪೊಲೀಸ್ ವಾಹನಕ್ಕೆ ತುಂಬಿಕೊಂಡು ತೆರಳಿದ್ದಾರೆ. ಈ ವೇಳೆ ಬಿಜೆಪಿ ನಾಯಕರು ಹಾಗೂ ಸಿ.ಟಿ.ರವಿ 'ಜೈಭೀಮ್' ಹಾಗೂ 'ಅಂಬೇಡ್ಕರ್ ಜಿಂದಾಬಾದ್' ಘೋಷಣೆ ಕೂಗಿದ್ದಾರೆ. ಬಿಜೆಪಿ ನಾಯಕರಿಗೆ ರಕ್ಷಣೆ ನೀಡದ ಸರ್ಕಾರ ಎಂದು ಆಕ್ರೋಶ ಹೊರಹಾಕಿದ್ದಾರೆ. ಜೊತೆಗೆ ಪೊಲೀಸರ ವಾಹನ ಅಡ್ಡಗಟ್ಟಿ ಪ್ರತಿಭಟನೆ ನಡೆಸಿದ್ದಾರೆ. ಆದರೆ ಪೊಲೀಸರು ಪ್ರತಿಭಟನಾನಿರತ ಬಿಜೆಪಿ ನಾಯಕರನ್ನು ತಳ್ಳಿ ■ 7ನೇ ಪುಟಕ್ಕೆ



ಸಿ.ಟಿ.ರವಿ ಮೇಲೆ ಹಲ್ಲೆಗೆ ಮುಂದಾಗಿರುವ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಬೆಂಬಲಿಗರು.

ಲಕ್ಷ್ಮಿ ವಿರುದ್ಧ ರವಿ ಪ್ರತಿದೂರು

ಖಾನಾಪುರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಪ್ರತಿದೂರು ದಾಖಲಿಸಿದ್ದಾರೆ. ಲಕ್ಷ್ಮಿ ಹೆಬ್ಬಾಳ್ಕರ್ ಅವರು ಸದನದಲ್ಲೇ ನನಗೆ 'ಕೊಲೆಗಡುಕ' ಎಂದು ನಿಂದನೆ ಮಾಡಿದ್ದಾರೆ. ಅವರ ಬೆಂಬಲಿಗರನ್ನು ಸುವರ್ಣಸೌಧಕ್ಕೆ ನುಗ್ಗಿಸಿ ಕೊಲೆ ಮಾಡಲು ಯತ್ನಿಸಿದ್ದಾರೆ ಎಂದು ಆರೋಪಿಸಿ ಖಾನಾಪುರ ಪಟ್ಟಣ ಠಾಣೆಯಲ್ಲಿ ಗುರುವಾರ ರಾತ್ರಿ ಅವರು ತಮ್ಮ ದೂರು ದಾಖಲಿಸಿದ್ದಾರೆ. 'ಅಶ್ಲೀಲ' ಪದ ಬಳಕೆ ಮಾಡಿ ನಿಂದಿಸಿದ್ದಾರೆ ಎಂದು ಆರೋಪಿಸಿ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಹಿರೇಬಾಗೇವಾಡಿ ಠಾಣೆಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಸಿ.ಟಿ.ರವಿ ಅವರನ್ನು ವಶಕ್ಕೆ ಪಡೆದ ಅಲ್ಲಿನ ಪೊಲೀಸರು, ಸುರಕ್ಷತೆಯ ದೃಷ್ಟಿಯಿಂದ ಖಾನಾಪುರ ಠಾಣೆಗೆ ಕರೆತಂದರು. ಹಾಗಾಗಿ ಸಿ.ಟಿ.ರವಿ ಅದೇ ಠಾಣೆಯಲ್ಲಿ ಪ್ರತಿ ದೂರು ನೀಡಿದರು.

ವಿಪಕ್ಷ ನಾಯಕ ಆರ್.ಅಶೋಕ್, ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ವಿಠ್ಠಲ ಹಲಗೇಕರ, ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸುಭಾಷ ಪಾಟೀಲ, ಮಾಜಿ ಶಾಸಕ ಅಂಜಯ ಪಾಟೀಲ ಮತ್ತಿತರರು ತಡರಾತ್ರಿವರೆಗೂ ಠಾಣೆಯಲ್ಲೇ ಇದ್ದರು.

ಡಾ.ಅಂಬೇಡ್ಕರ್ ಕುರಿತು ಸಂಸತ್‌ನಲ್ಲಿ ಅಮಿತ್ ಶಾ ಹೇಳಿಕೆ ಪ್ರತಿಧ್ವನಿ

ವಿಧಾನಮಂಡಲದ ಉಭಯ ಸದನಗಳಲ್ಲೂ ಕೋಲಾಹಲ; ಆಡಳಿತ–ವಿಪಕ್ಷ ಸದಸ್ಯರ ನಡುವೆ ವಾಕ್ಸಮರ



ಬೆಳಗಾವಿ, ಡಿ.19(ಕೆಎಂಶಿ)–ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿದ ಹೇಳಿಕೆ ಕರ್ನಾಟಕ ವಿಧಾನಮಂಡಲದಲ್ಲೂ ಇಂದು ಕೋಲಾಹಲಕ್ಕೆ ಕಾರಣವಾಯಿತು.

ಬಳ್ಳಾರಿ ಮತ್ತು ರಾಜ್ಯದ ಇತರೆಡೆ ಬಾಣಂತಿಯರ ಸಾವು ಕುರಿತ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡುತ್ತಿದ್ದಾಗ, ಕಾಂಗ್ರೆಸ್‌ನ ಎಚ್.ಸಿ.ಬಾಲಕೃಷ್ಣ ಮಧ್ಯಪ್ರವೇಶಿಸಿ, ನಿರ್ಣಯ ಮಂಡಿಸಲು ಬಯಸುವುದಾಗಿ ಹೇಳಿದಾಗ ಕೂಡಲೇ ಹಲವು ಕಾಂಗ್ರೆಸ್ ಶಾಸಕರು ಎದ್ದು ನಿಂತು, ಅಂಬೇಡ್ಕರ್ ಭಾವಚಿತ್ರ ಪ್ರದರ್ಶಿಸಿ ಘೋಷಣೆ ಕೂಗಿದರು. ಸದನದಲ್ಲಿ 'ಜೈ ಭೀಮ್', 'ನಮಗೆ ನ್ಯಾಯ ಬೇಕು' ಮತ್ತು 'ಅಮಿತ್ ಶಾ ಅವರನ್ನು ಸಂಪುಟದಿಂದ ಕೈಬಿಡಿ' ಘೋಷಣೆಗಳು ಕೇಳಿಬಂದವು, ಗದ್ದಲ ಹೆಚ್ಚಾದಾಗ ಸ್ಪೀಕರ್ ಯು.ಟಿ. ಖಾದರ್ ಕಲಾಪವನ್ನು ಕೆಲಕಾಲ ಮುಂದೂಡಬೇಕಾಯಿತು. ಕಲಾಪ ಮುಂದೂಡಿದ ನಂತರವೂ ಆಡಳಿತ ಪಕ್ಷದ ಸದಸ್ಯರು, ಸಚಿವರು, ಸಭಾಧ್ಯಕ್ಷರ ಪೀಠದ ಮುಂದೆ ಧಾವಿಸಿ ಭಾವಚಿತ್ರಗಳನ್ನು ಹಿಡಿದು, ಆರ್‌ಎಸ್‌ಎಸ್ ಹಾಗೂ ಅಮಿತ್ ಶಾ ವಿರುದ್ಧ ಏರುಧ್ವನಿಯಲ್ಲಿ ಘೋಷಣೆಗಳನ್ನು ಕೂಗಿದರು. ಈ ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನದಲ್ಲಿ ಕುಳಿತು ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ಪ್ರದರ್ಶಿಸಿ, ಅಮಿತ್ ಶಾ ಹೇಳಿಕೆ ವಿರೋಧಿಸಿ ಘೋಷಣೆ ಕೂಗಿದ್ದು, ಆಡಳಿತ ಪಕ್ಷದ ಸದಸ್ಯರಿಗೆ ಮತ್ತಷ್ಟು ಹುರುಪು ನೀಡಿದಂತಾಯಿತು. ಈ ಹಂತದಲ್ಲಿ ಬಿಜೆಪಿಯ ಗುರುರಾಜ್ ಗಂಟಿಹೊಳೆಯೂ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಪ್ರದರ್ಶಿಸಿ, ನಾವೂ ಡಾ.ಅಂಬೇಡ್ಕರ್ ಅಭಿಮಾನಿಗಳು ಕಾಂಗ್ರೆಸ್‌ನವರಿಂದಲೇ ಅಂಬೇಡ್ಕರ್ ಅವರಿಗೆ ಅನ್ಯಾಯವಾಗಿದೆ ಎಂದಿದ್ದು, ಆಡಳಿತ ಪಕ್ಷದ ಸದಸ್ಯರ ಸಿಟ್ಟಿಗೆ ಕಾರಣವಾಗಿ ಅವರೆಲ್ಲಾ ಒಮ್ಮೆಗೇ ಗುರುರಾಜ್ ಗಂಟಿಹೊಳೆ ಜೊತೆ ಸಂಘರ್ಷಕ್ಕೆ ಇಳಿದರು. ಸಚಿವ ಭೈರತಿ ಸುರೇಶ್ ಹಾಗೂ ಗಂಟಿಹೊಳೆ ಇಬ್ಬರೂ ಏಕವಚನದಲ್ಲೇ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡುತ್ತಾ, ನಿಂದನೆಯಲ್ಲಿ ತೊಡಗಿದಾಗ, ಯಾರು ಏನು ಹೇಳುತ್ತಿದ್ದಾರೆ ಎಂಬುದೇ ಕೇಳದಾಯಿತು. ಸಭಾಧ್ಯಕ್ಷರು ಕಲಾಪ ■ 7ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾವ ಹಕ್ಕಿಗೆ ಹಾರಲು ಸಾಧ್ಯವಿಲ್ಲ.
ಗುಂಡ : ಸತ್ತ ಹಕ್ಕಿಗೆ ಸಾರ್!

ಮೈಸೂರು ಮಿತ್ರ
ಶುಕ್ರವಾರ, 20 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕಳವು ಮಾಡಲೂ ಅವಕಾಶ ಸಿಗದವರೆಲ್ಲರೂ ಅನಿವಾರ್ಯ ಪ್ರಾಮಾಣಿಕರು. –ಮುನಿಶ್ರೀ ತರುಣ್ ಸಾಗರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆಯೆಂಬ ಮರ ಮುರಿಯಬಾರದು, ಮನಸ್ಸೆಂಬ ಮಾರ್ಗ ಕತ್ತರಿಸಬಾರದು.

ನಿಮ್ಮ ಪತ್ರಗಳು

ಒಂದು ದೇಶ ಒಂದು ಚುನಾವಣೆ: ಒಮ್ಮತ ಮೂಡಲಿ

ಮಾನ್ಯರೆ,

ಕೇಂದ್ರ ಸರ್ಕಾರದ ಮಹತ್ವದ ನಿರ್ಣಯಗಳಲ್ಲಿ ಒಂದಾದ 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವನೆಗೆ ಮೋದಿ ನೇತೃತ್ವದ ಸಚಿವ ಸಂಪುಟ ಅನುಮೋದನೆ ನೀಡಿ, ಇದಕ್ಕೆ ಈಗಾಗಲೇ ಲೋಕಸಭೆಯಲ್ಲಿ 269 ಪರ ಹಾಗೂ 198 ವಿರುದ್ಧ ಮತಗಳು ದೊರಕಿದೆ. ಲೋಕಸಭೆ ಮತ್ತು ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾವಣೆಯನ್ನು ಒಂದೇ ಬಾರಿ ನಡೆಸುವ ಮಹತ್ವದ ಯೋಜನೆ ಇದಾಗಿದ್ದು, ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್ ಸೇರಿದಂತೆ ಕೆಲ ವಿಪಕ್ಷಗಳು ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಇದು ಅಸಂವಿಧಾನಿಕ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಮತ್ತು ಸಂವಿಧಾನದ ಮೂಲ ರಚನೆಯನ್ನು ಉಲ್ಲಂಘಿಸುತ್ತದೆ ಎಂದು ವಿರೋಧ ಹಾಗೂ ಆತಂಕವನ್ನು ಸಹಜವಾಗಿ ವ್ಯಕ್ತಪಡಿಸಿವೆ.

ಲೋಕಸಭೆಗೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಭಾರತಕ್ಕೆ ಹೊಸತೇನಲ್ಲ. ಸ್ವತಂತ್ರ ಭಾರತದ ಮೊದಲ ಎರಡು ಸಾರ್ವತ್ರಿಕ ಚುನಾವಣೆಗಳ ಜತೆಯಲ್ಲೇ ರಾಜ್ಯ ವಿಧಾನಸಭೆಗಳಿಗೂ ಚುನಾವಣೆಗಳು ಈ ಹಿಂದೆ ನಡೆದಿದ್ದವು. ಈಗ ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಪ್ರಸ್ತಾಪ ಮತ್ತೆ ಮುನ್ನಲೆಗೆ ಬಂದಿದ್ದು ಅದಕ್ಕೆ ಪೂರಕವಾಗಿ ಸಂಸತ್ತಿನಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ಬಿಸಿ ಬಿಸಿ ಚರ್ಚೆ ಆರಂಭವಾಗಿದೆ. ಏಕಕಾಲದ ಚುನಾವಣೆಗಳ ಒಂದು ಪ್ರಯೋಜನವೆಂದರೆ ಆರ್ಥಿಕ ಉಳಿತಾಯ. ಒಂದು ದೇಶ ಒಂದು ಚುನಾವಣೆಯ ಯೋಜನೆಯು ಪ್ರತಿ ವರ್ಷ ವಿವಿಧ ಬಾರಿ ಭದ್ರತಾ ಪಡೆಗಳು ಮತ್ತು ಚುನಾವಣಾ ಅಧಿಕಾರಿಗಳನ್ನು ನಿಯೋಜಿಸುವ ವೆಚ್ಚವನ್ನು ಕಡಿತಗೊಳಿಸುತ್ತದೆ. ಈ ರೀತಿಯ ಯೋಜನೆಯು ರಾಜಕೀಯ ಪಕ್ಷಗಳ ನೇತೃತ್ವದ ಪ್ರಚಾರಗಳಿಂದ ಉಂಟಾಗುವ ವೆಚ್ಚವನ್ನು ಕಡಿತಗೊಳಿಸುತ್ತದೆ. ಆದಾಗ್ಯೂ, ಸಾಂವಿಧಾನಿಕ ಬದಲಾವಣೆಗಳು, ವ್ಯವಸ್ಥಾಪನಾ ಸಮಸ್ಯೆಗಳು ಮತ್ತು ಪ್ರಾದೇಶಿಕ ಪ್ರಾತಿನಿಧ್ಯದ ಬಗ್ಗೆ ರಾಜಕೀಯ ವಿರೋಧಗಳು ಇದರಲ್ಲಿ ಸೇರಿವೆ. ಇದನ್ನು ಜಾರಿ ಮಾಡುವ ಮುನ್ನ ಚುನಾವಣಾ ಚಕ್ರಗಳನ್ನು ಮರು ಹೊಂದಾಣಿಕೆ ಮಾಡುವ ಹಾಗೂ ಇದಕ್ಕೆ ಕಾನೂನುಬದ್ಧವಾಗಿ ಸಮರ್ಥನೀಯ ಚೌಕಟ್ಟನ್ನು ನೀಡುವ ಅವಶ್ಯಕತೆಯಿದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ, ಪ್ರಜಾಪ್ರಭುತ್ವದಿಂದ ಮೇಲೆ ಪರ ವಿರೋಧ ಬರುವುದು ಕೂಡ ಸಹಜ. ಇದು ಜಾರಿಯಾದರೆ ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಧಕ್ಕೆ ಉಂಟಾಗಬಹುದು ಎಂಬ ವಿರೋಧ ಪಕ್ಷಗಳ ಆತಂಕಕ್ಕೆ ಕೇಂದ್ರ ಸರ್ಕಾರದಿಂದ ಸೂಕ್ತ ಉತ್ತರ ದೊರೆಯಬೇಕಿದೆ. ಅಗತ್ಯ ಅನಿಸಿದರೆ ಕೇಂದ್ರ ಸರ್ಕಾರ ಈ ವಿಷಯದ ಬಗ್ಗೆ ಇನ್ನೊಮ್ಮೆ ಸರ್ವಪಕ್ಷಗಳ ಸಭೆಯನ್ನು ಕರೆದು ಚರ್ಚಿಸಿ ಅವರ ವಿಶ್ವಾಸವನ್ನು ಪಡೆದು ತದನಂತರ ಈ ಯೋಜನೆಯನ್ನು ಸರ್ವಾನುಮತದಿಂದ ಅನುಷ್ಠಾನಕ್ಕೆ ತರುವುದು ಅಗತ್ಯವಾಗಿದೆ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ರೈಲ್ವೆ ಇಲಾಖೆ ಅಧಿಕಾರಿಗಳ ಗಮನಕ್ಕೆ

ಮಾನ್ಯರೆ,



ಮೈಸೂರಿನಿಂದ ಬೆಂಗಳೂರಿಗೆ ಪ್ರತಿನಿತ್ಯ ಬೆಳಗ್ಗೆ 8.20ಕ್ಕೆ ಹೊರಡುವ ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲು ಗಾಡಿಯ (ಎಂ.ಜಿ.ಆರ್. ಚೆನ್ನೈ ಸೆಂಟ್ರಲ್), ಪ್ರಯಾಣ ದರ ಒಬ್ಬರಿಗೆ 80 ರೂಪಾಯಿ ಇದೆ. ಬೆಳಿಗ್ಗೆ 6.40ಕ್ಕೆ ಹೊರಡುವ ಚಾಮುಂಡಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಒಬ್ಬರಿಗೆ 65 ರೂಪಾಯಿ ಇದೆ. ಈ ಎರಡು ರೈಲುಗಳು ಬೆಂಗಳೂರನ್ನು ತಲುಪಲು ತೆಗೆದುಕೊಳ್ಳುವ ಸಮಯ ಸುಮಾರು 2 ಗಂಟೆ 30 ನಿಮಿಷಗಳು. ಮಾಲ್ಗುಡಿ ಎಕ್ಸ್‌ಪ್ರೆಸ್ ಪಾಂಡವಪುರ ಸೇರಿದಂತೆ ಎಲ್ಲಾ ರೈಲ್ವೆ ಸ್ಟೇಷನ್ ಗಳಲ್ಲಿ ನಿಂತು ಹೊರಡುತ್ತದೆ. ಇದು ಎಕ್ಸ್‌ಪ್ರೆಸ್ ಎಂದು ಹೇಳಿ 15 ರೂಪಾಯಿಗಳನ್ನು ಹೆಚ್ಚಿಗೆ ತೆಗೆದುಕೊಳ್ಳುವುದು ರೈಲ್ವೆ ಇಲಾಖೆಯ 'ಹಗಲು ದರೋಡೆ'ಯಲ್ಲವೇ? ಇದನ್ನು ಪ್ರಯಾಣಿಕರು ಯಾರೂ ಪ್ರಶ್ನಿಸುವುದಿಲ್ಲವೆಂದು ರೈಲ್ವೆ ಇಲಾಖೆಯ ಜಾಣತನವೇ? ಅಲ್ಲದೇ ಮಾಲ್ಗುಡಿ ಎಕ್ಸ್‌ಪ್ರೆಸ್ ಪ್ರತಿ ರೈಲ್ವೇ ಸ್ಟೇಷನ್‌ನಿಂದ ಹೊರಡುವ ಮುನ್ನ ದಡ್ ದಡ್ (ಜರ್ಕಿ ಹೊಡೆಯುವುದು) ಎಂಬ ಶಬ್ದ ಬರುತ್ತದೆ. ಇದರಿಂದಾಗಿ ಪ್ರಯಾಣಿಕರು ಒಂದು ರೀತಿಯ ಭಯದ ವಾತಾವರಣದಲ್ಲೇ ಪ್ರಯಾಣ ಮಾಡಬೇಕಾಗುತ್ತದೆ. ಇದು ರೈಲ್ವೇ ಇಲಾಖೆಯ ನಿರ್ಲಕ್ಷ್ಯತನವನ್ನು ತೋರಿಸುತ್ತದೆ. ರೈಲ್ವೆ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಕಾಫಿಯ ಘಮಲು, ಸಕ್ಕರೆಯ ಅಕ್ಕರೆ

ಮಾನ್ಯರೆ,

ಕಾಫಿಯ ಘಮಲಿನ ಚಿಕ್ಕ
ಮಗಳೂರಿಂದ, ಕಬ್ಬಿನ
ನಾಡಿನ ಸಕ್ಕರೆ ನಗರಿಗೆ, ಕನ್ನಡದ
ಕಂಪಿನ, 87ರ ಪ್ರಾಯದ ಸಾಹಿತ್ಯ
ಸಮ್ಮೇಳನದ ಕಂಪನು ಮೊಳಗಿಸಲು
ಬಂದಿಹರು, 94ರ ಹರೆಯದ
ಗೊ.ರು.ಚ....
ನಾಡಿನ ಮೂಲೆ ಮೂಲೆಗಳಿಂದ
ಬರುವರು ಕನ್ನಡ ಪ್ರೇಮಿಗಳು,
ಸಕ್ಕರೆ ಬೆರೆಸಿದ ಅಕ್ಕರೆಯ
ಕನ್ನಡದ ಕಾಫಿಯ ಸವಿಯಲು...
ಸಾಹಿತ್ಯದ ಬೆಲ್ಲದ
ಹೋಳಿಗೆ ಸವಿಯಲು...
ಉಚಿತ ಬಸ್ಸಿನಲ್ಲಿ.. ಕನ್ನಡದ ನುಡಿ ಜಾತ್ರೆ
ಆಗುವುದು.. ಎಂದಿನಂತೆ ಕೊನೆಗೆ
ಊಟದ ಜಾತ್ರೆ....!!!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಕನ್ನಡದ ಕೆನೆ ಇರುವುದೇ ನಮ್ಮ ಮಂಡ್ಯದಲ್ಲಿ....

–ಗೊ.ರು.ಚನ್ನಬಸಪ್ಪ



ಸಕ್ಕರೆ ನಾಡು ಮಂಡ್ಯ ಈವರೆಗೆ ಮೂರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಂಡಿದೆ. 1974ರ ಮೇ 31, ಜೂನ್ 1, 2ರಂದು ನಡೆದಿದ್ದ 48ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಯದೇವಿ ತಾಯಿ ಲಿಗಾಡೆ ಸಮ್ಮೇಳನಾಧ್ಯಕ್ಷರಾಗಿದ್ದರು. ನಂತರ 1994ರಲ್ಲಿ ಎರಡನೇ ಬಾರಿ ನಡೆದ ಸಮ್ಮೇಳನದಲ್ಲಿ ಚದುರಂಗ ಸಮ್ಮೇಳನಾಧ್ಯಕ್ಷರಾಗಿದ್ದರು. ಇದೀಗ ಮೂರನೇ ಬಾರಿಗೆ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾಡಿನ ಹಿರಿಯ ಸಾಹಿತಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಹಾಗೂ ಜಾನಪದ ತಜ್ಞ ಗೊ.ರು.ಚನ್ನಬಸಪ್ಪ ಸರ್ವಾಧ್ಯಕ್ಷರಾಗಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ ಉತ್ಸವಕ್ಕೆ ಅಕ್ಕರೆಯ ಸಕ್ಕರೆ ನಾಡು ಸಜ್ಜಾಗಿದೆ. ಸಮ್ಮೇಳನ ಸರ್ವಾಧ್ಯಕ್ಷರಾಗಿರುವ ಗೊ.ರು.ಚನ್ನಬಸಪ್ಪ ಅವರು 'ಮೈಸೂರು ಮಿತ್ರ'ನೊಂದಿಗೆ ಹಿಂದಿನ ಹಾಗೂ ಹಾಲಿ ಉತ್ಸವದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

ಸಂದರ್ಶನ: ಎಂ.ಕೆ.ಮೋಹನ್‌ರಾಜ್

ಮೈಸೂರು ಮಿತ್ರ: ಶಾಲಾ ಶಿಕ್ಷಕರಾಗಿ, ತಾಲೂಕು ಮಟ್ಟದ ಅಧಿಕಾರಿಯಾಗಿದ್ದ ನಿಮ್ಮ ಜೀವನ ಪಯಣ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗುವವರೆಗೆ ಸಾಗಿತು. ಈ ಸುದೀರ್ಘ ಹಾದಿಯ ಬಗ್ಗೆ ತಮ್ಮ ಅನಿಸಿಕೆಗಳೇನು?

ಗೊ.ರು.ಚನ್ನಬಸಪ್ಪ: ಸಾಹಿತ್ಯ ಪ್ರತಿಭೆ ಕೆಲವರಿಗೆ ಹುಟ್ಟುತ್ತಾ ಬಂದಿರುತ್ತದೆ. ತಮ್ಮ ತಂದೆಗೆ ಪುಸ್ತಕ ಓದುವ ಹವ್ಯಾಸವಿತ್ತು. ಆ ಕಾಲದಲ್ಲಿ ಅವರು ಪುರಾಣಗಳನ್ನು ಬರೆಯುತ್ತಿದ್ದರು. ಹಸ್ತಪ್ರತಿ ಮೂಲಕ ಬರೆಯುವ ಆಸಕ್ತಿ ಹೊಂದಿದ್ದರು. ಕೆಲ ಸಾಹಿತ್ಯಾಸಕ್ತರು ತಮ್ಮ ತಂದೆಯ ಬಳಿ ಇದ್ದ ಪುರಾಣಗಳನ್ನು ಸಂಗ್ರಹಿಸಿ, ಪುಸ್ತಕಗಳನ್ನು ಮುದ್ರಿಸಿದರು. ಅವರ ಬರವಣಿಗೆಯ ಆಸಕ್ತಿಯಿಂದ ಆ ಸಂಸ್ಕಾರ ನಮಗೂ ಬಂತು.

ನಾನು ಶಾಲಾ ಅಧ್ಯಾಪಕನಾದೆ, ಗ್ರಂಥಗಳನ್ನು ಓದುವುದು ರೂಢಿಯಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲೂ ಭಾಗಿಯಾದೆ. ಶಾಲೆಯಲ್ಲಿ ಮಕ್ಕಳಿಗೆ ಹೇಳಿಕೊಡುವ ರೀತಿ, ಇನ್ನಿತರೆ ಚಟುವಟಿಕೆಗಳಲ್ಲಿ ಮಕ್ಕಳೂ ಪಾಲ್ಗೊಳ್ಳುವ ರೀತಿ ಪ್ರೇರೇಪಿಸಿದ್ದರಿಂದ ಹಿರಿಯ ಅಧಿಕಾರಿಗಳ ಗಮನ ನನ್ನ ಮೇಲೆ ಬಿತ್ತು. ಈ ನಿಟ್ಟಿನಲ್ಲಿ ಪ್ರತಿಭಾವಂತ ಶಿಕ್ಷಕರನ್ನು ಸಮಾಜ ಶೈಕ್ಷಣಿಕ ಅಧಿಕಾರಿಯನ್ನಾಗಿ ನೇಮಕ ಮಾಡಬೇಕೆಂದು ಆಗಿನ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದರಿಂದ ಸರ್ಕಾರ ನನ್ನನ್ನು ನೇಮಕ ಮಾಡಿತು.


ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದಾಗ ಮಂಡ್ಯ ಮೂಲದ ಹೆಚ್.ಎಲ್.ನಾಗೇಗೌಡರು ನನ್ನ ಪ್ರತಿಭೆಯನ್ನು ಗುರುತಿಸಿದರು. ನಮಗೆ ಅವಕಾಶ ಕಲ್ಪಿಸಿಕೊಟ್ಟರು. ಸಮಾಜ ಶಿಕ್ಷಣಾಧಿಕಾರಿಯಾಗಿದ್ದ ನನ್ನನ್ನು ನೇರ ಡಿಸಿ ಕಚೇರಿಗೆ ವರ್ಗಾಯಿಸಿದರು. ಅಲ್ಲಿ 'ವಿಕಾಸವಾಣಿ' ಎಂಬ ಪತ್ರಿಕೆ ಆರಂಭಿಸಿ, ಆ ಪತ್ರಿಕೆ ಸಂಪಾದಕನಾಗಿದ್ದೆ. ನಾಗೇಗೌಡರಿಗೆ ಜಾನಪದದ ಬಗ್ಗೆ ಬಹಳ ಆಸಕ್ತಿ ಇತ್ತು. ಹಾಗಾಗಿ ನನ್ನ ಅವರ ಸಂಬಂಧ ಗಟ್ಟಿಯಾಗತೊಡಗಿತು. ತರೀಕೆರೆಯಲ್ಲಿ ಕೆ.ಆರ್.ಲಿಂಗಪ್ಪ ಎಂಬ ನ್ಯಾಯವಾದಿಗಳಿದ್ದರು. ಅವರು ಜಾನಪದ ಗಾಯಕರು ಸಹ ಆಗಿದ್ದರು. ಅವರ ಜಾನಪದ ಗೀತೆಗಳು ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಆಗ ನಾನು ಜಾನಪದ ಗೀತೆಗಳ ಸಂಗ್ರಹ, ಗಾಯಕರೊಂದಿಗೆ ಪಾಲ್ಗೊಳ್ಳಲು ಆರಂಭಿಸಿದೆ. ರಾಜ್ಯ ಸರ್ಕಾರ ನನ್ನನ್ನ ವಾರ್ತಾ ಇಲಾಖೆಯಲ್ಲಿ ಪಂಚಾಯತ್ ರಾಜ್ ಹಾಗೂ ಜಾನಪದ ಪತ್ರಿಕೆಯ ಸಂಪಾದಕನಾಗಿ ನೇಮಿಸಿತು. ವಿಶ್ವ ಬ್ಯಾಂಕಿನ ಪ್ರಕಟಣೆ ವಿಭಾಗದ 'ಕುಟುಂಬ' ಪತ್ರಿಕೆಯ ಸಂಪಾದಕನಾಗಿಯೂ ಹತ್ತಾರು ವರ್ಷ ಕಾರ್ಯನಿರ್ವಹಿಸಿ, ಬಳಿಕ ನಿವೃತ್ತಿಯಾದೆ. ಈ ಅವಧಿಯಲ್ಲಿ ಅನೇಕ ಸಾಹಿತಿ, ವಿದ್ವಾಂಸರ ಪರಿಚಯವಾಗಿ ನಾನು ಸಾಹಿತ್ಯ ಕ್ಷೇತ್ರಕ್ಕೆ ಬಂದೆ.

ಮಿತ್ರ: 30 ವರ್ಷಗಳ ಹಿಂದೆ ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ ನಡೆದಿತ್ತು. ಆಗ ನೀವೇ ಕಸಾಪ ರಾಜ್ಯಾಧ್ಯಕ್ಷರಾಗಿದ್ದಿರಿ. ಈಗ ಅದೇ ಮಂಡ್ಯದಲ್ಲಿ ನಡೆಯುತ್ತಿರುವ ಸಮ್ಮೇಳನಕ್ಕೆ ನೀವೇ ಸರ್ವಾಧ್ಯಕ್ಷರು. ಹಾಲಿ ಈ ಸಮ್ಮೇಳನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಗೊರುಚ: ಕೇಂದ್ರ ಕಸಾಪ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಮಂಡ್ಯದಲ್ಲಿ 1994ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಚದುರಂಗ ಸಮ್ಮೇಳನಾಧ್ಯಕ್ಷರಾಗಿದ್ದರೆ, ಜಿ.ಮಾದೇಗೌಡರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಜಿಲ್ಲೆಯ ಜನರ ಸಾಹಿತ್ಯಿಕ ವಾತಾವರಣ, ಸಮ್ಮೇಳನ ಯಶಸ್ಸಿಗೆ ಕಾರಣವಾಯಿತು. ಆ ಸಂದರ್ಭದಲ್ಲಿ ಜನರ ಸಹಕಾರವನ್ನು ನೆನಪಿಸಿಕೊಳ್ಳಬೇಕು. ಕಳೆದ 30 ವರ್ಷದಲ್ಲಿ ಲೋಕದ ವ್ಯವಹಾರವೇ ಬದಲಾದ ಮೇಲೆ ಸಾಹಿತ್ಯವು ಬದಲಾವಣೆಯಾಗಬೇಕಲ್ಲವೇ?. ಸಾಹಿತ್ಯವು ಜನರ ಬದುಕಿನ ಪ್ರತಿಬಿಂಬವಾಗಿದೆ. ಹೊಸ ಹೊಸ ಪ್ರಯೋಗಗಳು ಸಾಹಿತ್ಯ ಲೋಕದಲ್ಲಿ ನಡೆಯುತ್ತಿವೆ. ಪ್ರಾಚೀನ ಭಾಷಾ ಶೈಲಿಗೂ, ಇಂದಿನ ಶೈಲಿಗೂ ವ್ಯತ್ಯಾಸವಿದೆ. ಬದುಕಿಗೆ ಸಹಕಾರಿಯಾಗುವ ಸಾಹಿತ್ಯ ಈಗ ರಚನೆಯಾಗುತ್ತಿದೆ. ಇಂದಿನ ಯುವ ಸಾಹಿತಿಗಳು ಒಳ್ಳೆಯ ಸಾಹಿತ್ಯವನ್ನು ರಚಿಸುತ್ತಿರುವುದು ನಿಜಕ್ಕೂ ಶ್ಲಾಘನೀಯದ ಸಂಗತಿ. ಈ ನಡುವೆ ಹಲವು ಕೃತಿಗಳು ಹೊರ ಬಂದಿವೆ. ಕನ್ನಡ ಕಟ್ಟುವ ಕೆಲಸಗಳು ಭರದಿಂದ ಸಾಗಿದೆ.

ಮಿತ್ರ: ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಗೆ ನೀವೇ ಪ್ರೇರಕರಲ್ಲವೇ?

ಗೊರುಚ: ಜಾನಪದ ಎಂಬುದು ಪ್ರತಿ ದೇಶದ ಮೂಲ ಸಂಸ್ಕೃತಿ. ಯಾವೊಂದು ದೇಶದ ಬೆಳವಣಿಗೆಯೂ ಸಹ ಸಂಸ್ಕೃತಿ ಮೇಲೆ ನಿಂತಿರುತ್ತದೆ. ನಾನು ಹಳ್ಳಿಯ ವಾತಾವರಣದಿಂದ ಬಂದವನು. ನಮ್ಮ ತಾಯಿ ಸಹ ಜನಪದ ಗಾಯಕಿ ಇವೆಲ್ಲವೂ ನಮ್ಮ ಜಾನಪದದ ಗೀಳನ್ನು ಹೆಚ್ಚಿಸಿತು. 1967ರಲ್ಲಿ ತರೀಕೆರೆಯಲ್ಲಿ ಅಖಿಲ ಕರ್ನಾಟಕ ಕಸಾಪ ಸಮ್ಮೇಳನ ನಡೆಯಿತು. ಅದೇ ಮೊದಲ ಬಾರಿಗೆ ಜಾನಪದ ಸಂಶೋಧಕರು, ವಿದ್ವಾಂಸರು, ಕಲಾವಿದರು ಎಲ್ಲರೂ ಆಗಮಿಸಿದ್ದರು. ಅಲ್ಲಿ ನಾವು 'ಹೊನ್ನ



ಗೊಂಡೇದಹಳ್ಳಿ ರುದ್ರಪ್ಪ ಚನ್ನಬಸಪ್ಪ (ಗೊರುಚ)

> **ಇದು ಜಾಗತೀಕರಣದ ಅವಧಿ. ಸಹಜವಾಗಿ ಇವತ್ತು ಇಂಗ್ಲಿಷ್ ಅಂತರರಾಷ್ಟ್ರೀಯ ಸಂಪರ್ಕ ಭಾಷೆ. ಪೋಷಕರು ಇಂಗ್ಲೀಷ್ ಅನ್ನು ತಮ್ಮ ಮಕ್ಕಳಿಗೆ ಕಲಿಸದಿದ್ದರೆ ಉದ್ಯೋಗ ವಂಚಿತರಾಗಿಬಿಡುತ್ತಾರೆಂಬ ಭಯದಲ್ಲಿ ಇಂಗ್ಲಿಷ್ ಕಲಿಸುತ್ತಾರೆ. ಇಂದಿನ ಯುವಕರಲ್ಲಿ ಕನ್ನಡ ಪ್ರೀತಿ ಬೆಳೆಸಲು ಪೋಷಕರಿಗೆ ಭಯ ವಾತಾವರಣದಿಂದ ಹೊರಬರುವಂತೆ ಮಾಡಬೇಕು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡ ಭಾಷೆಯ ವಿದ್ಯಾರ್ಥಿಗಳು ಭಾಗಿಯಾಗಲು ಹಿಂಜರಿಯುತ್ತಾರೆ. ಇದು ನಿವಾರಣೆಯಾಗಬೇಕು.**
>
> –ಗೊ.ರು.ಚನ್ನಬಸವಪ್ಪ

ಬಿತ್ತೆವು ಹೊಲಕೆಲ್ಲ' ಗ್ರಂಥ ಹೊರ ತಂದೆವು. ಇದು ಜಾನಪದದ ಬೃಹತ್ ಗ್ರಂಥವಾಗಿದೆ. ಬೆಂಗಳೂರಿಗೆ ಬಂದ ಮೇಲೆ ಜಾನಪದವನ್ನು ಕಟ್ಟಿ ಬೆಳೆಸಬೇಕೆಂದು ಜಿ.ನಾರಾಯಣ ಅವರು ಕಸಾಪ ಅಧ್ಯಕ್ಷರಾಗಿದ್ದಾಗ ಪರಿಷತ್ತಿನಲ್ಲಿ ಜಾನಪದ ವಿಭಾಗ ಸ್ಥಾಪಿಸಿ, ಆ ವಿಭಾಗದ ಸಂಚಾಲಕನಾಗಿ ಕಾರ್ಯನಿರ್ವಹಿಸಿದೆ. ರಾಜ್ಯಾದ್ಯಂತ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಕೆಲಸಕ್ಕೆ ಮುಂದಾದೆ. ಆ ನಂತರ ರಾಜ್ಯ ಮಟ್ಟದ ಕಲಾಮೇಳ ಮಾಡಿ, ಕರ್ನಾಟಕ ಜನಪದ ಕಲೆಗಳು ಪುಸ್ತಕ ಹೊರತಂದೆ. ಬಳಿಕ ಪರಿಷತ್ತು ನಡೆಸಿದ ಜಾನಪದ ಕಲಾಮೇಳದಿಂದ ದೊಡ್ಡ ಕ್ರಾಂತಿಯಾಯಿತು. ದೇಜಗೌ, ಹಾಮಾನಾ, ಡಾ.ಜೀ.ಶಂ.ಪರಮಶಿವಯ್ಯ ಜಾನಪದ ವಿದ್ವಾಂಸರು ಉತ್ತೇಜನ ಕೊಟ್ಟ ಪರಿಣಾಮ ಜನಪದ ಬೆಳೆಯಲು ಸಾಧ್ಯವಾಯಿತು. ನಂತರ ಜಾನಪದ ಅಕಾಡೆಮಿ ಅಧ್ಯಕ್ಷರಾಗಿ ಅನೇಕ ಕೃತಿಗಳನ್ನು ಹೊರತಂದೆ. ಆಗ 100 ಜಾನಪದ ಗ್ರಂಥ ತರಲು ಮುಂದಾದ ಪರಿಣಾಮ ಈವರೆಗೆ 60 ಗ್ರಂಥ ಹೊರಬಂದಿವೆ. ಜಾನಪದ ಅಕಾಡೆಮಿ ಅಧ್ಯಕ್ಷನಾಗಿದ್ದಾಗ ನಾಡಿನ ಜಾನಪದ ವಿದ್ವಾಂಸರೊಂದಿಗೆ ಚರ್ಚಿಸಿ, ವಿಶ್ವವಿದ್ಯಾನಿಲಯ ತರಬೇಕೆಂಬ ಒತ್ತಾಯ ಮಾಡಿದ ತರುವಾಯ ಇವತ್ತು ಹಾನಗಲ್‌ನಲ್ಲಿ ವಿಶ್ವದಲ್ಲೇ ಪ್ರಥಮ ಎಂಬಂತೆ ಜಾನಪದ ವಿಶ್ವವಿದ್ಯಾಲಯವಾಗಿರುವುದು ನನಗೆ ಸಮಾಧಾನದ ವಿಚಾರ.

ಮಿತ್ರ: ನೀವು ಸಾಹಿತಿ ಜೊತೆಗೆ ಅತ್ಯುತ್ತಮ ಸಂಘಟಕರು ಹೌದು. ಹಿರಿಯ ಸಂಘಟಕರಾಗಿ ಇವತ್ತಿನ ಸಂಘಟಕರಿಗೆ ನಿಮ್ಮ ಸಲಹೆ ಏನು?

ಗೊರುಚ: ಇವತ್ತಿನ ಸಂಘಟಕರು ತಮ್ಮ ಜೀವನದಲ್ಲಿ ತಾಳ್ಮೆಯನ್ನು ಮೈಗೂಡಿಸಿಕೊಳ್ಳಬೇಕು. ಅನೇಕ ಸಮಸ್ಯೆಗಳು, ಸವಾಲುಗಳು ಬರುತ್ತವೆ. ಆಗ ತಾಳ್ಮೆಗೆಟ್ಟರೆ ಸಮಸ್ಯೆಗಳು ಉಲ್ಬಣಿಸುತ್ತವೆ. ಇವೆಲ್ಲವನ್ನು ನಾನು ನೋವಾದರೂ ಅನೇಕ ಸಂದರ್ಭದಲ್ಲಿ ಸಹಿಸಿಕೊಂಡಿದ್ದೇನೆ. ನನ್ನ ಹೆತ್ತವರ ಆಶೀರ್ವಾದದಿಂದ ಕೆಲ ಕೆಲಸಗಳನ್ನು ಚಾಚುತಪ್ಪದೇ ಮಾಡಿದ್ದೇನೆ.

ಮಿತ್ರ: ಈ ಹಿಂದೆಯೇ ನೀವು ಸಮ್ಮೇಳನವೊಂದರ ಸರ್ವಾಧ್ಯಕ್ಷರಾಗಿದ್ದಿರಿ. ನಾಡು, ನುಡಿಗೆ ಇನ್ನು ಹೆಚ್ಚಿನ ಕೊಡುಗೆ ಕೊಡಬಹುದಿತ್ತು, ಯುವ ಪೀಳಿಗೆಗೆ ಸ್ಫೂರ್ತಿಯಾಗಬಹುದಿತ್ತು ಎಂದು ಅನಿಸಿದೆಯಾ?

ಗೊರುಚ: ಸಮ್ಮೇಳನಾಧ್ಯಕ್ಷತೆ ಆಗ, ಈಗ ಎಂತೇನಿಲ್ಲ. ಸಮ್ಮೇಳನಾಧ್ಯಕ್ಷರಾದ ಮೇಲೆ ಸಾಹಿತ್ಯಕ್ಕೆ ಹೆಚ್ಚಿನ ಕೆಲಸ ಮಾಡುತ್ತಾರೆ ಎಂದಿಲ್ಲ. ಅಧ್ಯಕ್ಷನಾಗದಿದ್ದರೂ ಮಾಡಬಹುದು. ಇಂತಹ ಸ್ಥಾನ ಒಪ್ಪುವ ವಯಸ್ಸಲ್ಲ ನನ್ನದು. ಸಾಹಿತ್ಯ ಪರಿಷತ್ತು ಮಾತೃ ಸಂಸ್ಥೆ, ಕನ್ನಡ ಕಟ್ಟುವ ಸಂಸ್ಥೆ, ಆ ತೇರನ್ನು ನಾನು ಸಹ ಎಳೆದಿದ್ದೇನೆಂಬ ಉದ್ದೇಶದಿಂದ ಒಪ್ಪಿಕೊಂಡೆ. ಮಂಡ್ಯದಲ್ಲಾಗುವ ಸಮ್ಮೇಳನ ಎಂದರೆ ನನ್ನದೇ ಸ್ಥಳದಲ್ಲಾಗುವ ಕಾರ್ಯಕ್ರಮ ಎಂಬ ಭಾವನೆ ನನ್ನಲ್ಲಿದೆ.

ಮಿತ್ರ: ನಾಡು, ನುಡಿಯನ್ನು ಕಟ್ಟುವ, ಬೆಳೆಸುವ, ಉಳಿಸುವ ಕಾರ್ಯವಾಗಿ ಸಮ್ಮೇಳನ ನಡೆಯುತ್ತಿತ್ತು, ಈಗ ಸಂಭ್ರಮ, ಆಡಂಬರದ ಉತ್ಸವ ಆಗುತ್ತಿದೆ. ಸಾಹಿತ್ಯದ ಜೊತೆಗೆ ಬೇರೆ ಬೇರೆ ಕ್ಷೇತ್ರವನ್ನು ಸಮ್ಮೇಳನ ಒಳಗೊಳ್ಳುತ್ತಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಗೊರುಚ: ಇದು ದೊಡ್ಡ ಉತ್ಸವ. ಹಾಗೆ ಆಗಬೇಕೆಂಬುದು ನನ್ನ ಪರಿಕಲ್ಪನೆ. ಕನ್ನಡ ನುಡಿ ಹಬ್ಬವಿದು. ಇದಕ್ಕೆ ಸಡಗರ ಸಹಜವಾಗಿರಬೇಕು. ಹಬ್ಬ, ಹುಣ್ಣಿಮೆಗೆ ಮನೆ ಶೃಂಗಾರ ಮಾಡಿದಂತೆ ಸಮ್ಮೇಳನ ನಡೆಯುವ ಸ್ಥಳವನ್ನು ಶೃಂಗರಿಸಬೇಕು. ಎಲ್ಲಾ ಕನ್ನಡಿಗರು ಒಂದೆಡೆ ಸೇರುವ ಹಬ್ಬವೆಂದರೆ ಅದು ಸಮ್ಮೇಳನ ಮಾತ್ರ. ಮೊದಲು ಸಾಹಿತ್ಯಕ್ಕೆ ಮಾತ್ರವೇ ಸೀಮಿತವಿತ್ತು. ಈಗ ಬೇರೆ ಕ್ಷೇತ್ರ ವ್ಯಾಪ್ತಿಗೆ ಹರಡಿದ್ದರೂ ಸಹ ಸಾಹಿತ್ಯಕ್ಕೆಂದೇ ಹಲವು ಗೋಷ್ಠಿಗಳಿರುತ್ತವೆ. ಧಾರ್ಮಿಕ, ರಾಜಕೀಯ, ವಿಜ್ಞಾನ, ರಂಗಭೂಮಿ ಇನ್ನಿತರೆ ವಿಚಾರದ ಬಗ್ಗೆ ಸಮ್ಮೇಳನದಲ್ಲಿ ಚರ್ಚೆ ಅನಿವಾರ್ಯವಾಗಿದೆ. ಯಾವುದೇ ಸಾಹಿತ್ಯ ರಚನೆಯಾದರೂ ಎಲ್ಲಾ ವಿಚಾರವನ್ನು ಒಳಗೊಂಡಿರಬೇಕು. ಸಮಾಜ, ಸಾಹಿತ್ಯ, ರಾಜಕೀಯ, ಧಾರ್ಮಿಕ, ಸಮಕಾಲೀನ ಪ್ರಜ್ಞೆ ಬಿಟ್ಟು ಸಾಹಿತ್ಯ ರಚನೆಯಾಗುವುದಿಲ್ಲ. ನಮ್ಮ ಬದುಕಿಗೆ ಯಾವ್ಯಾವು ಪೂರಕವೋ ಅವೆಲ್ಲಾ ಸಾಹಿತ್ಯಕ್ಕೆ ಪೂರಕ.

ಮಿತ್ರ: ದಿನದಿಂದ ದಿನಕ್ಕೆ ಸಾಹಿತ್ಯದ ಮೇಲೆ ಒಲವು, ಪುಸ್ತಕ ಓದುಗರು ಕಡಿಮೆಯಾಗುತ್ತಿದ್ದಾರೆ. ಜೊತೆಗೆ ಸಾಹಿತ್ಯಕ್ಕೆ ದುಡಿಯುವವರಿಗಿಂತ ಸಾಹಿತ್ಯ ಹೆಸರಿನಲ್ಲಿ ಸ್ವಾರ್ಥ ಸಾಧನೆ ಹೆಚ್ಚಾಗುತ್ತಿದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಗೊರುಚ: ಎಲ್ಲಾ ಕಾಲದಲ್ಲೂ ಸ್ವಾರ್ಥತೆ ಎಂಬುದಿದೆ. ಸಾಹಿತ್ಯ ಸೇವೆಯಾಗಿದ್ದರೂ, ಅದು ವಾಣಿಜ್ಯೀಕರಣವಾಗಿರುವುದು ನಮಗೆ ಗೊತ್ತಿದೆ. ಆದರೆ ಸಾಹಿತ್ಯದ ವಿಚಾರಗಳಲ್ಲಿ ಗಂಭೀರವಾದ ಚಿಂತನೆಗಳು ನಡೆಯುತ್ತಿವೆ.

ಮಿತ್ರ: ಈ ಹಿಂದೆ ಆಹಾರವೇ ಔಷಧಿಯಾಗಿತ್ತು. ಇದೀಗ ಆಹಾರವೆಂಬುದು ಆಡಂಬರವಾಗುತ್ತಿದೆ. ಅಂತಿಮವಾಗಿ ವಿಷವಾಗುತ್ತಿದೆ. ಸಾಹಿತಿಗಳು ಸಹ ಆಡಂಬರ ತೋರಿಸುತ್ತಾ, ಕೀರ್ತಿ ಹೆಚ್ಚಿಸಿಕೊಳ್ಳುವ ಕಡೆ ಹೆಜ್ಜೆ ಇಟ್ಟಿದ್ದಾರೆ. ಇದು ಸಾಹಿತ್ಯ ಕ್ಷೇತ್ರಕ್ಕೆ ಅಪಚಾರದಂತಲ್ಲವೇ?

ಗೊರುಚ: ಇವೆಲ್ಲವೂ ವ್ಯಕ್ತಿ ಮೇಲೆ ಅವಲಂಭಿಸಿರುವ ವಿಚಾರವಾಗಿದೆ. ತನ್ನ ವಿಚಾರಧಾರೆಯನ್ನು ಸಮಾಜದ ವಿಚಾರಧಾರೆ ಮಾಡಬೇಕೆಂಬ ಮನಸ್ಥಿತಿ ಇದ್ದರೆ, ಇನ್ನು ಕೆಲವರಲ್ಲಿ ತಮ್ಮ ವಿಚಾರಧಾರೆಯನ್ನು ಸಮಾಜ ಒಪ್ಪಬೇಕೆಂಬ ಮನಸ್ಸಿರುತ್ತದೆ. ಇದು ಅವರ ಮಾನಸಿಕ ರಚನೆ ಮೇಲೆ ಹೋಗುತ್ತದೆ.

ಮಿತ್ರ: ಮಂಡ್ಯ ಜಿಲ್ಲೆಯೊಂದಿಗೆ ನಿಕಟಸಂಪರ್ಕ ನಿಮಗಿದೆ. ಇಲ್ಲಿನ ಸಮ್ಮೇಳನದ ತೇರೆಳೆಯಲಿದ್ದೀರಿ. ಎಚ್.ಎಲ್.ನಾಗೇಗೌಡ, ಜಿ.ನಾರಾಯಣ ಅವರ ಸಂಪರ್ಕ ನಿಮಗಿತ್ತು. ಮಂಡ್ಯದ ಬಗ್ಗೆ ಏನು ಹೇಳುವಿರಿ?

ಗೊರುಚ: ಮಂಡ್ಯ, ಒಂದು ದೃಷ್ಟಿಯಲ್ಲಿ ನನ್ನ ತವರು. ಇಲ್ಲಿನ ಅನೇಕ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಕೆ.ವಿ.ಶಂಕರಗೌಡರು, ಎಸ್.ಎಂ.ಕೃಷ್ಣ ಹತ್ತಿರದವರು. ತತ್ವಪದ ಸಮ್ಮೇಳನ ನಡೆಯಿತು. ಸಾಂಸ್ಕೃತಿಕ ಗ್ರಾಮ ಕೀಲಾರಕ್ಕೆ ಹಲವು ಬಾರಿ ಬಂದಿದ್ದೇನೆ. ಅಲ್ಲಿನ ಕರ್ನಾಟಕ ಸಂಘ, ಅಲ್ಲಿನ ಅಧ್ಯಕ್ಷರಾದ ಪ್ರೊ.ಬಿ.ಜಯಪ್ರಕಾಶ್‌ಗೌಡರು, ಸಾಹಿತಿ ಪ್ರೊ.ಜಿ.ಟಿ.ವೀರಪ್ಪನವರ ಸಂಪರ್ಕ ನನಗಿದೆ. ಕನ್ನಡ ಕಲಬೆರಕೆಯಾಗದಿರುವ ಪ್ರದೇಶವೆಂದರೆ ಅದು ಮಂಡ್ಯ ಮಾತ್ರ. ಕನ್ನಡ ಕೆನೆ ಇರುವ ಮಂಡ್ಯದಲ್ಲಿ ಸಮ್ಮೇಳನ ನಡೆಯುತ್ತಿ ರುವುದು ಅರ್ಥಪೂರ್ಣವಾಗಿರಬೇಕೆಂಬುದು ನನ್ನ ಉದ್ದೇಶ.

ಮಿತ್ರ: ಅನೇಕ ಕನ್ನಡಿಗರು ಬೇರೆ ಭಾಷೆಯತ್ತ ಗಮನಹರಿಸುತ್ತಿದ್ದಾರೆ. ಭಾಷಾ ಪ್ರೀತಿ, ಬಳಕೆ ಕಡಿಮೆಯಾಗುತ್ತಿದೆ. ಆಂಗ್ಲ ಭಾಷೆ ವ್ಯಾಮೋಹ ಹೆಚ್ಚಿರುವುದು ಆತಂಕದ ವಿಚಾರವಲ್ಲವೇ?

ಗೊರುಚ: ಇದು ಜಾಗತೀಕರಣದ ಅವಧಿ. ಸಹಜವಾಗಿ ಇವತ್ತು ಇಂಗ್ಲಿಷ್ ಅಂತರರಾಷ್ಟ್ರೀಯ ಸಂಪರ್ಕ ಭಾಷೆ. ಪೋಷಕರು ಇಂಗ್ಲಿಷ್ ಅನ್ನು ತಮ್ಮ ಮಕ್ಕಳಿಗೆ ಕಲಿಸದಿದ್ದರೆ ಉದ್ಯೋಗ ವಂಚಿತರಾಗಿಬಿಡುತ್ತಾರೆಂಬ ಭಯದಲ್ಲಿ ಇಂಗ್ಲೀಷ್ ಕಲಿಸುತ್ತಾರೆ. ಇಂದಿನ ಯುವಕರಲ್ಲಿ ಕನ್ನಡ ಪ್ರೀತಿ ಬೆಳೆಸಲು ಪೋಷಕರಿಗೆ ಭಯ ವಾತಾವರಣದಿಂದ ಹೊರಬರುವಂತೆ ಮಾಡಬೇಕು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡ ಭಾಷೆಯ ವಿದ್ಯಾರ್ಥಿಗಳು ಭಾಗಿಯಾಗಲು ಹಿಂಜರಿಯುತ್ತಾರೆ. ಇದು ನಿವಾರಣೆಯಾಗಬೇಕು.

ಮಿತ್ರ: ಅಂದಿನ ಸಮ್ಮೇಳನಗಳು ಚಪ್ಪರದ ಮದುವೆಯಂತಿತ್ತು, ಇದೀಗ ಛತ್ರದ ಮದುವೆಗಳಾಗಿವೆಯಲ್ಲಾ?

ಗೊರುಚ: ಅಂದು 300 ಜನ ಪಾಲ್ಗೊಳ್ಳುತ್ತಿದ್ದ ಸಮಯ. ಇದೀಗ ಲಕ್ಷ ಲಕ್ಷ ಜನ ಭಾಗವಹಿಸುತ್ತಾರೆ. ಇದೀಗ ಹೆಚ್ಚು ಜನ ಭಾಗಿಯಾಗುವುದರಿಂದ ಗದ್ದಲ ಹೆಚ್ಚು. ಇದರಿಂದ ಕನ್ನಡವೂ ಬೆಳೆಯುತ್ತದೆ.

ಮಿತ್ರ: ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗುತ್ತದೆ, ಅದು ಸರ್ಕಾರಕ್ಕೂ ತಲುಪುತ್ತದೆ. ಸರ್ಕಾರ ಕೆಲವನ್ನು ಈಡೇರಿಸುತ್ತದೆ, ಕೆಲವನ್ನು ಹಾಗೆ ಬಿಡುತ್ತದೆ, ಮತ್ತೆ ಈ ನಿಟ್ಟಿನಲ್ಲಿ ಈ ಬಾರಿ ನಿರ್ಣಯಗಳು ಯಾವ ರೀತಿ ಇರಬೇಕು?

ಗೊರುಚ: ನಿರ್ಣಯಗಳನ್ನು ಪ್ರತಿ ಸಮ್ಮೇಳನದಲ್ಲಿ ಮಾಡುತ್ತಲೇ ಬರುತ್ತಿದ್ದೇವೆ. ಅವನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. ಆದರೆ ಕೆಲವೊಂದು ನಿರ್ಣಯ ಅನುಷ್ಠಾನ ಆಗಿಲ್ಲ, ಕೆಲವೊಂದು ಆಗಿವೆ. ಇದು ಕನ್ನಡ ನಾಡಿನ ವೇದಿಕೆಯಾಗಿದ್ದು, ಇಲ್ಲಿನ ನಿರ್ಣಯಗಳು ಗಂಭೀರವಾದವು ಎಂದು ಸರ್ಕಾರ ಪರಿಗಣಿಸಿ, ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮಂಡ್ಯದಲ್ಲಿ ನಡೆಯುತ್ತಿರುವುದು ಇದು 3ನೇ ಸಮ್ಮೇಳನ...

ಡಿಸೆಂಬರ್ 20, 21 ಹಾಗೂ 22ರಂದು ಜಿಲ್ಲೆಯಲ್ಲಿ ಮೂರನೇ ಬಾರಿಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಅದಕ್ಕೂ ಮುನ್ನ 1974ರಲ್ಲಿ ಮೊದಲು ಹಾಗೂ 1994ರಲ್ಲಿ ಎರಡನೇ ಬಾರಿಗೆ ನಡೆದಿತ್ತು. ಕೆಲವು ವಿಶೇಷತೆಗಳಿಗೆ ಈ ಎರಡು ಸಮ್ಮೇಳನಗಳು ಸಾಕ್ಷಿಯಾಗಿವೆ. 1974ರಲ್ಲಿ 48ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜಿಲ್ಲೆಯಲ್ಲಿ ಮೊದಲ ಬಾರಿಗೆ ನಡೆದಿತ್ತು. ಆಗ ಜಿ.ನಾರಾಯಣ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮೊದಲ ಬಾರಿಗೆ ಮಹಿಳಾ ಸಾಹಿತಿ ಜಯದೇವಿ ತಾಯಿ ಲಿಗಾಡೆ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆಗ ಸಮ್ಮೇಳನ ಯಶಸ್ವಿಯಾಗಿ ನಡೆದಿತ್ತು. ದಾನಿಗಳಿಂದ ಸಂಗ್ರಹಿಸಿದ ಹಣದಲ್ಲಿಯೇ ಸಂಪೂರ್ಣ ಸಮ್ಮೇಳನ ನೆರವೇರಿತ್ತು.

ನಂತರ 20 ವರ್ಷಗಳ ಬಳಿಕ 1994ರಲ್ಲಿ ಮತ್ತೆ ಮಂಡ್ಯಕ್ಕೆ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಒಲಿದು ಬಂದಿತ್ತು. ಆ ಸಮ್ಮೇಳನವೂ ವಿವಿಧ ವಿಶೇಷತೆಗಳಿಗೆ ಸಾಕ್ಷಿಯಾಗಿತ್ತು. ಆಗ ಈಗಿನ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಸಾಹಿತಿ ಹಾಗೂ ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿದ್ದರು. ಸಾಹಿತಿ ಚದುರಂಗ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಪ್ರೊ.ಜಿ.ಟಿ.ವೀರಪ್ಪ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸಮ್ಮೇಳನಕ್ಕೆ 22 ಲಕ್ಷ ರೂ. ವೆಚ್ಚವಾಗಿತ್ತು. ಸಮ್ಮೇಳನಕ್ಕೆ ಸರ್ಕಾರ ಹಾಗೂ ದಾನಿಗಳಿಂದ ಒಟ್ಟು 42 ಲಕ್ಷ ರೂ. ಹಣ ಸಂಗ್ರಹವಾಗಿತ್ತು. ಅದರಲ್ಲಿ ಕೇವಲ 22 ಲಕ್ಷ ರೂ. ಖರ್ಚಾಗಿತ್ತು. ಉಳಿದ 20 ಲಕ್ಷ ರೂ. ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ನೀಡಲಾಗಿತ್ತು. ಇದರಿಂದ ಇಡೀ ರಾಜ್ಯದಲ್ಲಿಯೇ ಬೆಂಗಳೂರು ಹೊರತುಪಡಿಸಿದರೆ ಮಂಡ್ಯದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತು ಭವನ ನಿರ್ಮಾಣವಾದ ಕೀರ್ತಿಗೆ ಭಾಜನವಾಯಿತು.

ಕಸಾಪ ಭವನಕ್ಕೆ 6.15 ಲಕ್ಷ: ಜಿಲ್ಲೆಯಲ್ಲಿ ಮೊದಲ ಹಾಗೂ 2ನೇ ಬಾರಿಗೆ ಸಮ್ಮೇಳನ ನಡೆದರೂ ಕನ್ನಡ ಸಾಹಿತ್ಯ ಭವನ ಇರಲಿಲ್ಲ. ಆಗಿನ ಜಿಲ್ಲಾಧ್ಯಕ್ಷರಾಗಿದ್ದ ಜಿ.ಟಿ.ವೀರಪ್ಪ, ಉಳಿದಿದ್ದ 20 ಲಕ್ಷ ರೂ. ಹಣದಲ್ಲಿ ನಗರಸಭೆಯಿಂದ ಉಚಿತವಾಗಿ ಬಂದಿಗೌಡ ಬಡಾವಣೆಯಲ್ಲಿ ನೀಡಿದ್ದ ನಿವೇಶನದಲ್ಲಿ 6.15 ಲಕ್ಷ ರೂ. ಖರ್ಚು ಮಾಡಿ ಭವನ ನಿರ್ಮಿಸಲಾಯಿತು.

ಕುವೆಂಪು ಪ್ರತಿಮೆಗೆ 4 ಲಕ್ಷ: ನಗರದ ಹೃದಯ ಭಾಗದಲ್ಲಿರುವ ರೈತಸಭಾಂಗಣದ ಆವರಣದಲ್ಲಿ ನಿರ್ಮಿಸಲಾಗಿರುವ ಕುವೆಂಪು ಪ್ರತಿಮೆಗೂ ಉಳಿದಿದ್ದ ಸಮ್ಮೇಳನದ ಹಣವನ್ನು ನೀಡಲಾಗಿತ್ತು. ಪ್ರತಿಮೆ ನಿರ್ಮಾಣಕ್ಕೆ ಆಗಲೇ ಕಸಾಪದಿಂದ 4 ಲಕ್ಷ ರೂ. ನೀಡಿ ಪ್ರತಿಮೆ ನಿರ್ಮಾಣ ಮಾಡಲಾಗಿದ್ದ ಕೀರ್ತಿ ಕಸಾಪಗೆ ಸಲ್ಲುತ್ತದೆ.

ಕಲಾಮಂದಿರ ಕಾಮಗಾರಿಗೂ ಹಣ: ಕಲಾಮಂದಿರ ನಿರ್ಮಾಣ ಹಂತದಲ್ಲಿದ್ದು, ಕಾಮಗಾರಿ ಅರ್ಧಕ್ಕೆ ನಿಂತಿತ್ತು. ಆಗಿನ ಜಿಲ್ಲಾಧಿಕಾರಿಯಾಗಿದ್ದ ವೀರಭದ್ರಾಚಾರ್ ಅವರ ಮನವಿ ಮೇರೆಗೆ ಕಲಾಮಂದಿರಕ್ಕೆ ಸಮ್ಮೇಳನದಿಂದ ಉಳಿದಿದ್ದ ಹಣದಲ್ಲೇ 8.50 ಲಕ್ಷ ರೂ. ನೀಡಲಾಗಿತ್ತು. ಇದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು.

ಜಾನಪದ ಲೋಕಕ್ಕೆ 1 ಲಕ್ಷ: ಆಗಿನ ಮಂತ್ರಿಯಾಗಿದ್ದ ಕೆ.ಎನ್.ನಾಗೇಗೌಡರು ಸಹ ಜಾನಪದ ಲೋಕಕ್ಕಾಗಿ ಹಣ ನೀಡುವಂತೆ ಹೇಳಿದ್ದರು. ಅದರಂತೆ ಅದಕ್ಕೂ 1 ಲಕ್ಷ ರೂ. ದೇಣಿಗೆ ನೀಡಲಾಗಿತ್ತು. ಇದೇ ರೀತಿಯ ಸಮ್ಮೇಳನದಲ್ಲಿ ಉಳಿದಿದ್ದ ಹಣವನ್ನು ವಿವಿಧ ಅಭಿವೃದ್ಧಿಗೆ ಬಳಸಲಾಗಿತ್ತು ಎಂದು ಆಗಿನ 1994ರ ಕಸಾಪ ಅಧ್ಯಕ್ಷರಾಗಿದ್ದ ಪ್ರೊ.ಜಿ.ಟಿ.ವೀರಪ್ಪ ಹೇಳುತ್ತಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವಮಾನಿಸುವ ರೀತಿ ಹೇಳಿಕೆ

ಅಮಿತ್ ಶಾ ವಿರುದ್ಧ ಮೈಸೂರಲ್ಲಿ ವಿವಿಧ ಸಂಘಟನೆಗಳ ಪ್ರತಿಭಟನೆ

ಮೈಸೂರು, ಡಿ.19(ಎಂಟಿವೈ, ಪಿಎಂ)– ಕೇಂದ್ರ ಗೃಹ ಸಚಿವ ಅಮಿತ್ ಷಾ ಸಂಸತ್‌ನಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಅವಮಾನಿಸುವ ರೀತಿ ಹೇಳಿಕೆ ನೀಡಿದ್ದು, ಅವರನ್ನು ಗಡಿಪಾರು ಮಾಡಬೇಕೆಂದು ಮೈಸೂರಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತ್ಯೇಕ ಸ್ಥಳದಲ್ಲಿ ಪ್ರತಿಭಟನೆ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಅಕ್ಷಮ್ಯ ಅಪರಾಧ: ದಲಿತ ಸಂಘರ್ಷ ಸಮಿತಿ, ದಲಿತ ಪ್ಯಾಂಥರ್ಸ್ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮೈಸೂರಿನ ಪುರಭವನದ ಮುಂದಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಗುರವಾಗಿ ಮಾತಾಡಿರುವುದು ಅಕ್ಷಮ್ಯ ಅಪರಾಧ. ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ವಜಾಗೊಳಿಸುವಂತೆ ಆಗ್ರಹಿಸಿ ಪ್ರತಿಭಟಿಸಿದರಲ್ಲದೆ, ಅಮಿತ್ ಷಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಅಮಿತ್ ಷಾ ರಾಜಕೀಯ ಹಿನ್ನೆಲೆಯು ರಕ್ತದ ಕಲೆಗಳಿಂದ ಕೂಡಿದೆ. ಇವರ ಕ್ರಿಮಿನಲ್ ಚಟುವಟಿಕೆ ಗುಜರಾತಿನಾದ್ಯಂತ ಪ್ರಚಲಿತದಲ್ಲಿವೆ. ಸಂವಿಧಾನವನ್ನು ತುಚ್ಛೀಕರಿಸಿ ಅಸಮಾನತೆ ಮತ್ತು ಶೋಷಣೆಗೆ ಪೂರಕವಾದ ಮನುಸ್ಮೃತಿಯನ್ನು ಮುನ್ನೆಲೆಗೆ ತರುವ ಏಕೈಕ ದುರುದ್ದೇಶದಿಂದ ಬಾಬಾ ಸಾಹೇಬರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಚೋರನಹಳ್ಳಿ ಶಿವಣ್ಣ, ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ಹಾರೋಹಳ್ಳಿ ನಟರಾಜ್, ಸಣ್ಣಯ್ಯ ಲಕ್ಕೂರು ಇನ್ನಿತರರು ಪಾಲ್ಗೊಂಡಿದ್ದರು.




ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಮುಂದೆ ದಲಿತ ಪ್ಯಾಂಥರ್ಸ್ ಹಾಗೂ ದಸಂಸ ಮುಖಂಡರು ಗುರುವಾರ ಪ್ರತಿಭಟನೆ ನಡೆಸಿದರು. ಬಲಚಿತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಬಳಿ ಮೈಸೂರು ವಿವಿ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟಗಳ ಸದಸ್ಯರು ಪ್ರತಿಭಟನೆ ನಡೆಸಿದರು.



ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಭಾರತ ವಿದ್ಯಾರ್ಥಿ ಫೆಡರೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗಡಿಪಾರು ಮಾಡಬೇಕು: ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟಗಳ ವತಿಯಿಂದ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಬಳಿ ನಡೆದ ಪ್ರತಿಭಟನೆಯಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆದು ಪ್ರತಿಭಟಿಸುವ ಮೂಲಕ ಕೇಂದ್ರ ಸಚಿವ ಅಮಿತ್ ಷಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಡಾ.ಅಂಬೇಡ್ಕರ್ ಹೆಸರಿಗೆ ಅವಮಾನ ಮಾಡಿ ಮಾತನಾಡಿದ ಕೇಂದ್ರದ ಗೃಹ ಸಚಿವ ಅಮಿತ್ ಷಾ ಅವರನ್ನು ಸಂಪುಟದಿಂದ ವಜಾಗೊಳಿಸಿ, ದೇಶದಿಂದ ಗಡಿಪಾರು ಮಾಡಬೇಕು. ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಯನ್ನು ಗೃಹ ಸಚಿವರನ್ನಾಗಿ ಮಾಡಿರುವುದೇ ಖಂಡನೀಯ. ಅಂಬೇಡ್ಕರ್ ಎಂಬುದು ಬರೀ ಹೆಸರಲ್ಲ ನಮ್ಮೆಲ್ಲರ ಉಸಿರು. ಅಂಬೇಡ್ಕರ್ ಕುರಿತು ಅವಹೇಳನ ಮಾಡಿರುವ ಅಮಿತ್ ಷಾ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಕಾರ್ಯಾಧ್ಯಕ್ಷ ಕಲ್ಲಹಳ್ಳಿ ಕುಮಾರ್, ಕಾರ್ಯದರ್ಶಿ ವಿಶ್ವಪ್ರಸಾದ್, ಜಂಟಿ ಉಪಾಧ್ಯಕ್ಷರಾದ ಕೆ.ಮಲ್ಲೇಶ್, ಕೊ.ಲಿಂಗರಾಜು, ಪ್ರಧಾನ ಕಾರ್ಯದರ್ಶಿ ಕುಶಾಲ್, ವರಹಳ್ಳಿ ಆನಂದ, ಜಯಚಂದ್ರ, ಗಣೇಶ್, ಪಿ.ಮರಹಳ್ಳಿ ಮಹೇಶು, ಲಿಂಪನ್ ರಾಜು, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪುನೀತ್ ಆಲನಹಳ್ಳಿ, ಕಿರಣ್, ನಂದೀಶ್, ಸಚಿನ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ ಪಾಲ್ಗೊಂಡಿದ್ದರು.

ಭಾರತ ವಿದ್ಯಾರ್ಥಿ ಫೆಡರೇಷನ್: ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಜಿಲ್ಲಾ ಸಮಿತಿಯ ಕಾರ್ಯಕರ್ತರು ಬಾಬಾ ಸಾಹೇಬ್ ಅಂಬೇಡ್ಕರ್ ವಿರುದ್ಧ ಅಮಿತ್ ಷಾ ನೀಡಿರುವ ಹೇಳಿಕೆ ನಾಗರಿಕ ಸಮಾಜ ತಲೆ ತಗ್ಗಿಸುವ ಕೃತ್ಯ ವಾಗಿದೆ. ಅಂಬೇಡ್ಕರ್ ಹೆಸರು ಫ್ಯಾಷನ್ ಆಗಿದೆ ಎನ್ನುವ ಅಮಿತ್ ಶಾ ಪದೇ ಪದೆ ದೇವರ ಹೆಸರು ಕರೆಯುವ ಮೂಲಕ ಸ್ವರ್ಗ ಸೃಷ್ಟಿಸುವ ಮಂಕುಬೂದಿ ಎರಚುತ್ತಿದ್ದಾರೆ. ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ದಲಿತ ವಿರೋಧಿ, ಸಂವಿಧಾನ ವಿರೋಧಿ ನೀತಿ ಅನುಸರಿಸುತ್ತಿರುವುದು ಪದೇ ಪದೆ ಸಾಬೀತಾಗಿದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಅಧ್ಯಕ್ಷ ಚಿರಾಗ್ ಎಸ್.ಕೆ.ಮೂರ್ತಿ, ಅಭಿ, ಗಿರೀಶ್ ಬೆಂಡರವಾಡಿ, ಭರತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರು ಶ್ರೀ ಓ.ಟಿ. ವೆಂಕಟೇಶ್ ಮತ್ತು ಶ್ರೀಮತಿ ಲಲಿತ ಎಂಬುವರಿಂದ ಅನುಸೂಚಿಯಲ್ಲಿ ಸ್ವತ್ತನ್ನು ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಅನುಸೂಚಿ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಅನುಸೂಚಿ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಏಳು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಏಳು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಅನುಸೂಚಿ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರೀ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಏಳು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಅನುಸೂಚಿ

ಮೈಸೂರು ಜಿಲ್ಲೆ, ಇಲವಾಲ ಹೋಬಳಿ, ದೊಡ್ಡಮಾರಗೌಡನಹಳ್ಳಿಯಲ್ಲಿರುವ ವಸತಿ ಉದ್ದೇಶಕ್ಕೆ ಪರಿವರ್ತಿಸಿರುವ ಸರ್ವೆ ನಂ.128 ರಲ್ಲಿರುವ 2 ಎಕರೆ, 27 ಗುಂಟೆ ಚದರ ಅಡಿಗಳುಳ್ಳ ಸ್ವತ್ತಿಗೆ ಚಕ್ಕುಬಂದಿ:

ಪೂರ್ವ : ಸರ್ವೆ ನಂ. 129
ಪಶ್ಚಿಮ : ಸರ್ವೆ ನಂ. 388 ಮತು 389
ಉತ್ತರ : ಸರ್ವೆ ನಂ. 129 ಮತ್ತು ರಸ್ತೆ
ದಕ್ಷಿಣ : ಸರ್ವೆ ನಂ. 129

ಸಹಿ/– ರೋಹಿತ್ ಸುಬ್ಬಯ್ಯ
ವಕೀಲರು, ನಂ.1230/ಎ, 2ನೇ ಕ್ರಾಸ್
(ಕೃಷ್ಣಮೂರ್ತಿಪುರಂ ರಾಮ ಮಂದಿರದ ಹಿಂಭಾಗ) ಚಾಮರಾಜ ಮೊಹಲ್ಲ,
ಮೈಸೂರು – 570 004.
ಮೊ: 94800 04999
ದಿನಾಂಕ: 19.12.2024

BEFORE HONOURABLE 3rd ADD DISTRICT AND SESSIONS JUDGE AT MYSORE
MIS NO 115/2023

Petitioner: Mr. Nagoji Rao Sindhe S/o Late M.N. Narayana Rao Aged about 74 years, Residing as Tenant, No. 1542, 1st Floor Sathirupti, High Tension Double Road, Vijayanagara Mysore-570017 Also at Martha Block N.R Mohalla, Mysore.

Vs

Respondents: Mr Nanjaraja Urs and others

Opponent:
2(a) Dinesh Raje Urs
S/o Late Sundaramannni, Aged abcut 45 years, Residing at No 182, Hebbal Village, K.R Nagara Taluk Mysore District.

PUBLIC NOTICE

The petitioner has filed the above case MIS 115 /2023 on the file of 3rd Add District and Sessions Judge Mysore. On knowledge of death of 2nd Respondent Smt Sundaramannni, her son opponent 2(a) is made as Legal Representative, of deceased through Application Under order 22 Rule 4 C.P.C, the opponent 2(a) whose residence at the said adcress called upon to appear before the Honourable 3rd Add District and Session Court Mysore on 13:1:25 day at 11 am, failing which opponent 2(a) would be made ex-parte and matte would be proceeded further.

Given Under the Seal
By the Order of The District Court
Sd/- Chief Administrative Officer, District & Sessions Court, Mysuru

Sd/- H.V. Sreenath,
S. Harsha, Ayesha Begum, Aravinda M.D, Rani C, Advocates, No 1499, 1st Floor Kabir Road
Mandi Mohalla, Mysore.
Mob: 9845790193

ರಾಜ್ಯದಲ್ಲಿ ನೆಲೆಸಿದ 24 ಪಾಕ್, 159 ಬಾಂಗ್ಲಾದೇಶಿಯರ ಬಂಧನ

ಬೆಳಗಾವಿ, ವಿಧಾನಮಂಡಲ, ಡಿ.19(ಕೆಎಂಶಿ)–ಬೆಂಗಳೂರು ನಗರ ಮತ್ತು ರಾಜ್ಯದ ಇತರೆ ಭಾಗಗಳಲ್ಲಿ ಅನಧಿಕೃತವಾಗಿ ನೆಲೆಸಿದ್ದ 24 ಪಾಕ್ ಮತ್ತು 159 ಬಾಂಗ್ಲಾದೇಶ ಮೂಲದವರನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಪರಿಷತ್ತಿನಲ್ಲಿಂದು ತಿಳಿಸಿದರು. ಡಿ.ಎಸ್.ಅರುಣ್ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ರಾಜ್ಯದೊಳಗೆ ಅನಧಿಕೃತವಾಗಿ ಪದೇ ಪದೆ ಪ್ರವೇಶಿಸುವ ಅಕ್ರಮ ವಲಸಿಗರ ಬಗ್ಗೆ ನಿಗಾವಹಿಸಲು ಬೆಂಗಳೂರು ನಗರದಲ್ಲಿ ನಗರ ವಿಶೇಷ ಘಟಕವಿದೆ. ನಗರಕ್ಕೆ ಪ್ರವೇಶಿಸುವ ವಿದೇಶಿಯರ ಕುರಿತು ಪೊಲೀಸ್ ಠಾಣೆಗಳ ಮೂಲಕ, ಬೆಂಗಳೂರಿನ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಓ)ಯಿಂದ ಮಾಹಿತಿ ಪಡೆದು, ಪ್ರತಿ ವಿಭಾಗೀಯ ಡಿಸಿಪಿಗಳ ಮುಖಾಂತರ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಅಲ್ಲದೆ, ಸಿಸಿಬಿಯ ಸಂಘಟಿತ ಅಪರಾಧ ದಳ ಸಹ ಕಾರ್ಯಾಚರಣೆ ನಡೆಸುತ್ತಿದೆ. ಇತರೆ ನಗರ, ಜಿಲ್ಲೆಗಳಿಗೆ ಅನಧಿಕೃತವಾಗಿ ಪ್ರವೇಶಿಸುವ ವಿದೇಶಿಯರ ಪತ್ತೆಗೆ ರಚಿಸಲಾಗಿರುವ ವಿಶೇಷ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ ಎಂದರು.

ನಟ ದರ್ಶನ್ 15 ದಿನ ಮೈಸೂರಿನಲ್ಲಿರಲು ಕೋರ್ಟ್ ಅನುಮತಿ



ಬೆಂಗಳೂರು, ಡಿ.19– ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಮೈಸೂರಿನ ತಮ್ಮ ಫಾರ್ಮ್‌ಹೌಸ್‌ಗೆ ತೆರಳಲು ಅನುಮತಿ ನೀಡುವಂತೆ ನ್ಯಾಯಾಲಯದ ಮೊರೆ ಹೋಗಿದ್ದು, ವಿಚಾರಣೆ ನಡೆಸಿದ ಕೋರ್ಟ್ 15 ದಿನಗಳ ಕಾಲ ಮೈಸೂರಿನಲ್ಲಿ ಉಳಿದುಕೊಳ್ಳಲು ಅವಕಾಶ ನೀಡಿದೆ.

ದರ್ಶನ್ ಪರ ವಕೀಲರು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನಗರದ 57ನೇ ಸಿಸಿಎಚ್ ನ್ಯಾಯಾಲಯ ಡಿ.20ರಿಂದ ಜ.5ರವರೆಗೆ ಮೈಸೂರಿನಲ್ಲಿ ಇರಲು ಅವಕಾಶ ನೀಡಿದೆ.

ಡಿ.13ರಂದು ಹೈಕೋರ್ಟ್ ದರ್ಶನ್ ಸೇರಿ ಏಳು ಮಂದಿಗೆ ಜಾಮೀನು ನೀಡಿತ್ತು ನ್ಯಾಯಲಯದ ವ್ಯಾಪ್ತಿಬಿಟ್ಟು ತೆರಳಕೂಡದು ಎಂದು ಷರತ್ತು ವಿಧಿಸಿತ್ತು. ಈ ಹಿನ್ನೆಲೆಯಲ್ಲಿ 57ನೇ ಸಿಸಿಎಚ್ ನ್ಯಾಯಾಲಯಕ್ಕೆ ದರ್ಶನ್ ಪರ ವಕೀಲರು ಅರ್ಜಿ ಸಲ್ಲಿಸಿ, ಮೈಸೂರಿಗೆ ತೆರಳಲು ನಾಲ್ಕು ವಾರಗಳ ಕಾಲ ಅನುಮತಿ ಕೇಳಿದ್ದರು. ಅದಕ್ಕೆ ತಕರಾರಿದ್ದರೆ ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರಿ ವಿಶೇಷ ಅಭಿಯೋಜಕರಿಗೆ ನ್ಯಾಯಾಲಯ ಸೂಚಿಸಿತ್ತು.

ಆದರೆ, ಸರ್ಕಾರಿ ಅಭಿಯೋಜಕರು ಯಾವುದೇ ಆಕ್ಷೇಪಣೆ ಸಲ್ಲಿಸದ ಹಿನ್ನೆಲೆಯಲ್ಲಿ 15 ದಿನಗಳ ಕಾಲ ತೆರಳಲು ಅವಕಾಶ ನೀಡಿದೆ.

ಮೈಸೂರಿನಲ್ಲಿ ದರ್ಶನ್ ಫಾರ್ಮ್ ಹೌಸ್ ಹೊಂದಿದ್ದಾರೆ. ಸಿನಿಮಾ ಶೂಟಿಂಗ್ ಇಲ್ಲದಿದ್ದಾಗ ಮೈಸೂರಿನಲ್ಲೇ ತೋಟದ ಮನೆಯಲ್ಲಿ ಹೆಚ್ಚು ವಾಸ್ತವ್ಯ ಹೂಡುತ್ತಿದ್ದರು.

ಅಕ್ಷರ ಜಾತ್ರೆಗೆ ಝಗಮಗಿಸುತ್ತಿರುವ ಸಕ್ಕರೆ ನಾಡು ಮಂಡ್ಯ...






87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಚೆಸ್ಕಾಂ ವತಿಯಿಂದ ಮಂಡ್ಯ ನಗರದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಿದ್ದು, ಮಂಡ್ಯ ನಗರವು ಬೆಳಕಿನಿಂದ ಕಂಗೊಳಿಸುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ದೀಪಾಲಂಕಾರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ರಮೇಶ್ ಬಾಬು ಬಂಡಿಸಿದ್ದೇಗೌಡ, ಶಾಸಕ ರವಿಕುಮಾರ್ ಗಣಿಗ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇಂದಿನಿಂದ ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ



ಶುಕ್ರವಾರದಿಂದ ಆರಂಭವಾಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧಗೊಂಡಿರುವ ಭವ್ಯ ಬೃಹತ್ ವೇದಿಕೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ

ಪ್ರಧಾನ ವೇದಿಕೆಯ ಮೊದಲ ದಿನದ ಕಾರ್ಯಕ್ರಮಗಳ ವಿವರ

ಮಂಡ್ಯ, ಡಿ.19– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನಾಳೆ(ಶುಕ್ರವಾರ)ಯಿಂದ ಆರಂಭವಾಗಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಿರುವರು. ಮೂರು ವೇದಿಕೆಗಳಲ್ಲಿಯೂ ಕಾರ್ಯಕ್ರಮಗಳು ನಡೆಯಲಿವೆ.

'ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆ'– 'ಸರ್ ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಮಹಾಮಂಟಪ'ದಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

'ಯಕ್ಷಕವಿ ಕೆಂಪಣ್ಣಗೌಡ ಮತ್ತು ಉಭಯ ಕವಿತಾ ವಿಶಾರದ ಷಡಕ್ಷರದೇವ ಮಹಾದ್ವಾರ'– 'ಶ್ರೇಷ್ಠ ರಾಜಕೀಯ ಮುತ್ಸದ್ದಿ ಎಸ್.ಎಂ.ಕೃಷ್ಣ ಮತ್ತು ಜಗದ್ಗುರು ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಪ್ರವೇಶದ್ವಾರ'ವು ಕನ್ನಡಾಭಿಮಾನಿಗಳನ್ನು ಸ್ವಾಗತಿಸಲಿದೆ.

ಧ್ವಜಾರೋಹಣ ಕಾರ್ಯಕ್ರಮ: ಡಿ.20 ರಂದು ಬೆಳಿಗ್ಗೆ 6 ರಿಂದ 6.30 ಗಂಟೆಯವರೆಗೆ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷ ಎನ್.ಚಲುವರಾಯಸ್ವಾಮಿ ಅವರು ರಾಷ್ಟ್ರಧ್ವಜಾರೋಹಣವನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಗೌರವ ಕಾರ್ಯಾಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಪರಿಷತ್ತಿನ ಧ್ವಜಾರೋಹಣವನ್ನು ಹಾಗೂ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕಿ ಮೀರಾ ಶಿವಲಿಂಗಯ್ಯ ಅವರು ನಾಡಧ್ವಜಾರೋಹಣವನ್ನು ನೆರವೇರಿಸಲಿದ್ದಾರೆ.

ಗೋಷ್ಠಿಗಳು: ಮಧ್ಯಾಹ್ನ 2 ರಿಂದ 3.30 ಗಂಟೆಯವರೆಗೆ ಪ್ರಧಾನ ವೇದಿಕೆಯಲ್ಲಿ ಮಂಡ್ಯ ಜಿಲ್ಲೆಗೆ ಕೊಡುಗೆ ನೀಡಿದ ಮಹನೀಯರು ವಿಷಯದ ಬಗ್ಗೆ ಗೋಷ್ಠಿ–1 ನಡೆಯಲಿದೆ. ಖ್ಯಾತ ಇತಿಹಾಸ ತಜ್ಞ ಪ್ರೊ.ಎಂ.ವಿ.ಶ್ರೀನಿವಾಸ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಷಯ ಮಂಡನೆ: ರಾಜಮಾತೆ ಕೆಂಪನಂಜಮ್ಮಣ್ಣಿ: ಮಾದರಿ ಮೈಸೂರಿನ ತಾಯಿಬೇರು– ಡಾ.ಗಜಾನನ ಶರ್ಮಾ

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್: ಮೈಸೂರು ಪ್ರಾಂತ್ಯಕ್ಕೆ ನೀಡಿದ ಕೊಡುಗೆ– ಚೆನ್ನಸ್ವಾಮಿ ಸೋಸಲೆ,

ಸರ್ ಎಂ.ವಿಶ್ವೇಶ್ವರಯ್ಯ: ಮಂಡ್ಯ ಜಿಲ್ಲೆಯ ಅನ್ನದಾತ–ಪ್ರೊ.ಚಂದ್ರಶೇಖರ ಎಸ್. ಉಷಾಲ.

ಸರ್ ಮಿರ್ಜಾ ಇಸ್ಮಾಯಿಲ್: ಮೈಸೂರು ಪ್ರಾಂತ್ಯದ ಅಭಿವೃದ್ಧಿ–ಡಾ ನಯಿಂಉರ್ ರಹಮಾನ್ ಅವರು ವಿಷಯ ಮಂಡನೆ ಮಾಡಲಿದ್ದಾರೆ.

ಕಾರ್ಯಕ್ರಮದ ನಿರ್ವಹಣೆ– ಸುಜಾತ ಕೃಷ್ಣ, ಸ್ವಾಗತ–ಹರ್ಷ ಪಣ್ಣೆದೊಡ್ಡಿ, ನಿರೂಪಣೆ–ಡಾ.ಕೃಷ್ಣೆಗೌಡ ಹುಸ್ಕೂರು, ವಂದನಾರ್ಪಣೆ–ಅಪ್ಪಾಜಪ್ಪ ಅವರು ಮಾಡಲಿದ್ದಾರೆ.

ಗೋಷ್ಠಿ–2:– ಮಧ್ಯಾಹ್ನ 3.30 ರಿಂದ 4.30ರವರೆಗೆ ಕವಿ ಗೋಷ್ಠಿ–1 ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ ನಡೆಯಲಿದೆ. ಪ್ರಾಧ್ಯಾಪಕರು ಡಾ.ಶಿವರಾಜ ಶಾಸ್ತ್ರಿ ಹೇರೂರ ಅವರು ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿಗಳಾದ ಮುದಿಗೆರೆ ರಮೇಶ್ ಕುಮಾರ್ ಅವರು ಆಶಯ ನುಡಿಯನ್ನು ನೆರವೇರಿಸಲಿದ್ದಾರೆ. ಕವಿಗಳಾದ ಬಾಪು ಖಾಡೆ, ಹರೀಶ್ ಸಿ, ಹೇಮಂತ ಕುಮಾರ್, ಜಯನಂದಾ ಟೋಪ್ರುಗೋಳು, ರಮಾ ಫಣಿಭಟ್ ಗೋಪಿ, ಸೋಮಶೇಖರ್ ಬಳೆಗಾರ್, ಶಿವಸ್ವಾಮಿ ಚೀನಕೇರ, ಟಿ.ಎಂ.ತೋಟಯ್ಯ, ಡಾ.ಕೃಷ್ಣ ಹೊಂಬಾಳ, ಡಾ. ಆನಂದ್ ಇಂದೂರಾ ಅವರು ಗೋಷ್ಠಿ ನಡೆಸಲಿದ್ದಾರೆ.

ಗೋಷ್ಠಿ–3:– ಸಂಜೆ 4.30 ರಿಂದ 6 ಗಂಟೆಯವರೆಗೆ ಕವಿ ಗೋಷ್ಠಿ–2 ಮಹಿಳಾ ವಿಶೇಷ ಗೋಷ್ಠಿ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಕವಯಿತ್ರಿ ಸವಿತಾ ನಾಗಭೂಷಣ ಅವರು ವಹಿಸಲಿದ್ದಾರೆ. ಹಿರಿಯ ಕವಯಿತ್ರಿ ಡಾ.ಕೆ. ಎನ್.ಲಾವಣ್ಯ ಪ್ರಭಾ ಅವರು ಆಶಯ ನುಡಿಯ ನ್ನಾಡಲಿದ್ದಾರೆ. ಕವಯಿತ್ರಿಗಳಾದ ಡಾ.ಶೃತಿ ಬಿ.ಆರ್., ಸಾವಿತ್ರಿ ಮುಜುಂದಾರ್, ನೂತನ್ ದೋಶೆಟ್ಟಿ, ಲಲಿತಾ ಕೆ.ಹೊಸಪ್ಯಾಟಿ, ವಾಸಂತಿ ಅಂಬಲಪಾಡಿ, ಡಾ.ಸಿ.ಸುಮರಾಣಿ ಶಂಭು, ಡಾ.ಫ್ಲೇವಿಯಾ ಕ್ಯಾಸ್ಟಲಿನೋ, ಗೀತಾ ಮಕ್ಕಿಮನೆ, ಇಂದಿರಾ ಜಾನಕಿ (ಹವ್ಯಕ ಕನ್ನಡ), ಜ್ಯೋತಿ ಕಡಹೋಳ, ಲಕ್ಷ್ಮೀ ವಿ.ಭಟ್, ಡಾ.ನಿಕೇತನಾ (ತುಳು ಭಾಷೆ), ಅಭಿಜ್ಞಾ ಪಿ.ಎಮ್.ಗೌಡ, ಅನುರಾಧಾ ಆನಂದ್, ವಸುವತ್ಸಲೆ ಅವರುಗಳು ಮಹಿಳಾ ಕವಿ ಗೋಷ್ಠಿ ನಡೆಸಿಕೊಡಲಿದ್ದಾರೆ.



ಸಾಧಕರಿಗೆ ಸನ್ಮಾನ: ಸಂಜೆ 6 ರಿಂದ 7.30 ಗಂಟೆಯವರೆಗೆ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹಾಗೂ ಸುವರ್ಣ ಮಹೋತ್ಸವದ ನೆನಪಿನಲ್ಲಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.


ಸುತ್ತೂರು ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಲಿದ್ದಾರೆ. ಗದಗ ಡಂಬಳದ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ಮನ್ನಿರಂಜನ ಜಗದ್ಗುರು ಡಾ.ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಸನ್ನಿಧಾನ ವಹಿಸಲಿದ್ದಾರೆ. ಆಂಧ್ರಪ್ರದೇಶ ರಾಜ್ಯಪಾಲರು ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಅವರು ಸನ್ಮಾನಿಸಲಿದ್ದಾರೆ.

ಸನ್ಮಾನಿತರುಗಳು:– ಪರಮಪೂಜ್ಯ ಶ್ರೀ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು (ಕನ್ನಡ ಮಠ, ಕನ್ನಡ ಸೇವೆ) ನ್ಯಾಯಮೂರ್ತಿ.ಕೆ. ಶ್ರೀಧರರಾವ್ (ನ್ಯಾಯಾಂಗ ಕ್ಷೇತ್ರದಲ್ಲಿ ಕನ್ನಡ ಸೇವೆ), ನ್ಯಾಯಮೂರ್ತಿ ನಾಗಮೋಹನದಾಸ್ (ನ್ಯಾಯಾಂಗ ಕ್ಷೇತ್ರದಲ್ಲಿ ಕನ್ನಡ ಸೇವೆ), ನ್ಯಾಯಮೂರ್ತಿ ಪಾಟೀಲ್ (ನ್ಯಾಯಾಂಗ ಕ್ಷೇತ್ರದಲ್ಲಿ ಕನ್ನಡ ಸೇವೆ), ಬಾಳಾಸಾಹೇಬ ಲೋಕಾಪುರ (ಸಾಹಿತ್ಯ), ಮಲಿಕಜಾನ್ ಶೇಖ (ಕನ್ನಡ ಸೇವೆ), ಡಾ.ಪಿ.ಕೃಷ್ಣ ಭಟ್ (ಸಾಹಿತ್ಯ), ಸ.ರಾ.ಸುಳಕೊಡೆ (ಸಾಹಿತ್ಯ), ಕರ್ನಾಟಕ ಸಾಂಸ್ಕೃತಿಕ ಸಂಘ ದಕ್ಷಿಣ ಕ್ಯಾಲಿಫೋರ್ನಿಯಾ, ಅಮೆರಿಕಾ, ವಿದೇಶದಲ್ಲಿ ಕನ್ನಡ ಸಂಘಟನೆ ಸ್ವೀಕರಿಸುವವರು: ಅನಂತ ಪ್ರಸಾದ್ ಅಧ್ಯಕ್ಷರು, ಪ್ರೊ.ಪ್ರಭುಲಿಂಗ ಜಿ. ದಂಡಿನ್ (ಸಾಹಿತ್ಯ), ಡಾ.ಚನ್ನಬಸವಯ್ಯ ಹಿರೇಮಠ (ಶಿಕ್ಷಣ), ಸಮೀರ್ ಅಹ್ಮದ್ (ಸಮಾಜ ಸೇವೆ), ಮೈಕೋ ಕನ್ನಡ ಬಳಗ, ಬೆಂಗಳೂರು ಬಾಷ್ ಸಂಸ್ಥೆ, ಬಿಡದಿ ಘಟಕ, ಕನ್ನಡ ಸಂಘಟನೆ ಸ್ವೀಕರಿಸುವವರು : ರಾಮತೀರ್ಥ ಕೆ.ಎಸ್. ಅಧ್ಯಕ್ಷರು, ಎಂ.ನರಸಿಂಹ, ಬೆಂಗಳೂರು (ಕನ್ನಡ ಸೇವೆ), ಶಿಕಾಗೋ ವಿಶ್ವವಿದ್ಯಾಲಯ ಶಿಕಾಗೋ, ಅಮೆರಿಕಾ, ಕನ್ನಡ ಶಿಕ್ಷಣ ಸ್ವೀಕರಿಸುವವರು: ಶ್ರೀ ಜೇಮ್ಸ್‌ನೆಯ್, ನಿರ್ಮಲ ಕರ್ಪೂರ್ ರಾವ್ ಮತ್ತು ಕೃಷ್ಣ ಕುಮಾರ್ ವಾಷಿಂಗ್‌ಟನ್, ಅಮೆರಿಕಾ, ವಿದೇಶದಲ್ಲಿ ಕನ್ನಡ ಸಂಘಟನೆ, ಕೆ.ವಿ.ಶರತ್ ಚಂದ್ರ ಭಾ.ಪೊ.ಸೇ. ಆಡಳಿತ(ಕನ್ನಡ), ಡಾ. ಮ.ನ. ನಂಜುಂಡಸ್ವಾಮಿ ಭಾ.ಪೊಸೇ ಆಡಳಿತ (ಕನ್ನಡ), ಡಾ.ಅರುಂಧತಿ ಚಂದ್ರಶೇಖರ್ ಭಾ.ಸೊ.ಸೇ ಆಡಳಿತ (ಕನ್ನಡ), ರಶ್ಮಿ.ಜಿಕೆ. ಭಾ.ಹೊ.ಸೇ ಆಡಳಿತ (ಕನ್ನಡ), ನರಸಿಂಹ ಕೋಮರ ಭಾ.ಪೊ.ಸೇ. ಗುಜರಾತಿನಲ್ಲಿ ಕನ್ನಡ ಸಂಘಟನೆ, ಸಿ.ವಿ. ಸುಧೀಂದ್ರ (ಕಾನೂನು), ನಿಸಾರ್ ಅಹಮದ್ ಆಡಳಿತ (ಕನ್ನಡ), ಡಾ.ವಿಶ್ವನಾಥ ವಿ.ಮಳಗಿ (ಶಿಕ್ಷಣ), ಡಾ.ಸುರೇಶ್ ಆರ್. ಸಜ್ಜನ್ (ಸಮಾಜ ಸೇವೆ), ಸುಮುಖಾನಂದ ಜಲವಳ್ಳಿ (ಸಾಹಿತ್ಯ), ಪ್ರವೀಣ ಕುಮಾರ್ ಶೆಟ್ಟಿ ಅರಬ್ ದೇಶ, ಕನ್ನಡ ಸಂಘಟನೆ, ಅಜಿತ ಭಾಸ್ಕರ್ ನ್ಯೂಯಾರ್ಕ್, ಅಮೆರಿಕಾ, ಕ್ರೀಡೆ, ಕನ್ನಡ ಸಂಘಟನೆ, ಡಾ.ಬಿ. ಜನಾರ್ದನ ಭಟ್ (ಸಾಹಿತ್ಯ), ವಿಜಯಕುಮಾರ ಹಲಗಲಿ ಸಿಡ್ನಿ, ಆಸ್ಟ್ರೇಲಿಯಾ, ಕನ್ನಡ ಸಂಘಟನೆ, ಡಾ.ಹೆಚ್.ಎಸ್.ನಿಷ್ಕಲ್ ಗೌಡ (ಸಮಾಜ ಸೇವೆ), ಆರತಿ ಕೃಷ್ಣ ವಿದೇಶಗಳಲ್ಲಿ ಕನ್ನಡ ಸಂಘಟನೆ, ಡಾ.ಪವನ್ ವಿ.ಎಸ್.ತೈವಾನ್, ಕನ್ನಡ ಸಂಘಟನೆ, ಡಾ.ಎನ್.ಶಿವಶಂಕರ್ ಭಾ.ಆ.ಸೇ. ಆಡಳಿತ(ಕನ್ನಡ), ಡಿ.ಆರ್.ಮಧುಸೂದನ (ಸಮಾಜ ಸೇವೆ), ಡಾ.ಶಂಕರೇಗೌಡ (ವೈದ್ಯಕೀಯ ಸೇವೆ), ರವಿ ಟಿ. ವಿಜ್ಞಾನಿ, ಇಸ್ರೋ, ರಾಜು ಮಳವಳ್ಳಿ (ಮಾಧ್ಯಮ ಕ್ಷೇತ್ರದಲ್ಲಿ ಕನ್ನಡ), ಟಿ.ಎನ್. ಶಿವಕುಮಾರ್ (ಸಾಹಿತ್ಯ), ಡಿ.ಸಿ.ಮಹದೇವ್ (ಸಾಹಿತ್ಯ), ಎಂ.ಎಸ್.ನಾಗಲಿಂಗೇಗೌಡ (ಶಿಕ್ಷಣ), ಡಾ.ಮೂಡಂಬೈಲ್ ರವಿ ಶೆಟ್ಟಿ ಅರಬ್ ದೇಶ, ಕನ್ನಡ ಸಂಘಟನೆ, ಡಾ.ಪಿ.ಎಂ. ಜಗದೀಶ್ ಕುಮಾರ್ (ವೈದ್ಯಕೀಯ) ಪ್ರಕಾಶ್‌ಗೌಡ ಭಾ.ಪೊ.ಸೇ, ಆಡಳಿತ (ಕನ್ನಡ), ಮೆಲ್ಬರ್ನ್ ಕನ್ನಡ ಸಂಘ ಆಸ್ಟ್ರೇಲಿಯಾ, ಕನ್ನಡ ಸಂಘಟನೆ ಮತ್ತು ಸ್ವಂತ ಕನ್ನಡ ಭವನ (ಸ್ವೀಕರಿಸುವವರು: ಶ್ರೀನಿವಾಸ ಶರ್ಮ ಇವರುಗಳು ಸನ್ಮಾನವನ್ನು ಸ್ವೀಕರಿಸಲಿದ್ದಾರೆ.) ಬಸವರಾಜು ಮಾಲಗತ್ತಿ ಆಡಳಿತ–ಕನ್ನಡ



ಸಾಹಿತ್ಯ ಸಮ್ಮೇಳನಕ್ಕೆ ಮೆರಗು ನೀಡುತ್ತಿರುವ ಸ್ವಾಗತ ಕಮಾನು ಮತ್ತು ರಾರಾಜಿಸುತ್ತಿರುವ ಕನ್ನಡ ಧ್ವಜಗಳು.

ಸಾಹಿತಿ ಊಗಿನಹಳ್ಳಿ ಮಹೇಶ್ ಸಮ್ಮೇಳನದ ಕಾವ್ಯವಾಚನಕ್ಕೆ ಆಯ್ಕೆ



ಕಿಕ್ಕೇರಿ, ಡಿ.19– ಹೋಬಳಿಯ ಊಗಿನಹಳ್ಳಿ ಗ್ರಾಮದ ಶ್ರಮಿಕ ನೇಕಾರ ಕುಟುಂಬದ ಸಾಹಿತಿ ಊಗಿನಹಳ್ಳಿ ಮಹೇಶ್ ಅವರು ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾವ್ಯ ವಾಚನ ಗೋಷ್ಠಿಗೆ ಆಯ್ಕೆಯಾಗಿದ್ದಾರೆ. ಇವರು ಜೇನುಗೂಡು ಸಾಹಿತ್ಯ ವೇದಿಕೆ ಕಟ್ಟಿಕೊಂಡು ತಮ್ಮದೇ ಆದ ಅಳಿಲು ಸೇವೆಯನ್ನು ಕನ್ನಡ ಭಾಷೆ ಉಳಿವಿಗಾಗಿ ಮಾಡುತ್ತಿದ್ದಾರೆ.

ಸಮ್ಮೇಳನದ ಊಟಕ್ಕೆ ಭರ್ಜರಿ ತಯಾರಿ



ಮೂರು ದಿನಗಳ ಕಾಲ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವವರಿಗಾಗಿ ರುಚಿರುಚಿಯಾದ ಊಟದ ತಯಾರಿ ನಡೆಸುತ್ತಿರುವುದು. ಬೆಳಗಿನ ತಿಂಡಿಗೆ ಇಡ್ಲಿ–ವಡೆ, ಚಟ್ನಿ,ಸಾಂಬಾರು, ಮೈಸೂರು ಪಾಕು. ಮದ್ಯಾಹ್ನದ ಊಟಕ್ಕೆ ಚಪಾತಿ, ಅನ್ನ–ಸಾಂಬಾರ್, ಕಾಯಿ ಹೋಳಿಗೆ, ತುಪ್ಪ, ಪಲ್ಯವನ್ನು ಬಡಿಸಲು ಸಿದ್ದತೆ ನಡೆಸಲಾಗುತ್ತಿದೆ.

ಅಂತಿಮ ಸಿದ್ಧತೆ ಪರಿಶೀಲನೆ



3 ದಿನಗಳ ಕಾಲ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಗತ್ಯವಿರುವ ವೇದಿಕೆ, ಪಾರ್ಕಿಂಗ್, ವಸ್ತುಪ್ರದರ್ಶನ ಸೇರಿದಂತೆ ಇನ್ನಿತರ ಸೌಲಭ್ಯಗಳ ಅಂತಿಮ ಹಂತದ ಸಿದ್ಧತೆಯನ್ನು ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ಇಂದು ಸಾಧು ಕೋಕಿಲ, ರಾಜೇಶ್ ಕೃಷ್ಣನ್ ಸಂಗೀತ ಸಂಜೆ



ಸಾಧುಕೋಕಿಲ



ರಾಜೇಶ್ ಕೃಷ್ಣನ್

ಮಂಡ್ಯ: 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮೂರು ದಿನಗಳ ಕಾಲ ಪ್ರತಿ ದಿನ ಸಂಜೆ ಸಮ್ಮೇಳನದ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಮೊದಲ ದಿನವಾದ ಶುಕ್ರವಾರ ಸಂಜೆ 7.30ರ ನಂತರ ಸಂಗೀತ ನಿರ್ದೇಶಕ ಹಾಗೂ ಹಾಸ್ಯ ಕಲಾವಿದ ಸಾಧುಕೋಕಿಲ ಮತ್ತು ಗಾಯಕ ರಾಜೇಶ್ ಕೃಷ್ಣನ್ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ. ಕಾರ್ಯಕ್ರಮದಲ್ಲಿ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಗೀತೆಗಳನ್ನು ಹಾಡುವ ಮೂಲಕ ಪ್ರೇಕ್ಷಕರನ್ನು ರಂಜಿಸಲಿದ್ದಾರೆ.

ಅತಿಥಿ ದೇವೋಭವ...



ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಗುರುವಾರ ಮಂಡ್ಯಕ್ಕೆ ಆಗಮಿಸಿದ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರನ್ನು ಜಿಲ್ಲಾಧಿಕಾರಿ ಡಾ.ಕುಮಾರ್ ತಮ್ಮ ನಿವಾಸಕ್ಕೆ ಊಟಕ್ಕೆ ಆಹ್ವಾನಿಸಿ ಅತಿಥಿ ಸತ್ಕಾರ ಮಾಡುವುದರೊಂದಿಗೆ ಭಾರಿ ಗಾತ್ರದ ಹಾರವನ್ನು ಹಾಕಿ ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ಗಣಿಗ ರವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಾಹಿತ್ಯ ಸಮ್ಮೇಳನಕ್ಕೆ ಸಿದ್ದಗೊಂಡಿರುವ ಬೃಹತ್ ವೇದಿಕೆ...



ಮಂಡ್ಯದ ಸಾಂಜ್ಯೋ ಆಸ್ಪತ್ರೆ ಹಿಂಬಾಗ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧಗೊಂಡಿರುವ ಬೃಹತ್ ವೇದಿಕೆ. ಈಗಾಗಲೇ ಸಿದ್ಧತೆಗಳನ್ನು ವೀಕ್ಷಿಸಲು ಕನ್ನಡಾಭಿಮಾನಿಗಳು ಮತ್ತು ಸಾರ್ವಜನಿಕರು ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ.

ಸಮ್ಮೇಳನದಲ್ಲಿ ಡಾ.ರಾಜ್ ಕುರಿತ ಪುಸ್ತಕ ಲೋಕಾರ್ಪಣೆ

ಮಂಡ್ಯ: ಜಿಲ್ಲೆಯಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದ ಹಿನ್ನೆಲೆ ಕನ್ನಡದ ಹೆಮ್ಮೆ ಡಾ.ರಾಜ್‌ಕುಮಾರ್ ಅವರ ಕುರಿತ ಕೃತಿಯ ಲೋಕಾರ್ಪಣೆಯನ್ನು ಡಿಸೆಂಬರ್ 20ರ ಬೆಳಿಗ್ಗೆ 9 ಗಂಟೆಗೆ ಸಮ್ಮೇಳನದ ಬ್ಲಾಕ್ ನಂ 2ರ ಸಂಖ್ಯೆ 1ನೇ ಪುಸ್ತಕ ಮಳಿಗೆಯಲ್ಲಿ ಮಾಡಿ, ಮಾರಾಟ ಮಾಡಲಾಗುವುದು ಎಂದು ಕೃತಿಯ ಲೇಖಕ ಡಾ.ಡಿ. ಗುರುಮೂರ್ತಿ ಹಾರೋಹಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1997ರಿಂದ 2003ರವರೆಗೆ 7 ವರ್ಷಗಳ ಕಾಲ ಡಾ. ರಾಜ್‌ಕುಮಾರ್ ಅವರು ಜೀವನದ ಅಧ್ಯಯನ ಮಾಡಿ ಡಾ.ರಾಜ್‌ಕುಮಾರ್ ದಿ ಗ್ರೇಟ್ ಕೃತಿಯನ್ನು ರಚಿಸಲಾಗಿದ್ದು, ಸದರಿ ಕೃತಿಗೆ ರಾಜ್‌ಕುಮಾರ್ ಅವರ ಆಪ್ತ ದೊರೆಸ್ವಾಮಿ ಅವರ ಹಿನ್ನುಡಿಯಿದೆ ಎಂದರು.

ಲೋಕಾರ್ಪಣೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡ್ಯ ಜಿಲ್ಲಾ ಕಸಾಪ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ ವಹಿಸಲಿದ್ದು, ಜಿಲ್ಲಾಧಿಕಾರಿ ಡಾ.ಕುಮಾರ ಅವರು ಲೋಕಾರ್ಪಣೆ ಮಾಡುವರು, ಪಾಂಡವಪುರದ ಪುಸ್ತಕಮನೆಯ ಮಾಲೀಕ ಎಂ.ಅಂಕೇಗೌಡ, ಚರ್ಮರೋಗ ವೈದ್ಯ ಡಾ.ಎಸ್.ಸಿ.ಶಂಕರೇಗೌಡ ಘನ ಉಪಸ್ಥಿತರಿರಲಿದ್ದು, ಹಲವು ಲೇಖಕರು, ಚಿಂತಕರು, ಸಾಹಿತಿಗಳು ಉಪಸ್ಥಿತರಿರಲಿದ್ದಾರೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ರಾಜ್ಯ ಪ್ರದೇಶ ಆರ್ಯ ಈಡಿಗ ಸಂಘದ ನಿರ್ದೇಶಕ ವಸಂತ್ ಕುಮಾರ್, ಲೋಹಿತ್‌ಕುಮಾರ್ ಇದ್ದರು.

ಮೈಸೂರು ಮಿತ್ರ


ಸಂಸತ್‌ನಲ್ಲಿ ಹೈಡ್ರಾಮಾ: ಬಿಜೆಪಿ ಸಂಸದರಿಗೆ ಗಾಯ; ಡಾ. ಸಿ.ಎನ್.ಮಂಜುನಾಥ್ ಚಿಕಿತ್ಸೆ

ನವದೆಹಲಿ, ಡಿ.19– 'ಸಂವಿಧಾನ ಶಿಲ್ಪಿ' ಡಾ. ಬಿ.ಆರ್ ಅಂಬೇಡ್ಕರ್ ಅವರ ವಿಚಾರವಾಗಿ ಸಂಸತ್ ಭವನದ ಆವರಣದಲ್ಲಿ ದೊಡ್ಡ ಹೈಡ್ರಾಮಾವೇ ನಡೆದಿದ್ದು, ಪ್ರತಿಭಟನೆ ವೇಳೆ ಉಂಟಾದ ತಳ್ಳಾಟದಲ್ಲಿ ಬಿಜೆಪಿ ಸಂಸದರಿಬ್ಬರು ಗಾಯಗೊಂಡಿದ್ದಾರೆ.

ಅಂಬೇಡ್ಕರ್ ಅವರನ್ನು ಅವಮಾನಿಸಿರುವ ಪ್ರತಿಪಕ್ಷ ಕಾಂಗ್ರೆಸ್ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿ ಘೋಷಣೆಗಳನ್ನು ಕೂಗುತ್ತ, ಫಲಕಗಳನ್ನು ಹಿಡಿದು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸಂಸದರು ಸಂಸತ್ತಿನ ಆವರಣದೊಳಗೆ ಪ್ರತಿಭಟಿಸಿದರು.

ಮತ್ತೊಂದೆಡೆ ಅಂಬೇಡ್ಕರ್ ಕುರಿತು ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ರಾಜೀನಾಮೆಗೆ ಆಗ್ರಹಿಸಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ 'ಇಂಡಿಯಾ' ಬಣದ ಸಂಸದರು ನೀಲಿ ಬಣ್ಣದ ಬಟ್ಟೆ ಧರಿಸಿ ಇಂದು (ಗುರುವಾರ) ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಮಕರ ದ್ವಾರ ಬಳಿ ಸಂಘರ್ಷ: 'ಇಂಡಿಯಾ' ಬಣದ ಸದಸ್ಯರು ಸಂಸತ್ತಿನ ಆವರಣದಲ್ಲಿರುವ ಬಿ.ಆರ್ ಅಂಬೇಡ್ಕರ್ ಅವರ ಪ್ರತಿಮೆಯ ಬಳಿ 'ಜೈ ಭೀಮ್' ಮತ್ತು 'ಅಮಿತ್



ಗಾಯಗೊಂಡಿರುವ ಸಂಸದ

ಶಾ ಮಾಫಿ ಮಾಂಗೋ' ಪೋಸ್ಟರ್‌ಗಳು ಹಾಗೂ ಅಂಬೇಡ್ಕರ್ ಅವರ ಭಾವಚಿತ್ರವನ್ನು ಹಿಡಿದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನಡೆಸುತ್ತಿದ್ದ 'ಇಂಡಿಯಾ' ಬಣ ಸಂಸದರು ಹಾಗೂ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದ ಸಂಸದರು ಸಂಸತ್ತಿನ ಮಕರ ದ್ವಾರ ಬಳಿ ಮುಖಾಮುಖಿಯಾಗಿದ್ದು, ಈ ವೇಳೆ ಸಂಸತ್ ಭವನದ ಆವರಣದಲ್ಲಿ ತಳ್ಳಾಟ ಮತ್ತು ನೂಕು–ನುಗ್ಗಲು ಆರಂಭವಾಯಿತು.

ಬಿಜೆಪಿ ಸಂಸದನಿಗೆ ಗಾಯ: ಈ ನೂಕಾಟ–ತಳ್ಳಾಟದ ವೇಳೆ ಬಿಜೆಪಿ ಸಂಸದ ಪ್ರತಾಪ್ ಸಾರಂಗಿ ಗಾಯಗೊಂಡಿದ್ದು, ವೈದ್ಯರು ಅವರ ಗಾಯಕ್ಕೆ ಹೊಲಿಗೆ ಹಾಕಿದ್ದು, ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದು ಬಂದಿದೆ. ಇದೇ ಘಟನೆಯಲ್ಲಿ ಮತ್ತೋರ್ವ ಬಿಜೆಪಿ ಸಂಸದ ಮುಕೇಶ್ ರಜಪೂತ್ ಕೂಡ ಗಾಯಗೊಂಡಿದ್ದು ಅವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ.

ಡಾ. ಸಿಎನ್ ಮಂಜುನಾಥ್ ಚಿಕಿತ್ಸೆ: ಇನ್ನು ತಳ್ಳಾಟದ ವೇಳೆ ಗಾಯ ಗೊಂಡ ಸಂಸದ ಸಾರಂಗಿಗೆ ಕರ್ನಾಟಕದ ಸಂಸದ ವೈದ್ಯ ಡಾ. ಸಿಎನ್ ಮಂಜುನಾಥ್ ಪ್ರಥಮ ಚಿಕಿತ್ಸೆ ನೀಡಿದರು. ತಲೆಗೆ ಗಂಭೀರವಾಗಿ ಗಾಯವಾಗಿ ರಕ್ತ ಸುರಿಯಲು ಆರಂಭಿಸಿದ್ದರಿಂದ ಕರ್ನಾಟಕದ ಸಂಸದ ಹಾಗೂ ಜಯ ದೇವ ಆಸ್ಪತ್ರೆಯ ಮಾಜಿ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್, ಅವರಿಗೆ ಪ್ರಥಮ ಚಿಕಿತ್ಸೆ ನೀಡಿದರು.

ಬಿಜೆಪಿ ಸಂಸದನ ತಳ್ಳಿದರೇ ರಾಹುಲ್ ಗಾಂಧಿ: ಇನ್ನು ಈ ತಳ್ಳಾಟಕ್ಕೆ ರಾಹುಲ್ ಗಾಂಧಿ ಅವರೇ ಕಾರಣ ಎಂದು ಬಿಜೆಪಿ ಸಂಸದರು ಆರೋಪಿಸಿದ್ದು, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರತಿಭಟನಾ ನಿರತ ಸಂಸದರನ್ನು ತಳ್ಳಿದ್ದು, ಇದರಿಂದಲೇ ಸಂಸದ ಮುಕೇಶ್ ರಜಪೂತ್ ಮತ್ತು ಸಾರಂಗಿ ಕೆಳಗೆ ಬಿದ್ದುಬಿಟ್ಟರು. ಆಗ ಅವರಿಗೆ ಗಾಯಗಳಾಗಿವೆ ಎಂದು ಹೇಳಿದ್ದಾರೆ.

ಬಿಜೆಪಿ ಸಂಸದರೇ ರಾಹುಲ್ ಗಾಂಧಿ ತಡೆದರು: ಇನ್ನು ಬಿಜೆಪಿ ನಾಯಕರ ಆರೋಪಗಳನ್ನು ನಿರಾಕರಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿ ಸಂಸದರೇ ರಾಹುಲ್ ಗಾಂಧಿ ಅವರು ಸಂಸತ್ ಪ್ರವೇಶಿಸದಂತೆ ತಡೆದರು ಎಂದು ಆರೋಪಿಸಿದ್ದಾರೆ.

ಸಂಸತ್‌ನಲ್ಲಿ ಬಿಜೆಪಿ ಸಂಸದರ ಮೇಲೆ ದೈಹಿಕ ಹಲ್ಲೆ ಆರೋಪ; ರಾಹುಲ್ ಗಾಂಧಿ ವಿರುದ್ಧ ಕೇಸ್ ದಾಖಲು

ನವದೆಹಲಿ, ಡಿ.19– ಪಾರ್ಲಿಮೆಂಟ್‌ನ ಸದನದ ಪ್ರವೇಶದ ಮೆಟ್ಟಿಲುಗಳಲ್ಲಿ ಪ್ರತಿಪಕ್ಷಗಳು ಮತ್ತು ಎನ್‌ಡಿಎ ಸಂಸದರ ನಡುವಿನ ವಾಗ್ವಾದ ಮತ್ತು ಹಲ್ಲೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಸಂಸತ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಇಂದು ಕೇಸ್ ದಾಖಲಿಸಿದ್ದಾರೆ.

ಇಂದು ಸಂಸತ್ತಿನ ಆವರಣದಲ್ಲಿ ರಾಹುಲ್ ಗಾಂಧಿ ಅವರ ಮೇಲೆ ದೈಹಿಕ ಹಲ್ಲೆ ಮತ್ತು ಪ್ರಚೋದನೆ ಆರೋಪದಡಿ ಅನುರಾಗ್ ಠಾಕೂರ್ ಮತ್ತು ಬಾನ್ಸುರಿ ಸ್ವರಾಜ್ ಸೇರಿದಂತೆ ಬಿಜೆಪಿ ಸಂಸದರು ದೂರು ಸಲ್ಲಿಸಿದ್ದರು. ಕೊಲೆ ಯತ್ನ ಮತ್ತು ಇತರ ಆರೋಪಗಳ ಅಡಿಯಲ್ಲಿ ದೂರು ನೀಡಿದ್ದರು.

ಭಾರತೀಯರ ಸೆಕ್ಷನ್ 117 (ಸ್ವಯಂಪ್ರೇರಿತವಾಗಿ ಘೋರವಾದ ಗಾಯವನ್ನುಂಟು ಮಾಡುವುದು), 125 (ಇತರರ ಜೀವ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಕ್ರಿಯೆ), 131 (ಅಪರಾಧ ಬಲದ ಬಳಕೆ), 351 (ಅಪರಾಧದ ಬೆದರಿಕೆ) ಮತ್ತು 3(5) (ಸಾಮಾನ್ಯ ಉದ್ದೇಶ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಕಲಂ 109, 115, 117, 125, 131 ಮತ್ತು 351 ಅಡಿಯಲ್ಲಿ ಬಿಜೆಪಿ ದೂರು ದಾಖಲಿಸಿದೆ. ಸೆಕ್ಷನ್ 109 ಕೊಲೆ ಯತ್ನದ ವಿಭಾಗವಾಗಿದೆ, ಸೆಕ್ಷನ್ 117 ಉದ್ದೇಶಪೂರ್ವಕವಾಗಿ ಗಂಭೀರ ಗಾಯವನ್ನು ಉಂಟುಮಾಡುತ್ತದೆ. ಆದರೆ, ದೆಹಲಿ ಪೊಲೀಸರು ರಾಹುಲ್ ಗಾಂಧಿ ವಿರುದ್ಧ ಬಿಎನ್‌ಎಸ್‌ನ ಸೆಕ್ಷನ್ 109ರ ಅಡಿಯಲ್ಲಿ ಕೊಲೆ ಯತ್ನದ ಅಡಿಯಲ್ಲಿ ಪ್ರಕರಣ ದಾಖಲಿಸದಿರಲು ನಿರ್ಧರಿಸಿದ್ದಾರೆ.

ರಾಜ್ಯಸಭೆಯಲ್ಲಿ ಹಕ್ಕುಚ್ಯುತಿ ನೋಟೀಸ್ ಮಂಡಿಸಿದ ಖರ್ಗೆ

ನವದೆಹಲಿ, ಡಿ.19– ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ವಿರುದ್ಧ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಇಂದು ವಿಶೇಷ ಹಕ್ಕುಚ್ಯುತಿ ನೋಟೀಸ್ ಅನ್ನು ರಾಜ್ಯಸಭಾಧ್ಯಕ್ಷರಿಗೆ ಸಲ್ಲಿಸಿದ್ದಾರೆ.

ಅಮಿತ್ ಶಾ ಅವರು ಮೊನ್ನೆ, ಭಾರತ ಸಂವಿಧಾನದ 75 ವರ್ಷಗಳ ವೈಭವದ ಪಯಣ ಕುರಿತ ಚರ್ಚೆಗೆ ರಾಜ್ಯಸಭೆಯಲ್ಲಿ ಉತ್ತರ ನೀಡುತ್ತಿದ್ದ ವೇಳೆ, ಅಂಬೇಡ್ಕರ್ ಅವರಿಗೆ ಅವಮಾನಕರ ಮತ್ತು ಮಾನಹಾನಿಕರವಾಗುವ ರೀತಿಯಲ್ಲಿ ಹೇಳಿಕೆ ನೀಡಿದ್ದರು. ಸದನ ಸದಸ್ಯರು ಯಾವುದೇ ದುರ್ನಡತೆ ಅಥವಾ ಪ್ರತಿಬಿಂಬವನ್ನು ಬಿತ್ತರಿಸುವುದು ಮತ್ತು ಮಾನಹಾನಿಕರ ಹೇಳಿಕೆಗಳನ್ನು ನೀಡುವುದು ಸವಲತ್ತುಗಳ ಉಲ್ಲಂಘನೆ ಮತ್ತು ಸದನಕ್ಕೆ ತೋರಿಸುವ ಅಗೌರವವಾಗಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರನ್ನು ಬಳಸುವುದು ಡಾ. ಅಂಬೇಡ್ಕರ್ ಅವರಿಗೆ ಸ್ಪಷ್ಟವಾದ ಅವಮಾನವಾಗಿದೆ. ಸದನದೊಳಗೆ ನೀಡಿದ ಹೇಳಿಕೆಗಳು ಸಂಪೂರ್ಣವಾಗಿ ಅವಹೇಳನಕಾರಿಯಾಗಿದೆ. ಅಮಿತ್ ಶಾ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ನನ್ನ ಮೊಣಕಾಲುಗಳಿಗೆ ಗಾಯ: ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಪತ್ರ ಬರೆದಿರುವ ಮಲ್ಲಿಕಾರ್ಜುನ ಖರ್ಗೆ ಅವರು, ಇಂದು ಸಂಸತ್ತು ಆವರಣದಲ್ಲಿ ಬಿಜೆಪಿ ಸಂಸದರು ತಮ್ಮನ್ನು ತಳ್ಳಿದ್ದರಿಂದ ಸಮತೋಲನ ಕಳೆದುಕೊಂಡು ಕೆಳಗೆ ಬಿದ್ದೆ ಇದರಿಂದ ನನ್ನ ಮೊಣಕಾಲಿಗೆ ಪೆಟ್ಟಾಯಿತು ಎಂದಿದ್ದಾರೆ. ಈ ಬಗ್ಗೆ ತನಿಖೆಗೆ ಆದೇಶಿಸುವಂತೆ ಒತ್ತಾಯಿಸುತ್ತೇನೆ ಶಸ್ತ್ರಚಿಕಿತ್ಸೆಯಾದ ನನ್ನ ಮೊಣಕಾಲುಗಳಿಗೆ ನೋವಾಗಿದೆ.

ಇಂದು ಸಂಸತ್ತಿನ ಮಕರ ದ್ವಾರ ಮುಂದೆ ಪ್ರತಿಭಟನೆ ಮಾಡುತ್ತಿದ್ದಾಗ ತಳ್ಳಿದ್ದರಿಂದ ಸಮತೋಲನ ಕಳೆದುಕೊಂಡೆ. ನಂತರ ಕಾಂಗ್ರೆಸ್ ಸಂಸದರು ನನಗೆ ಕುರ್ಚಿ ತಂದು ನನ್ನನ್ನು ಅದರ ಮೇಲೆ ಕೂರಿಸಿದರು. ಬಹಳ ಕಷ್ಟದಿಂದ ನನ್ನ ಸಹೋದ್ಯೋಗಿಗಳ ಬೆಂಬಲದೊಂದಿಗೆ ನಾನು 11 ಗಂಟೆಗೆ ಸದನಕ್ಕೆ ಕುಂಟುತ್ತಾ ಬಂದೆ ಎಂದಿದ್ದಾರೆ.

ಡಿ.28, ಮೈಸೂರಿನ ವಸ್ತುಪ್ರದರ್ಶನದಲ್ಲಿ 'ಫ್ಯೂಚರ್ ಮಾಡೆಲ್ ಆಫ್ ಇಂಡಿಯಾ ಫ್ಯಾಷನ್ ಶೋ' ಸ್ಪರ್ಧೆ

ಮೈಸೂರು, ಡಿ.19(ಜಿಎ)–ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಹಾಗೂ ತಿಬ್ಬಾಸ್ ಗ್ರೂಪ್ ಮಾಡೆಲಿಂಗ್ ಕಂಪನಿ ವತಿಯಿಂದ ಡಿ.28ರಂದು ಸಂಜೆ 5.30ಕ್ಕೆ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ ದಲ್ಲಿರುವ ಪಿ.ಕಾಳಿಂಗರಾವ್ ಮಂಟಪದಲ್ಲಿ ಫ್ಯೂಚರ್ ಮಾಡೆಲ್ ಆಫ್ ಇಂಡಿಯಾ ಫ್ಯಾಷನ್ ಶೋ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಅ.3ರಿಂದ ಆರಂಭಗೊಂಡಿರುವ ದಸರಾ ವಸ್ತುಪ್ರದರ್ಶನ ಡಿ.31 ರಂದು ಅಂತ್ಯಗೊಳ್ಳಲಿದ್ದು, ಕಳೆದ ಎರಡೂವರೆ ತಿಂಗಳಿನಲ್ಲಿ ಸುಮಾರು 15 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿ, ಈ ಬಾರಿಯ ವಸ್ತು ಪ್ರದರ್ಶನದ ಬಗ್ಗೆ ಭಾರಿ ಮೆಚ್ಚುಗೆ ವ್ಯಕ್ತಪಡಿಸಿ,



ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಫ್ಯೂಚರ್ ಮಾಡೆಲ್ ಆಫ್ ಇಂಡಿಯಾ ಫ್ಯಾಷನ್ ಶೋ ಸ್ಪರ್ಧೆ ಪೋಸ್ಟರ್ ಅನ್ನು ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್‌ಖಾನ್ ಬಿಡುಗಡೆಗೊಳಿಸಿದರು.

ವೀಕ್ಷಕರ ಪುಸ್ತಕದಲ್ಲಿ ಬರೆದಿದ್ದಾರೆ ಎಂದರು.

ದಸರಾ ವಸ್ತುಪ್ರದರ್ಶನ ಆರಂಭವಾದ ದಿನದಂದು ವಿವಿಧ ಉಪ ಸಮಿತಿಗಳನ್ನು ರಚಿಸಿದ್ದು, ಸಾಂಸ್ಕೃತಿಕ ಸಮಿತಿ ಮೂಲಕ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಅದರಂತೆ ತಿಬ್ಬಾಸ್ ಗ್ರೂಪ್ ಮಾಡೆಲಿಂಗ್ ಕಂಪನಿಗೂ ಅವಕಾಶ ನೀಡಲಾಗಿದೆ. ಅವರ ಸಂಸ್ಥೆ ವತಿಯಿಂದ ಹಲವಾರು ವರ್ಷಗಳಿಂದ ಉತ್ತಮವಾಗಿ ಫ್ಯಾಷನ್ ಶೋಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಭಾರತೀಯ ಸಂಸ್ಕೃತಿ ಪರಂಪರೆಯನ್ನು ಬಿಂಬಿಸುವ ಕೆಲಸವನ್ನು ಮಾಡಿದ್ದಾರೆ ಎಂದು ತಿಳಿಸಿದರು.

ಫ್ಯೂಚರ್ ಮಾಡೆಲ್ ಆಫ್ ಇಂಡಿಯಾ ಫ್ಯಾಷನ್ ಶೋ ಸ್ಪರ್ಧೆಗೆ ವಿವಿಧ ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ರಾಜ್ಯ ಮಟ್ಟದ ಈ ಸ್ಪರ್ಧೆಯಲ್ಲಿ ಅಂತಿಮವಾಗಿ 100 ಮಂದಿ ಪಾಲ್ಗೊಳ್ಳಲಿದ್ದಾರೆ. ವಿವಿಧ ವಯೋಮಾನದವರ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, 2 ವರ್ಷದಿಂದ 65 ವರ್ಷ ವಯಸ್ಸಿನವರಿಗೆ ಅವಕಾಶವಿದೆ. ಭಾಗವಹಿಸುವವರಿಗೆ 1 ಸಾವಿರ ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ನಮ್ಮ ಸಂಸ್ಕೃತಿ ಬಿಂಬಿಸುವ ಸಾಂಪ್ರದಾಯಿಕ ಉಡುಗೆಯ ಫ್ಯಾಷನ್ ಶೋ ಇದಾಗಿದೆ' ಎಂದರು.

ವಿಶೇಷವಾಗಿ ವೃತ್ತಿಯಲ್ಲಿ ಬ್ಯಾಂಕ್ ನೌಕರರಾಗಿರುವ ಅಂಧೆ ಫ್ಯಾಷನ್ ಶೋನಲ್ಲಿ ಹೆಜ್ಜೆ ಹಾಕಲಿದ್ದಾರೆ. ವಿಜೇತರಿಗೆ ನಗದು ಬಹುಮಾನ, ಟ್ರೋಫಿ, ಪ್ರಮಾಣಪತ್ರ ಹಾಗೂ ಕ್ರೌನ್ ನೀಡಲಾಗುವುದು. ಹೊಸ ಪ್ರತಿಭೆಗಳನ್ನು ಫ್ಯಾಷನ್ ಉದ್ಯಮಕ್ಕೆ ಪರಿಚಯಿಸುವ ಉದ್ದೇಶವನ್ನು ಕಾರ್ಯಕ್ರಮದ ಮೂಲಕ ಹೊಂದಲಾಗಿದೆ. ಆಸಕ್ತರು ನೋಂದಣಿ, ಮಾಹಿತಿಗೆ ಮೊ.ಸಂ. 98806 47392 ಸಂಪರ್ಕಿಸಿ ಎಂದು ತಿಳಿಸಿದರು.

ಪ್ರಾಧಿಕಾರದಿಂದ ಪ್ರತಿ ಶನಿವಾರ ರಾಜ್ಯ ಮಟ್ಟದ ಸಮೂಹ ನೃತ್ಯ, ಗಾಯನ ಹಾಗೂ ಶಾಸ್ತ್ರೀಯ ಸಮೂಹ ನೃತ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಜಾನಪದ ಹಾಗೂ ಶಾಸ್ತ್ರೀಯ ಸಮೂಹ ನೃತ್ಯವನ್ನೂ ಮಾಡಬಹುದು. ಅಂತರರಾಜ್ಯ ನೃತ್ಯ ಸ್ಪರ್ಧೆಯೂ ನಡೆಯಲಿದೆ. ವಿಜೇತರಿಗೆ ಪ್ರಥಮ ಬಹುಮಾನವಾಗಿ 30 ಸಾವಿರ, ದ್ವಿತೀಯ ಬಹುಮಾನವಾಗಿ 20 ಸಾವಿರ, ತೃತೀಯ ಬಹುಮಾನವಾಗಿ 15 ಸಾವಿರ, ಎರಡು ಸಮಾಧಾನಕರ ಬಹುಮಾನ (ತಲಾ 5ಸಾವಿರ) ನೀಡಲಾಗುವುದು. ಪಾಲ್ಗೊಳ್ಳುವ ತಂಡಗಳಿಗೆ ಪ್ರಮಾಣ ಪತ್ರ ಹಾಗೂ ಪದಕಗಳನ್ನು ವಿತರಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಾಧಿಕಾರದ ಸಿಇಒ ಕೆ.ರುದ್ರೇಶ್, ತಿಬ್ಬಾದೇವಿ ಸಮೂಹ ಮಾಡೆಲಿಂಗ್ ಕಂಪನಿಯ ಸಂಸ್ಥಾಪಕ ಡಿ.ಸಿ.ನಾಗೇಶ್ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಐ.ಡಿ.ಶಿವಾನಿ ಉಪಸ್ಥಿತರಿದ್ದರು.

ಹನುಮನ ಹಬ್ಬದ ಭಿತ್ತಿಪತ್ರ ಬಿಡುಗಡೆ



ಮೈಸೂರಿನಲ್ಲಿ ಡಿಸೆಂಬರ್ 28ರಂದು ನಡೆಯಲಿರುವ ಹನುಮ ಹಬ್ಬದ ಭಿತ್ತಿಪತ್ರವನ್ನು ಶ್ರೀರಾಮಸೇನಾ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಅನಾವರಣಗೊಳಿಸಿದರು. ಈ ವೇಳೆ ಸಮಿತಿಯ ಸಂಜಯ್, ಜೀವನ್, ಅಭಿಲಾಷ್, ಕಿರಣ್, ನಿತಿನ್, ಗೈಡ್ ಚಂದ್ರು, ಸಾಗರ್, ರಜತ್, ರಘು, ರಮೇಶ್ ಜೈನ್ ಇನ್ನಿತರರು ಉಪಸ್ಥಿತರಿದ್ದರು.

ನಬಾರ್ಡ್ ಸಾಲದ ನೆರವು ಕಡಿತ ಖಂಡಿಸಿ ಜನವರಿ ಕೊನೆ ವಾರ ಆರ್‌ಬಿಐ ಎದುರು ಪ್ರತಿಭಟನೆ

ಮೈಸೂರು, ಡಿ.19(ಜಿಎ)–ನಬಾರ್ಡ್



ಸಾಲ ತಗ್ಗಿಸುವಿಕೆ ವಿರುದ್ಧ ಬರುವ ಜನವರಿ ಕೊನೇ ವಾರದಲ್ಲಿ ರಾಜ್ಯ ರೈತ ಸಂಘದ ವತಿಯಿಂದ ಬೆಂಗಳೂರಿನ ರಿಸರ್ವ್ ಬ್ಯಾಂಕ್ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಬಾರ್ಡ್ ಸಾಲ ತಗ್ಗಿಸಿದ್ದರಿಂದಾಗಿ ರೈತರು ಕೃಷಿ ಚಟುವಟಿಕೆ ಹಣಕ್ಕಾಗಿ ಖಾಸಗಿ ಫೈನಾನ್ಸ್‌ಗಳ ಮೊರೆ ಹೋಗಿ ಸಾಲದ ಸುಳಿಗೆ ಸಿಲುಕುವಂತಾಗಿದೆ. ಇದೇ ವೇಳೆ ಮೈಕ್ರೋ ಫೈನಾನ್ಸ್‌ಗಳ ಹಾವಳಿ ಸಹ ತಪ್ಪಿಸಬೇಕು ಎಂದು ಆಗ್ರಹಿಸಲಾಗುವುದು. ಹೀಗಾಗಿ ರಾಜ್ಯದ ಎಲ್ಲಾ ಭಾಗಗಳಿಂದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಸಂಘಟನೆ ಬಲಿಷ್ಠಗೊಳಿಸುವ ಉದ್ದೇಶದಿಂದ ಕುಟುಂಬಕ್ಕೊಬ್ಬ ಸದಸ್ಯ, ಊರಿಗೊಬ್ಬ ಕಾರ್ಯಕರ್ತ ಎಂಬ ಅಭಿಯಾನಕ್ಕೆ ಡಿ.21 ರಂದು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಚಾಲನೆ ನೀಡಲಾಗುವುದು. ಕಬ್ಬಿಗೆ ಟನ್‌ಗೆ ಕನಿಷ್ಠ 4,500 ರೂ. ನೀಡಬೇಕು. ರಾಜ್ಯ ಸರ್ಕಾರ ಕೂಡಲೇ ಎಂಎಸ್‌ಪಿ ಘೋಷಣೆ ಮಾಡಬೇಕು ಎಂಬ ಬೇಡಿಕೆ ಕುರಿತಂತೆ ಮುಖ್ಯಮಂತ್ರಿಗಳು ಸದ್ಯದಲ್ಲೇ ಸಭೆ ಕರೆಯಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ಪಿ.ಮರಂಕಯ್ಯ, ನಾಗನಹಳ್ಳಿ ವಿಜೇಂದ್ರ ಮಂಡಕಳ್ಳಿ ಮಹೇಶ್, ಕೆಂಪುಗೌಡ, ಈಶ್ವರ್ ಉಪಸ್ಥಿತರಿದ್ದರು.

ಜ.19, ರಾಜ್ಯ ಮಟ್ಟದ ಗಾಯನ ಸ್ಪರ್ಧೆ

ಮೈಸೂರು,ಡಿ.19–ಮೈಸೂರಿನ ಶ್ರುತಿಮಂಜರಿ ಪ್ರತಿಷ್ಠಾನದ 27ನೇ ಕರ್ನಾಟಕ ಶಾಸ್ತ್ರೀಯ ಸಂಗೀತೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಮೊಸಳೆ ಕೃಷ್ಣಮೂರ್ತಿ ಸ್ಮಾರಕ ರಾಗ–ತಾನ–ಪಲ್ಲವಿ ಗಾಯನ ಸ್ಪರ್ಧೆಯನ್ನು ಜ.19ರಂದು ಬೆಳಗ್ಗೆ 10 ಗಂಟೆಗೆ ಸರಸ್ವತಿಪುರಂನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಪಲ್ಲವಿ ಗಾಯನ ಸ್ಪರ್ಧೆಯ ವಿಜೇತರಿಗೆ ಪ್ರಥಮ ಬಹುಮಾನ ರೂ. 5000 ನೀಡು ವುದಲ್ಲದೆ, ವಾರ್ಷಿಕೋತ್ಸವದಲ್ಲಿ ಗಾಯನ ಕಛೇರಿಗೆ ಅವಕಾಶ ಕಲ್ಪಿಸಲಾಗುವುದು. ಅರ್ಜಿಗಳನ್ನು ಸಲ್ಲಿಸಲು ಜ.15 ಕೊನೆ ದಿನ. ವಿವರಗಳಿಗೆ ಮೊ.9945124825, 9449622466.

ಜಿಪಂ ಸಿಇಓ ಭೇಟಿ...



ಬಿಸಿಯೂಟ ನಿರ್ವಹಣೆ ಮತ್ತು ಮೊಟ್ಟೆ ವಿತರಣೆಯಲ್ಲಿ ಮುಖ್ಯ ಶಿಕ್ಷಕರಿಗೆ ಆಗುತ್ತಿರುವ ತೊಂದರೆಗಳ ಸಂಬಂಧ ಜಿಲ್ಲಾ ಪಂಚಾಯತಿ ಸಿಇಓ ಅವರು ಸ್ಥಳಕ್ಕೆ ಭೇಟಿ ಮಾಡಿ, ಮಾರ್ಗದರ್ಶನ ನೀಡುವಂತೆ ಕೋರಲಾಯಿತು. ಈ ವೇಳೆ ರಾಜ್ಯ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಮಾಲೇಗೌಡ, ನಿರ್ದೇಶಕರಾದ ಮಹದೇವ್, ಮಾಲಂಗಿ ಸುರೇಶ್, ಮಂಜುನಾಥ್ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಇಂದಿನಿಂದ ಅಕ್ಷರ ಜಾತ್ರೆ

ಆಸ್ಪತ್ರೆ ಹಾಗೂ ಹೋಟೆಲ್ ಅಮರಾವತಿ ಹಿಂಭಾಗ ಸಮ್ಮೇಳನದ ವೇದಿಕೆ ತಲುಪುವುದು. ಮೆರವಣಿಗೆಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಮೆರವಣಿಗೆಯಲ್ಲಿ ಹಗಲು ವೇಷ, ಮಹಿಳಾ ವೀರಗಾಸೆ, ಗೊರವರ ಕುಣಿತ, ಕಂಸಾಳೆ, ಕರಗ, ಸುಗ್ಗಿಕುಣಿತ, ಕೋಲಾಟ ಸೇರಿದಂತೆ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಲಿದ್ದು, ಪೂರ್ಣಕುಂಭ ಹೊತ್ತ 300 ಮಹಿಳೆಯರು ಹಾಗೂ 50ಕ್ಕೂ ಹೆಚ್ಚು ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ.

ಉದ್ಘಾಟನಾ ಸಮಾರಂಭ: ಬೆಳಿಗ್ಗೆ 10–30ಕ್ಕೆ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭವು ಪ್ರಧಾನ ವೇದಿಕೆಯಲ್ಲಿ ನಡೆಯಲಿದ್ದು, ಕಾರ್ಯ ಕ್ರಮವನ್ನು ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ.ದೊಡ್ಡ ರಂಗೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಫರೀದ್, ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಸಭೆ ಸರ್ಕಾರಿ ಮುಖ್ಯ ಸಚೇತಕ ಅಶೋಕ್ ಮಹದೇವಪ್ಪ ಪಟ್ಟಣ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಹನಮಗೌಡ ಪಾಟೀಲ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ಎ.ಬಿ.ರಮೇಶ ಬಂಡಿ ಸಿದ್ದೇಗೌಡ ಅವರೂ ಹಾಜರಿರುವರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್‌ನ ಶಾಸಕರುಗಳಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಕೆ.ವಿವೇಕಾನಂದ, ವಿಧಾನಸಭಾ ಶಾಸಕರುಗಳಾದ ಪಿ.ಎಂ.ನರೇಂದ್ರಸ್ವಾಮಿ, ಪಿ.ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ, ಮಂಡ್ಯ ನಗರಸಭೆ ಅಧ್ಯಕ್ಷ ಎಂ.ವಿ. ಪ್ರಕಾಶ್, ಮೈಸೂರು ಸಕ್ಕರೆ ಕಂಪನಿ ನಿಯಮಿತದ ಅಧ್ಯಕ್ಷ ಸಿಡಿ ಗಂಗಾಧರ, ಮಂಡ್ಯ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಯೀಮ್, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತದ ಅಧ್ಯಕ್ಷ ಕೆ.ಸಿ.ಜೋಗಿಗೌಡ, ಗೆಜ್ಜಲಗೆರೆಯ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತದ ಅಧ್ಯಕ್ಷ ಬಿ.ಬೋರೇಗೌಡ, ಬೂದನೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಮಾನಸ, ಬೇಲೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಸುವರ್ಣವತಿ, ಉಮ್ಮಡಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಶ್ರೀಕಾಂತ್, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕಿ ಮೀರಾ ಶಿವಲಿಂಗಯ್ಯ ಅವರು ಆಗಮಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಆರ್ಥಿಕ ಇಲಾಖೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಾ. ಮಂಜುಳಾ ಎನ್, ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅನ್ಬು ಕುಮಾರ್, ಮೈಸೂರು ವಲಯದ ಡಿಐಜಿ ಡಾ. ಎಂ.ಬಿ.ಬೋರಲಿಂಗಯ್ಯ, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ರಮೇಶ್, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕಿ ಡಾ.ಕೆ.ಧರಣೀದೇವಿ ಅವರುಗಳು ಆಗಮಿಸಲಿದ್ದಾರೆ.

ಸ್ವಚ್ಛತೆಗೆ ಅದ್ಯತೆ, ಕಿಟ್ ವಿತರಣೆ: ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ಆಹಾರದ ಗುಣಮಟ್ಟ ಪರೀಕ್ಷೆ ಮಾಡಿ ವರದಿ ಪಡೆಯಲಾಗಿದೆ. ನೀರನ್ನು ಸಹ ಪರೀಕ್ಷಿಸಲಾಗಿದ್ದು, ಸ್ವಚ್ಛತೆಗೆ 250 ಸಿಬ್ಬಂದಿಯನ್ನು ನೇಮಿಸಲಾಗಿದೆ. 150ಕ್ಕೂ ಹೆಚ್ಚು ವಿವಿಧ ಸ್ಥಳಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. 6 ಸಾವಿರ ನೋಂದಾಯಿತ ಪ್ರತಿನಿಧಿಗಳಿಗೆ ಅರ್ಧ ಕೆ.ಜಿ.ಬೆಲ್ಲ, ಅರ್ಧ ಕೆಜಿ ಸಕ್ಕರೆ, ಬ್ರೆಶ್, ಪೇಸ್ಟ್, ಸೋಪು,ಬೆಡ್‌ಶಿಟ್ ಒಳಗೊಂಡ ಲೆದರ್ ಬ್ಯಾಗ್‌ನಲ್ಲಿ ವಸತಿ ಮತ್ತು ಸಮ್ಮೇಳನದ ಕಿಟ್ ನೀಡಲಾಗುತ್ತಿದೆ.

ವಿದ್ಯುತ್ ದೀಪಾಲಂಕಾರ: ಚೆಸ್ಕಾಂ ವತಿಯಿಂದ ನಗರದಲ್ಲಿ ವಿದ್ಯುತ್ ಅಲಂಕಾರ ಮಾಡಲಾಗಿದ್ದು, ಮೂರು ದಿನಗಳ ಕಾಲ ಪಟ್ಟಣ ಜಗಮಗಿಸಲಿದೆ. ನಾಡುನುಡಿಗೆ ಸೇವೆ ಸಲ್ಲಿಸಿದ 170 ಮಂದಿ ಸಾಧಕರನ್ನು ಸನ್ಮಾನಿಸಲಾಗುತ್ತಿದೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥ 87 ಪುಸ್ತಕಗಳನ್ನು ಬಿಡುಗಡೆ ಮಾಡಲಾಗುತ್ತದೆ. ಜೊತೆಗೆ 'ಬೆಲ್ಲದಾರತಿ' ಹೆಸರಿನ ಸ್ಮರಣ ಸಂಚಿಕೆ ಕೂಡ ಬಿಡುಗಡೆ ಮಾಡಲಾಗುತ್ತದೆ.

ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರೇ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿರುವ 'ಪ್ರಾಚೀನ ಭಾರತದಲ್ಲಿ ರಾಜಕೀಯ ಹಿಂಸಾಚಾರ', ಕನ್ನಡದಿಂದ ಇಟಲಿ ಬಾಷೆಗೆ ಅನುವಾದಗೊಂಡಿರುವ ಖ್ಯಾತ ಕಾದಂಬರಿಗಾರ್ತಿ ತ್ರಿವೇಣಿ ಅವರ ಶರಪಂಜರ ಕಾದಂಬರಿ ಸಮ್ಮೇ ಳನದಲ್ಲಿ ಬಿಡುಗಡೆ ಆಗಲಿದೆ.

ಅಗ್ನಿಶಾಮಕ ದಳ ನಿಯೋಜನೆ: ಅಡುಗೆ ಮಾಡುವ ಸ್ಥಳ, ಪಾರ್ಕಿಂಗ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬೆಂಕಿ ಅವಘಢ ಸಂಭವಿಸಿದರೆ ಅದನ್ನು ನಂದಿಸಲು ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಲಾಗಿದೆ.

ಬಿಗಿ ಪೊಲೀಸ್ ಬಂದೋಬಸ್ತ್: ಸಮ್ಮೇಳನಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. 6 ಎಎಸ್‌ಪಿ, 21 ಡಿವೈಎಸ್‌ಪಿ, 63 ಸಿಪಿಐ, 170 ಪಿಎಸ್‌ಐ, 262 ಎಎಸ್‌ಐ, 1500 ಪೇದೆಗಳು, 1000 ಹೋಂ ಗಾರ್ಡ್ಸ್, 165 ಮಹಿಳಾ ಕಾನ್ ಸ್ಟೇಬಲ್ ಒಳಗೊಂಡಂತೆ 14 ಜಿಲ್ಲೆಗಳಿಂದ 3200ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ಭದ್ರತೆ ಕರ್ತವ್ಯ ನಿರ್ವಹಿಸಲಿದ್ದಾರೆ. ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಪಾಳಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಲಿದ್ದಾರೆ. ಸಂಚಾರ ನಿರ್ವಹಣೆ, ಪಾರ್ಕಿಂಗ್, ಊಟದ ಕೌಂಟರ್, ವೇದಿಕೆ ಹೀಗೆ ಎಲ್ಲಾ ಕಡೆ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದ್ದು ಹಗಲು ಮತ್ತು ರಾತ್ರಿ ಪೊಲೀಸ್ ಸಿಬ್ಬಂದಿ ಕರ್ತವ್ಯದಲ್ಲಿ ನಿರತರಾಗಿರಲಿದ್ದಾರೆ. ಸಿಸಿಟಿವಿ ನಿಗಾ ವ್ಯವಸ್ಥೆ ಮಾಡಲಾಗಿದೆ. ಅಪರಾಧ ಹಾಗೂ ಕಳ್ಳತನ ತಡೆಯಲು ಅಪರಾಧಿ ಪತ್ತೆ ದಳ ಹಾಗೂ ಮಫ್ತಿಯಲ್ಲಿ ಪೊಲೀಸರು ಗಸ್ತು ತಿರುಗಲಿದ್ದಾರೆ.

ಪೊಲೀಸರಿಗೆ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ. ವಾಹನಗಳಿಗೆ ಪಾರ್ಕಿಂಗ್ ಪಾಸ್ ಹಾಗೂ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪಾಸ್ ವ್ಯವಸ್ಥೆ ಮಾಡಲಾಗಿದೆ. ಹೆದ್ದಾರಿ ಹಾಗೂ ನಗರದಲ್ಲಿ ಟೋಯಿಂಗ್ ವಾಹನಗಳ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ. 10ಕ್ಕೂ ಅಧಿಕ ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಲಾಗುತ್ತಿದೆ. ಪೊಲೀಸ್ ಔಟ್ ಪೋಸ್ಟ್, ಮಹಿಳಾ ಸಹಾಯವಾಣಿ ಕೇಂದ್ರಗಳನ್ನು ಸಹ ತೆರೆಯಲಾಗುತ್ತಿದೆ.

ಬೃಹತ್ ವೇದಿಕೆ: 70–80 ಎಕರೆ ಪ್ರದೇಶದಲ್ಲಿ ಪ್ರಧಾನ ವೇದಿಕೆ ನಿರ್ಮಿಸಲಾಗಿದೆ, ಎರಡು ಸಮಾನಾಂತರ ವೇದಿಕೆ, 60 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ. 55 ವಸ್ತುಪ್ರದರ್ಶನ ಮಳಿಗೆಗಳು, 350 ವಾಣಿಜ್ಯ ಮಳಿಗೆ, 450 ಪುಸ್ತಕ ಮಳಿಗೆಗಳು ಕೂಡ ತಲೆ ಎತ್ತಿವೆ ಊಟಕ್ಕೆ 100 ಕೌಂಟರ್, ನೋಂದಾ ಯಿತ ಪ್ರತಿನಿಧಿಗಳಿಗೆ 40 ಕೌಂಟರ್‌ಗಳನ್ನು ತೆರೆಯಲಾಗಿದ್ದು, ಎಲ್ಲರಿಗೂ ಒಂದೇ ಊಟದ ಮೆನು ಇರಲಿದೆ.

ಸಮ್ಮೇಳನಕ್ಕೆ ಉಚಿತ ಬಸ್ ವ್ಯವಸ್ಥೆ

ಸಮ್ಮೇಳನದ ಸ್ಥಳಕ್ಕೆ ಜನರನ್ನು ಕರೆತರಲು 15 ವಾಹನಗಳ ಸಾರಿಗೆ ಸೌಲಭ್ಯವನ್ನು ಉಚಿತವಾಗಿ ಕಲ್ಪಿಸಲಾಗಿದೆ. ಮೊದಲನೆಯದಾಗಿ ಮಂಡ್ಯ ಬಸ್ ನಿಲ್ದಾಣದಿಂದ ರೈಲ್ವೆ ನಿಲ್ದಾಣ, ನಂದಾ ಸರ್ಕಲ್, ಫ್ಯಾಕ್ಟರಿ ಸರ್ಕಲ್, ಸ್ವರ್ಣಸಂದ್ರ, ಮಾಂಡವ್ಯ ಕಾಲೇಜ್, ಉಮ್ಮಡಹಳ್ಳಿ ಗೇಟ್, ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ. ಎರಡನೆಯದಾಗಿ ಮಂಡ್ಯ ಬಸ್ ನಿಲ್ದಾಣದಿಂದ ಕೋರ್ಟ್ ನಿಲ್ದಾಣ– ವಿಶ್ವವಿದ್ಯಾಲಯ–ಕಲ್ಲಹಳ್ಳಿ–ವಿ.ವಿ.ನಗರ–ಶನೇಶ್ವರ ದೇವಸ್ಥಾನ–ಚಾಮುಂಡೇಶ್ವರಿ ದೇವಸ್ಥಾನ–ಕನ್ನಿಕಾ ಪರಮೇಶ್ವರಿ ದೇವಸ್ಥಾನ–ಕರ್ನಾಟಕ ಬಾರ್ ಸರ್ಕಲ್–ಹೊಸಹಳ್ಳಿ ಸರ್ಕಲ್–ಬೆ.ರಾಮಣ್ಣ ಸರ್ಕಲ್–ಎಂವಿಜಿ ಬೇಕರಿ–ನಂದಾ ಸರ್ಕಲ್–ಫ್ಯಾಕ್ಟರಿ ಸರ್ಕಲ್–ಸ್ವರ್ಣಸಂದ್ರ–ಮಾಂಡವ್ಯ ಕಾಲೇಜ್–ಉಮ್ಮಡಹಳ್ಳಿ ಗೇಟ್–ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ. ಮೂರನೆಯದಾಗಿ ಹುಣಸೇ ಮರ–ಕಾಳಿಕಾಂಬ ದೇವಸ್ಥಾನ–ನಂದಾ ಸರ್ಕಲ್–ಫ್ಯಾಕ್ಟರಿ ಸರ್ಕಲ್–ಗುತ್ತಲು ಕಾಲೋನಿ–ಜಯಲಕ್ಷ್ಮಿ ಟಾಕೀಸ್–ಅರಕೇಶ್ವರ ದೇವಸ್ಥಾನ–ಉಮ್ಮಡಹಳ್ಳಿ ಗೇಟ್–ಹೊಸಬೂದನೂರು ಮಾರ್ಗವಾಗಿ ಸಮ್ಮೇಳನದ ಸ್ಥಳ ತಲುಪಲಿದೆ.

ಎಂಎಲ್ಸಿ ಸಿ.ಟಿ.ರವಿ ಬಂಧನ

ಸಿ.ಟಿ.ರವಿ ಅವರನ್ನು ಬಂಧಿಸಿ, ಖಾನಾಪುರ ಠಾಣೆಗೆ ಕರೆದೊಯ್ದರು.

ಹಿನ್ನೆಲೆ: ಇದಕ್ಕೂ ಮುನ್ನ ವಿಧಾನ ಪರಿಷತ್ತಿನಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಲು ಹಾಜರಿದ್ದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಬಗ್ಗೆ ನೀಡಿದ್ದ ಹೇಳಿಕೆ ವಿಚಾರವಾಗಿ ಬಾವಿಗಿಳಿದು ಪರ– ವಿರೋಧ ಪ್ರತಿಭಟನೆಗೆ ಮುಂದಾಗಿದ್ದರು. ಆಗ ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ಮತ್ತು ಲಕ್ಷ್ಮೀ ಹೆಬ್ಬಾಳ್ಕರ್ ನಡುವೆ ಮಾತಿಗೆ ಮಾತು ಬೆಳೆದಿದೆ. ಸಿ.ಟಿ.ರವಿ, 'ನಿಮ್ಮ ರಾಹುಲ್ ಗಾಂಧಿ ಡ್ರಗಿಸ್ಟ್' ಎಂದರೆ, ಲಕ್ಷ್ಮಿ ಹೆಬ್ಬಾಳ್ಕರ್, 'ನೀನು ಕುಡಿದು ಇಬ್ಬರ ಮೇಲೆ ಕಾರು ಹತ್ತಿಸಿ ಕೊಂದಿದ್ದೀಯಾ. ನೀನು ಕೊಲೆಗಡುಕ' ಎಂದು ಹೇಳುತ್ತಿದ್ದಂತೆಯೇ ಸಿ.ಟಿ.ರವಿ ಅವರು ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಆಕ್ಷೇಪಾರ್ಹ ಪದ ಬಳಸಿ ನಿಂದಿಸಿದ್ದಾರೆ ಎನ್ನಲಾಗಿದೆ. ಆಗ ಕಾಂಗ್ರೆಸ್ ಸದಸ್ಯರು ಸಿ.ಟಿ.ರವಿ ಮೇಲೆ ಮುಗಿಬಿದ್ದಿದ್ದು, ಸಭಾಪತಿ ಬಸವರಾಜ ಹೊರಟ್ಟಿ ಅವರು ಊಟಕ್ಕಾಗಿ ಸಭೆ ಮುಂದೂಡಿದ್ದಾರೆ.

ಇದರ ಬೆನ್ನಲ್ಲಿಯೇ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕಣ್ಣೀರಿಡುತ್ತಾ ಪರಿಷತ್ ಸಭೆಯಿಂದ ಹೊರ ನಡೆದು, ಸಭಾಪತಿ ಅವರ ಕಚೇರಿಗೆ ಹೋಗಿ ಕುಳಿತಿದ್ದಾರೆ. ಅಲ್ಲಿ ಸಭಾಪತಿಗೆ ಸಿ.ಟಿ.ರವಿ ವಿರುದ್ಧ ದೂರು ದಾಖಲಿಸಿ ಅವರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಇದಾದ ನಂತರ ಸಿ.ಟಿ.ರವಿ ಆಕ್ಷೇಪಾರ್ಹ ಪದ ಬಳಕೆ ಬಗ್ಗೆ ಆಡಿಯೋ ಮತ್ತು ವಿಡಿಯೋ ಮೂಲಕ ಪರಿಶೀಲನೆ ಮಾಡುವಂತೆ ಸಭಾಪತಿಯವರು ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಲಕ್ಷ್ಮಿ ಬೆಂಬಲಿಗರ ಆರ್ಭಟ: ಈ ವಿಚಾರ ಎಲ್ಲೆಡೆ ಹರಡುತ್ತಿದ್ದಂತೆಯೇ ಲಕ್ಷ್ಮಿ ಹೆಬ್ಬಾಳ್ಕರ್ ಬೆಂಬಲಿಗರು ಸುವರ್ಣಸೌಧದ ಮುಂದೆ ಜಮಾಯಿಸಿದ್ದಾರೆ. ಮಧ್ಯಾಹ್ನ ಊಟ ಮಾಡಿಕೊಂಡು ವಾಪಸ್ ಬಂದ ಸಿ.ಟಿ.ರವಿ ಮೇಲೆ ಹಲ್ಲೆಗೆ ಮುಂದಾಗಿದ್ದಾರೆ. ಆದರೆ ಪೊಲೀಸರು ಮತ್ತು ಭದ್ರತಾ ಸಿಬ್ಬಂದಿ ರವಿ ಅವರನ್ನು ರಕ್ಷಣೆ ಮಾಡಿ ಕಳಿಸಿದ್ದಾರೆ. ಇದಾದ ನಂತರ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಖಾಸಗಿ ಆಪ್ತ ಸಹಾಯಕ ಸಂಗನಗೌಡ, ಲಕ್ಷ್ಮಿ ಹೆಬ್ಬಾಳ್ಕರ್ ಹಾಗೂ ಸಹೋದರ ಚನ್ನರಾಜ್ ಅವರ ಪಿಎ ಸದ್ದಾಂ ಸೇರಿದಂತೆ ಐದಾರು ಜನರು ಸುವರ್ಣಸೌಧದ ಒಳಗೆ ಸಿ.ಟಿ.ರವಿ ಮೇಲೆ ಏಕಾಏಕಿ ದಾಳಿಗೆ ಮುಂದಾಗಿದ್ದಾರೆ. ಈ ವೇಳೆ ಮಾರ್ಷಲ್‌ಗಳು ರವಿ ಅವರನ್ನು ಗೇಟಿನೊಳಗೆ ಕಳಿಸಿ ಮುಚ್ಚುವಾಗ ಕಾಲಿನಿಂದ ಒದ್ದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಂತರ ಸಿ.ಟಿ.ರವಿ ಅವರು ಸಭಾಪತಿ ಕೊಠಡಿಗೆ ತೆರಳಿ ದೂರು ನೀಡಿ ತಮಗೆ ರಕ್ಷಣೆ ಕೊಡಬೇಕು ಎಂದು ಕೇಳಿದ್ದಾರೆ. ಅಲ್ಲಿಂದ ಅಧಿವೇಶನ ನಡೆಯುವ ಪರಿಷತ್ ಸಭಾಂಗಣಕ್ಕೆ ಹೋದರೆ ಅಲ್ಲಿ ಸಿ.ಟಿ.ರವಿ ವಿರುದ್ಧ ಕಾಂಗ್ರೆಸ್ ಸದಸ್ಯರು ಮುತ್ತಿಗೆ ಹಾಕಿ ತರಾಟೆಗೆ ತೆಗೆದು ಕೊಂಡಿದ್ದಾರೆ. ಲಕ್ಷ್ಮೀ ಹೆಬ್ಬಾಳ್ಕರ್ ಅವರಂತೂ ಏಯ್... ನಿನಗೆ ಅಕ್ಕ–ತಂಗಿಯರು ಇಲ್ವೇನೋ.. ನಿನಗೆ ತಾಯಿ, ಮಗಳು, ಹೆಂಡತಿ ಇಲ್ವೇನೋ... ಎಂದು ಬಾಯಿಗೆ ಬಂದಂತೆ ಬೈದಿದ್ದಾರೆ. ಇದರ ಬೆನ್ನಲ್ಲಿಯೇ ಪರಿಷತ್ ಸಭಾಂಗಣದ ಆಡಿಯೋ ವನ್ನು ಮ್ಯೂಟ್ ಮಾಡಲಾಗಿದೆ.

100 ಜನ ವಶಕ್ಕೆ: ಬಿಜೆಪಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮೇಲೆ ಹಲ್ಲೆಗೆ ಯತ್ನಿಸಿ, ಸುವರ್ಣ ಸೌಧದಲ್ಲಿ ಕಾನೂನು ಉಲ್ಲಂಘನೆ ಮಾಡಿರುವ ಸುಮಾರು 100ಕ್ಕೂ ಅಧಿಕ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತಮ್ಮ ವಿರುದ್ಧ ಹಲ್ಲೆ ನಡೆದಿರುವುದನ್ನು ಖಂಡಿಸಿ ಸಿ.ಟಿ.ರವಿ ಅವರು ಬಿಜೆಪಿ ಸದಸ್ಯರೊಡಗೂಡಿ ಸ್ವರ್ಣಸೌಧದಲ್ಲಿ ಧರಣಿ ನಡೆಸುತ್ತಿದ್ದ ವೇಳೆ ಸ್ಥಳಕ್ಕೆ ಆಗಮಿಸಿದ ಹಿರೇಬಾಗೇವಾಡಿ ಠಾಣೆ ಪೊಲೀಸರು ಅವರನ್ನು ಬಂಧಿಸಲು ಮುಂದಾದರು. ರವಿ ಸಹಕರಿಸದಿದ್ದಾಗ ಹೊತ್ತೊಯ್ದು ಪೊಲೀಸ್ ವ್ಯಾನ್‌ನಲ್ಲಿ ಕೂರಿಸಿದರು. ಹಿರೇಬಾಗೇವಾಡಿ ಠಾಣೆ ಬೆಳಗಾವಿ ಕಮಿಷನರೇಟ್ ವ್ಯಾಪ್ತಿಗೆ ಬರುತ್ತದೆ. ಆದರೂ ಭದ್ರತಾ ದೃಷ್ಟಿಯಿಂದ 4 ಎಸ್ಕಾರ್ಟ್ ಹಾಗೂ 2 ಕೆಎಸ್‌ಆರ್‌ಪಿ ತುಕಡಿಗಳ ಬಂದೋಬಸ್ತ್‌ನೊಂದಿಗೆ ಸಿ.ಟಿ.ರವಿ ಅವರನ್ನು ಖಾನಾಪುರ ಠಾಣೆಗೆ ಕರೆದೊಯ್ಯಲಾಯಿತು. ವಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಹಲವಾರು ಬಿಜೆಪಿ ಶಾಸಕರು ಖಾನಾಪುರ ಠಾಣೆ ಬಳಿ ತೆರಳಿದ್ದಾರೆ. ಸಿ.ಟಿ.ರವಿ ಅವರನ್ನು ನಾಳೆ (ಡಿ.20) ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಪೊಲೀಸರು ಹಾಜರುಪಡಿಸಲಿದ್ದಾರೆ ಎಂದು ಶಾಸಕ ಅರವಿಂದ ಬೆಲ್ಲದ್ ಅವರು ಮಾಧ್ಯಮಗಳಿಗೆ ತಿಳಿಸಿದರು.

ವಾಕ್ಸಮರ

ಮುಂದೂಡಿದಾಗಲೂ ಕಾಂಗ್ರೆಸ್ ಸದಸ್ಯರು, ಸಚಿವರು ಡಾ.ಅಂಬೇಡ್ಕರ್ ಭಾವಚಿತ್ರ ಪ್ರದರ್ಶಿಸಿ, ಘೋಷಣೆ ಕೂಗುವುದನ್ನು ಮುಂದುವರೆಸಿದರೆ, ವಿರೋಧ ಪಕ್ಷದ ಸದಸ್ಯರು ಸದನದಿಂದ ಹೊರನಡೆದರು.

ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅವಹೇಳನ ಖಂಡಿಸಿ, ಕಾಂಗ್ರೆಸ್ ಪ್ರತಿಭಟನೆ ನಡೆಸಿದರೆ, ಜೆಡಿಎಸ್ ಮತ್ತು ಬಿಜೆಪಿ ಸದಸ್ಯರು ಅಮಿತ್ ಷಾ ಹೇಳಿಕೆ ಸಮರ್ಥಿಸಿ ಸಭಾತ್ಯಾಗ ಮಾಡಿದರು. ಆಡಳಿತ ಪಕ್ಷ ಸದಸ್ಯರು ತಮ್ಮ ಆಸನಗಳ ಮೇಲೆ ಡಾ.ಅಂಬೇಡ್ಕರ್ ಭಾವಚಿತ್ರ ಇರಿಸಿದಾಗ, ಆಡಳಿತ ಪಕ್ಷದ ಸದಸ್ಯರ ಆಸನಗಳು ಅಂಬೇಡ್ಕರ್ ಭಾವಚಿತ್ರ ಮಾಯವಾಯಿತು. ವಿಧಾನ ಪರಿಷತ್ತಿನಲ್ಲಿ, ಆಡಳಿತ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಡಾ.ಬಿ.ಆರ್.ಅಂಬೇಡ್ಕರ್ ಹೇಳಿಕೆಗೆ ಪರ–ವಿರೋಧ ಸಮರ್ಥನೆಗಳನ್ನು ನೀಡಿದಾಗ ಸದನದಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಯಿತು.

ಡಿ.25ರಿಂದ ನಿರಂತರ ರಂಗ ಉತ್ಸವ

ಮೈಸೂರು, ಡಿ. 19 (ಜಿಎ)– ಮೈಸೂರಿನ ನಿರಂತರ ಫೌಂಡೇಷನ್ ವತಿಯಿಂದ ಡಿ.25ರಿಂದ 30ರವರೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ನಿರಂತರ ರಂಗ ಉತ್ಸವ ಆಯೋಜಿಸಲಾಗಿದೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್ ಅಧ್ಯಕ್ಷ ಎಂ.ಎಂ.ಸುಗುಣ ಈ ವಿಷಯ ತಿಳಿಸಿ, ಡಿ.25 ರಂದು ಸಂಜೆ 7 ಗಂಟೆಗೆ ಸವುತೆಂತೋ ತಂಡದಿಂದ 'ನೀರ್ಮಾ ದಳ ಹೂವಿನೊಂದಿಗೆ' ನಾಟಕ ಪ್ರದರ್ಶನ ನಡೆಯಲಿದೆ. ಡಿ.26ರಂದು ಸಂಜೆ 6 ಗಂಟೆ ನಗಾರಿ ಮತ್ತು ತಮಟೆ ವಾದನದ ಮೂಲಕ ನಿರಂತರ ರಂಗ ಉತ್ಸವ ಉದ್ಘಾಟನೆಯಾಲಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ ಮತ್ತು ಪ್ರಸಾದ್ ಕುಂದೂರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಅಂದು ಸಂಜೆ 5.30ಕ್ಕೆ ಅಭಿನವ ವೀರಭದ್ರೇಶ್ವರ ತಂಡದಿಂದ ವೀರಗಾಸೆ ಪ್ರದರ್ಶನವಿರಲಿದೆ ನಂತರ 7 ಗಂಟೆಗೆ ನಿರ್ದಿಗಂತ ಕೆ.ಶೆಟ್ಟಿಹಳ್ಳಿ ತಂಡದಿಂದ 'ತಿಂಡಿಗೆ ಬಂದ ತುಂಡೇರಾಯ' ನಾಟಕ ಪ್ರದರ್ಶನವಿದೆ. ಡಿ.27ರಂದು ಸಂಜೆ 7 ಗಂಟೆಗೆ ಆಳ್ವಾಸ್ ರಂಗ ಅಧ್ಯಯನ ಕೇಂದ್ರದಿಂದ 'ಚಾರು ವಸಂತ' ನಾಟಕ, 28ರ ಸಂಜೆ 7ಕ್ಕೆ ಉಸ್ತಾದ್ ಫಯಾಜ್ ಖಾನ್ ಅವರಿಂದ ಸಂಗೀತ ಸಂಜೆ ಕಾರ್ಯಕ್ರಮ, ಡಿ.29ರ ಸಂಜೆ 7ಗಂಟೆಗೆ ಸಮುದಾಯ ರಾಯಚೂರು ತಂಡದಿಂದ 'ರಕ್ತ ವಿಲಾಪ' ನಾಟಕ, ಡಿ.30 ರಂದು ಸಂಜೆ 5.30ಕ್ಕೆ ನಗಾರಿ ಮಂಜು ಮೈಸೂರು ತಂಡ ನಗಾರಿ ಮತ್ತು ತಮಟೆ ವಾದ್ಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು.

6.15ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಖ್ಯಾತ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ, ನಟ ಪ್ರಕಾಶ್‌ರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ವೇದಿಕೆ ಕಾರ್ಯಕ್ರಮದ ನಂತರ ಭಳಿರೇ ವಿಚಿತ್ರಮ್ ತಂಡದಿಂದ 'ದೂತಾನು ಸ್ವಪ್ನಸಿದ್ಧಿ' ನಾಟಕ ಪ್ರದರ್ಶನವಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ನಾ.ದಿವಾಕರ್ ರಂಗೋ ತ್ಸವದ ಪೋಸ್ಟರ್ ಬಿಡುಗಡೆ ಗೊಳಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ್, ಕೆಂಪ ರಾಜು, ಯಶಸ್ವಿನಿ ಉಪಸ್ಥಿತರಿದ್ದರು.

ಕೊಡಗು ಡಿಸಿಸಿ ಬ್ಯಾಂಕ್‌ನಲ್ಲಿ ನಕಲಿ ಚಿನ್ನಾಭರಣ ಅಡವಿಟ್ಟು ವಂಚನೆ ಪ್ರಕರಣ

12 ಮಂದಿ ಬಂಧನ; ಓರ್ವ ನಾಪತ್ತೆ

- ಚಿನ್ನಲೇಪಿತ 28 ಬಳೆ, 2 ಲಕ್ಷ ನಗದು ವಶ
- ಕೇರಳ ವ್ಯಕ್ತಿ ಮಾಸ್ಟರ್ ಮೈಂಡ್
- ಎಸ್‌ಪಿ ಕೆ.ರಾಮರಾಜನ್ ಮಾಹಿತಿ


ಮೊಹಮದ್ ಕುಂಞ


ರಫೀಕ್


ಪಿ.ಹೆಚ್.ರಿಯಾಜ್


ಕತೀಜಾ


ಪಿ.ಜಿ.ಪ್ರದೀಪ್


ಕೆ.ಎ.ನಿಶಾದ್



ಬಿ.ಎ.ಮೂಸಾ


ಮಹಮದ್ ಅನೀಫ್


ಅಬ್ದುಲ್ ನಾಸಿರ್


ಮೊಹಮದ್ ರಿಜ್ವಾನ್


ಕೆ.ಪಿ.ನವಾಜ್


ಫರಾನ್

ಮಡಿಕೇರಿ, ಡಿ.19–ಮಡಿಕೇರಿ ಡಿಸಿಸಿ ಬ್ಯಾಂಕ್‌ನಲ್ಲಿ ನಕಲಿ ಚಿನ್ನಾಭರಣ ಅಡವಿಟ್ಟು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಗು ಮತ್ತು ಕೇರಳದ ಒಟ್ಟು 13 ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಈ ಪೈಕಿ 12 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾತನಾಡಿದರು.

ಎಸ್‌ಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣದ ಮಾಸ್ಟರ್ ಮೈಂಡ್ ಕೇರಳದ ಎರ್ನಾಕುಲಂ ಜಿಲ್ಲೆ ನಿವಾಸಿ ಸಿ.ಎಂ.ಮೊಹಮದ್ ಕುಂಞ(48), ಕೆ.ಎ.ನಿಶಾದ್(43), ಪಿ.ಜಿ.ಪ್ರದೀಪ್(60), ಮಲಪುರಂ ಜಿಲ್ಲೆಯ ಕೆ.ಪಿ.ನವಾಜ್(47), ನಾಪೋಕ್ಲು ಕುಂಜಿಲ ಗ್ರಾಮದ ಕೆ.ಎ.ಮೊಹಮದ್ ರಿಜ್ವಾನ್(35), ಅಬ್ದುಲ್ ನಾಸಿರ್(50), ಎಮ್ಮೆಮಾಡು ಪಡಿಮಾಣಿ ಗ್ರಾಮದ ಪಿ.ಹೆಚ್.ರಿಯಾಜ್(39), ಬಿ.ಎ.ಮೂಸಾ(37), ಎಂ.ಎಂ.ಮಹಮದ್ ಅನೀಸ್(42), ಪಡಿಯಾಣಿಯ ಕತೀಜಾ (32), ಭಾಗಮಂಡಲ ಅಯ್ಯಂಗೇರಿ ರಫೀಕ್(38), ಫರಾನ್(33) ಬಂಧಿತರು. ಮತ್ತೋರ್ವ ಆರೋಪಿ ಹಂಸ ತಲೆಮರೆಸಿಕೊಂಡಿದ್ದಾನೆ ಎಂದು ಮಾಹಿತಿ ನೀಡಿದರು.

ಬಂಧಿತರಿಂದ 223 ಗ್ರಾಂ ಚಿನ್ನಲೇಪಿತ (ನಕಲಿ) 28 ಬಳೆ, 2 ಲಕ್ಷ ರೂ. ನಗದು, 1.40 ಲಕ್ಷ ರೂ. ಮೌಲ್ಯದ ಐಫೋನ್ ವಶಕ್ಕೆ ಪಡೆಯಲಾಗಿದೆ. ಬ್ಯಾಂಕ್ ಖಾತೆಯಲ್ಲಿದ್ದ 2,08,221 ರೂ. ನಗದು ಹಾಗೂ ವಿಮೆ ಮೇಲೆ ಹೂಡಿಕೆ ಮಾಡಿದ್ದ 1,26,504 ರೂ. ಅನ್ನು ಫ್ರೀಜ್ ಮಾಡಲಾಗಿದೆ. ಆರೋಪಿಗಳ ಪೈಕಿ ರಿಯಾಝ್, ಖತೀಜಾ, ಮಹಮದ್ ಹನೀಫ್, ಅಬ್ದುಲ್ ನಾಸೀರ್, ಮೂಸಾ ಮತ್ತು ಹಂಸ ಅವರು ಮಡಿಕೇರಿ, ವಿರಾಜಪೇಟೆ ನಗರ, ಭಾಗಮಂಡಲ ಮತ್ತು ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಡಿಸಿಸಿ ಬ್ಯಾಂಕ್, ವಿಎಸ್‌ಎಸ್‌ಎನ್ ಹಾಗೂ ಮಡಿಕೇರಿಯ ಮುತ್ತೂಟ್ ಫಿನ್ ಕಾರ್ಪ್‌ನಲ್ಲಿ ಒಟ್ಟು 625 ಗ್ರಾಂ ಚಿನ್ನಾಭರಣ ಅಡವಿಟ್ಟು 34,95,016 ರೂ. ಸಾಲ ಪಡೆದಿದ್ದರು. ಆರೋಪಿಗಳ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 8 ಪ್ರಕರಣ ದಾಖಲಾಗಿದೆ. ಆರೋಪಿಗಳು ಅಧಿಕ ಮೊತ್ತದ ಸಾಲ ನೀಡುವ ಕಾರಣದಿಂದ ನಕಲಿ ಚಿನ್ನಾಭರಣ ಅಡವಿಡಲು ಡಿಸಿಸಿ ಬ್ಯಾಂಕ್ ಮತ್ತು ವಿಎಸ್‌ಎಸ್‌ಎನ್‌ಗಳನ್ನು ಆಯ್ಕೆ ಮಾಡುತ್ತಿದ್ದರು ಎಂದು ಎಸ್‌ಪಿ ಹೇಳಿದರು.

ಬಂಧಿತ ಸಿ.ಎಂ.ಮೊಹಮದ್ ಕುಂಞ, ಅಕ್ಕಸಾಲಿಗ ಪ್ರದೀಪ್‌ನಿಗೆ ಹಣ ನೀಡಿ ಚಿನ್ನಲೇಪಿತ ಬಳೆಗಳನ್ನು ತಯಾರಿಸುತ್ತಿದ್ದ. ಬಳಿಕ ಮಧ್ಯವರ್ತಿ ನಿಶಾದ್ ನಕಲಿ ಚಿನ್ನ ಪಡೆದು ನವಾಜ್‌ಗೆ ನೀಡಿದ್ದ. ನವಾಜ್ ನಕಲಿ ಚಿನ್ನವನ್ನು ತನ್ನ ಪರಿಚಯದ ಕುಂಜಿಲದ ಕೆ.ಎ.ಮೊಹಮದ್ ರಿಜ್ವಾನ್ ನೀಡಿದ್ದ ಎಂದು ಮಾಹಿತಿ ನೀಡಿದರು. ಡಿ.4ರಂದು ಮೊಹಮದ್ ರಿಜ್ವಾನ್ 8 ಚಿನ್ನದ ಬಳೆಗಳನ್ನು ಅಡಮಾನ ಇಟ್ಟು ಸಾಲ ಪಡೆದುಕೊಳ್ಳುವ ಸಂದರ್ಭ ಪರಿಶೀಲಿಸಿದಾಗ ನಕಲಿ ಚಿನ್ನ ಎಂಬುದು ಪತ್ತೆಯಾಗಿತ್ತಲ್ಲದೇ. ಆರೋಪಿಯನ್ನು ಬಂಧಿಸಲಾಗಿತ್ತು. ವಿವಿಧ ಬ್ಯಾಂಕ್ ಶಾಖೆಗಳಲ್ಲಿ ಅಡವಿಟ್ಟ ಚಿನ್ನಾಭರಣವನ್ನು ಮರುಪರಿಶೀಲಿಸಿದ ಸಂದರ್ಭ ನಕಲಿ ಚಿನ್ನ ಅಡವಿಟ್ಟು ಸಾಲ ಪಡೆದಿರುವ ಮತ್ತಷ್ಟು ಪ್ರಕರಣ ದಾಖಲಾಗಿತ್ತು. ಆರೋಪಿಗಳ ಪೈಕಿ ಮಡಿಕೇರಿ ನಗರ ಠಾಣೆ ವ್ಯಾಪ್ತಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿ ಹಾಗೂ ಭಾಗಮಂಡಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ವಿವರ ನೀಡಿದರು.

ಮಡಿಕೇರಿ ಡಿವೈಎಸ್‌ಪಿ ಮಹೇಶ್ ಕುಮಾರ್, ಸೆನ್ ಠಾಣೆ ಡಿವೈಎಸ್‌ಪಿ ರವಿ, ಮಡಿಕೇರಿ ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು, ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಡಿಸಿಆರ್‌ಬಿ ವೃತ್ತ ನಿರೀಕ್ಷಕ ಐ.ಪಿ.ಮೇದಪ್ಪ, ನಗರ ಠಾಣಾಧಿಕಾರಿ ಲೋಕೇಶ್, ಭಾಗಂಡಲ ಠಾಣಾಧಿಕಾರಿ ಶೋಭಾ ಲಾಮಣಿ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ ಎಂದು ತಿಳಿಸಿದರು.

ಜಾಮೀನಿನ ಮೇಲೆ ಹೊರ ಬಂದ ಮೇಲೆ ಅದೇ ಚಾಳಿ

ಬಂಧಿತ ಆರೋಪಿಗಳ ಪೈಕಿ ಅಕ್ಕಸಾಲಿಗ ಪ್ರದೀಪ್ ವಿರುದ್ಧ 15 ಪ್ರಕರಣ, ನಿಶಾದ್ ವಿರುದ್ಧ 4 ಪ್ರಕರಣ ಕೇರಳದಲ್ಲಿ ದಾಖಲಾಗಿದೆ. ಆರೋಪಿಗಳು ಜಾಮೀನಿನ ಮೇಲೆ ಹೊರ ಬಂದು ಮತ್ತದೇ ಕೃತ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದರು ಎಂದು ಎಸ್‌ಪಿ ಕೆ.ರಾಮರಾಜನ್ ಮಾಹಿತಿ ನೀಡಿದರು.

ಬಂಧಿತ ಆರೋಪಿಗಳ ವಿರುದ್ಧ ಬಿಎನ್‌ಎಸ್ ಕಾಯ್ದೆ–111ರ ಪ್ರಕಾರ 'ಸಂಘಟಿತ ಅಪರಾಧ' ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳು ದೇಶದ ಅರ್ಥವ್ಯವಸ್ಥೆ ಮೇಲೆ ಪರಿಣಾಮ ಬೀರುವ ಕೃತ್ಯ ಎಸಗಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಜಾಮೀನು ನೀಡದಂತೆ ನ್ಯಾಯಾಲಯಕ್ಕೂ ಆಕ್ಷೇಪಣೆ ಸಲ್ಲಿಸಲಾಗುತ್ತದೆ ಎಂದರು.

ಈ ಕಾಯಿದೆ ಅಡಿ ಕನಿಷ್ಠ 5 ವರ್ಷ ಜೈಲು ಶಿಕ್ಷೆ ಹಾಗೂ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸಬಹುದು. ಆರೋಪಿಗಳ ಆಸ್ತಿ ಜಪ್ತಿಗೂ ಅವಕಾಶವಿರುವ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗುವುದು. ಪ್ರಕರಣದ ಮಾಸ್ಟರ್ ಮೈಂಡ್ ಸಿ.ಎಂ.ಮೊಹಮದ್ ಕುಂಞ 1 ಕೋಟಿ ರೂ. ಮೌಲ್ಯದ ಮನೆ ನಿರ್ಮಿಸುತ್ತಿದ್ದು, ಅದರ ಜಪ್ತಿಗೂ ಮುಂದಾಗುವುದಾಗಿ ಕೆ.ರಾಮರಾಜನ್ ಮಾಹಿತಿ ನೀಡಿದರು.

ಭಾರತದ ಸಂವಿಧಾನ ಸಭೆ ಸದಸ್ಯ


ಕೊಡಗಿನ ಸಿ.ಎಂ.ಪೂಣಚ್ಚ ಸ್ಮರಣೆ


ಸಿ.ಎಂ.ಪೂಣಚ್ಚ

ಮೈಸೂರು, ಡಿ.19–ದೇಶ 75ನೇ ಗಣರಾಜ್ಯೋತ್ಸವ ಮತ್ತು ಭಾರತೀಯ ಸಂವಿಧಾನ ಸ್ಥಾಪನೆಯ 75ನೇ ವರ್ಷಾಚರಣೆಯನ್ನು ಆಚರಿಸುತ್ತಿದ್ದು, ಸಂವಿಧಾನದ 75ನೇ ವರ್ಷಾಚರಣೆಯ ಅದ್ಭುತ ಪ್ರಯಾಣದ ಬಗ್ಗೆ ಶುಕ್ರವಾರ (ಡಿ.20) ಸಂಸತ್‌ನಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ಚರ್ಚಿಸಲಿದ್ದಾರೆ.

ಸಂವಿಧಾನದ 75ನೇ ವರ್ಷಾಚರಣೆ ಅಂಗವಾಗಿ ಹರಿಯಾಣದ ಸೋನಿಪಟ್‌ನಲ್ಲಿರುವ ಜಿಂದಾಲ್ ಗ್ಲೋಬಲ್ ವಿಶ್ವವಿದ್ಯಾನಿಲಯದಲ್ಲಿ ಪ್ರಪ್ರಥಮ ಮ್ಯೂಸಿಯಂ ಅನ್ನು ಸ್ಥಾಪಿಸಲಾಯಿತು. ಈ ಮ್ಯೂಸಿಯಂನಲ್ಲಿ ಸ್ಮರಣೀಯ ದಾಖಲೆಗಳು, ಛಾಯಾಚಿತ್ರಗಳು ಮತ್ತು ಭಾರತದ ಇತಿಹಾಸ ಒಳಗೊಂಡ ಆರ್ಟ್‌ವರ್ಕ್ಸ್ ಮತ್ತು ನಿರ್ದಿಷ್ಟವಾಗಿ ಸಂವಿಧಾನದ ಕರಡು ಪ್ರತಿಯ ದಾಖಲೆಗಳು ಸೇರಿದಂತೆ ಇನ್ನಿತರೆ ಪ್ರಮುಖ ದಾಖಲೆಗಳನ್ನು ಸಂಗ್ರಹಿಸಿ ಇಡಲಾಗಿದೆ ಈ ಮ್ಯೂಸಿಯಂ ಅನ್ನು 2024ರಂದು ನ.26ರಂದು ಉದ್ಘಾಟಿಸಿದ್ದು, ಈ ದಿನವನ್ನು ಸಂವಿಧಾನ ದಿನವೆಂದು ಘೋಷಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮ್ಯೂಸಿಯಂ ಅಧಿಕಾರಿಗಳು ಜಿಂದಾಲ್ ಜಾಗತಿಕ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಂವಿಧಾನ ರಚನಾಕಾರರ ವಂಶಸ್ಥರನ್ನು ಆಹ್ವಾನಿಸಿದರು.

ಈಗ ಕೂರ್ಗ್ ಎಂದು ಕರೆಯಲ್ಪಡುವ ಕೊಡಗು ಆಗ ಒಂದು ಸಾಮ್ರಾಜ್ಯವಾಗಿತ್ತು ಮತ್ತು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಸ್ವಾತಂತ್ರ್ಯ ನಂತರ ಕೂರ್ಗ್ ಕೂಡ ಸಂವಿಧಾನ ಸಭೆಯನ್ನು ಪ್ರತಿನಿಧಿಸಿತ್ತು. ಕೊಡಗಿನ ಮಾಜಿ ಮುಖ್ಯಮಂತ್ರಿ ಸಿ.ಎಂ.ಪೂಣಚ್ಚ ಕೊಡಗಿನ ಪ್ರತಿನಿಧಿಯಾಗಿ ಅಸೆಂಬ್ಲಿಯಲ್ಲಿದ್ದರು.



ಮ್ಯೂಸಿಯಂ ಪ್ರಾಧಿಕಾರ ಸಿ.ಎಂ.ಪೂಣಚ್ಚ ಮಕ್ಕಳಾದ ಸಿ.ಪಿ.ಬೆಳ್ಳಿಯಪ್ಪ, ಅಸೆಂಬ್ಲಿ ಸದಸ್ಯರು ಹಾಗೂ ಸಂವಿಧಾನಕ್ಕೆ ಸಹಿ ಮಾಡಿದವರಲ್ಲಿ ಒಬ್ಬರಾಗಿದ್ದ ಅವರ ಸಹೋದರಿ ಡಾ.ಕಾವೇರಿ ಪೂಣಚ್ಚ ನಂಬಿಸನ್ ಅವರನ್ನು ಅವರ ತಂದೆಯವರ ಪ್ರತಿನಿಧಿಯಾಗಿ ಭಾಗವಹಿಸಲು ಆಹ್ವಾನಿಸಿತ್ತು ಸಿ.ಎಂ.ಪೂಣಚ್ಚ ಅವರು ಬಹುಶಃ 36ನೇ ವಯಸ್ಸಿನಲ್ಲಿ ಸಂವಿಧಾನದ ರಾಷ್ಟ್ರೀಯ ದಾಖಲೆಗೆ ಸಹಿ ಮಾಡಿದ ಅತ್ಯಂತ ಕಿರಿಯ ಸದಸ್ಯರಲ್ಲಿ ಒಬ್ಬರಾಗಿದ್ದರು. ಸಂವಿಧಾನಕ್ಕೆ ಸಹಿ ಮಾಡಿದ 300 ಮಂದಿಯ ಪ್ರತಿಮೆಗಳನ್ನು ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ ಎಂಬುದು ಇಲ್ಲಿ ಗಮನಾರ್ಹ.

ಅವರಲ್ಲಿ ಸಹಜವಾಗಿಯೇ ಸಿ.ಎಂ.ಪೂಣಚ್ಚ ಅವರು ಒಬ್ಬರೂ (ಚಿತ್ರವನ್ನು ನೋಡಿ). ವಸ್ತು ಸಂಗ್ರಹಾಲಯ ಡಾ.ಬಿ.ಆರ್.ಅಂಬೇಡ್ಕರ್ ಅವರ ಅತ್ಯುತ್ತಮ ಚಿತ್ರವನ್ನು ಹೊಂದಿದೆ. ಸಂವಿಧಾನದ ಪಿತಾಮಹ ಡಾ.ಬಿ.ಆರ್.ಅಂಬೇಡ್ಕರ್, ಇದು ಸಂದರ್ಶಕರು ಡಾ.ಅಂಬೇಡ್ಕರ್ ಉತ್ತರಿಸುವ ಪ್ರಶ್ನೆಗಳನ್ನು ಕೇಳಲು ಅನುವು ಮಾಡಿಕೊಡುತ್ತದೆ.

(ಮೂಲ: ಕಾಫಿ ಲ್ಯಾಂಡ್ ನ್ಯೂಸ್, ಮಡಿಕೇರಿ, ದಿನಾಂಕ: 13–12–2024)

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಮಡಿಕೇರಿ ಜಿಪಂ ಕಚೇರಿ ಎದುರು ಗ್ರಾಪಂ ನೌಕರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಮಡಿಕೇರಿ: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಕೊಡಗು ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಗ್ರಾಪಂನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ ವಸೂಲಿಗಾರರು, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್, ನೀರುಘಂಟಿಗಳು, ಜವಾನ, ಸ್ವಚ್ಛತಾಗಾರರನ್ನು ಸರ್ಕಾರಿ ನೌಕರರೆಂದು ಘೋಷಿಸಬೇಕು. ಬೆಲೆ ಏರಿಕೆ ಅನುಗುಣವಾಗಿ ಕನಿಷ್ಠ ವೇತನವನ್ನು 31 ಸಾವಿರ ರೂ.ಗೆ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಕೊಡಗು ಜಿಲ್ಲೆಯ ಗ್ರಾಪಂಗಳಲ್ಲಿ ಹಲವಾರು ಹುದ್ದೆಗಳು ಖಾಲಿ ಇದ್ದು, ಕೆಲಸ ಕಾರ್ಯಗಳಾಗದೆ ಜನಸಾಮಾನ್ಯರು ಪರದಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಹುದ್ದೆ ಭರ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಬಳಿಕ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಗ್ರಾಪಂ ನೌಕರರ ಸಂಘದ ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಉಪಾಧ್ಯಕ್ಷ ಮಹದೇವ್, ಖಜಾಂಚಿ ವಸಂತ್, ಸದಸ್ಯರಾದ ವೀರಭದ್ರ, ಮುನಿಸ್ವಾಮಿ ಭಾಗವಹಿಸಿದ್ದರು.

ಇಂದು ಸಿರಿಧಾನ್ಯ ಪಾಕ ಸ್ಪರ್ಧೆ

ಮಡಿಕೇರಿ: ಕೃಷಿ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ ಅಂಗವಾಗಿ ಜಿಲ್ಲಾ ಮಟ್ಟದ ಸಿರಿಧಾನ್ಯ ರೋಡ್ ಶೋ ಹಾಗೂ ಪಾಕ ಸ್ಪರ್ಧೆಯನ್ನು ಡಿ.20ರಂದು ಬೆಳಗ್ಗೆ 7 ಗಂಟೆಗೆ ನಗರದಲ್ಲಿ ಏರ್ಪಡಿಸಲಾಗಿದೆ.

ಇದೇ ವೇಳೆ ನಗರದ ಕೋಟೆ ಆವರಣದಿಂದ ಗಾಂಧಿ ಮೈದಾನವರೆಗೆ ಕಾಲ್ನಡಿಗೆ ಜಾಥಾ ನಡೆಯಲಿದೆ. ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯ ಪಾಕ ಸ್ಪರ್ಧೆ ಬೆಳಗ್ಗೆ 10 ಗಂಟೆಗೆ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಕೆಎಸ್‌ಎಫ್‌ಸಿ ಕಟ್ಟಡ, ಇಂಡಸ್ಟ್ರೀಯಲ್ ಪ್ರದೇಶದಲ್ಲಿ ನಡೆಯಲಿದೆ.

ಅಪರಿಚಿತ ವಾಹನ ಡಿಕ್ಕಿ : ಜಿಂಕೆ ಸಾವು


ಅಪರಿಚಿತ ವಾಹನ ಡಿಕ್ಕಿ ಹೊಡೆದು ಮೃತಪಟ್ಟ ಜಿಂಕೆ

ಕುಶಾಲನಗರ, ಡಿ.19–ಹಾರಂಗಿ ಮತ್ತು ಅತ್ತೂರು ಮಾರ್ಗದಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಜಿಂಕೆ ಮೃತಪಟ್ಟಿರುವ ಘಟನೆ ಗುರುವಾರ ನಡೆದಿದೆ.

ಅತ್ತೂರು ಜ್ಞಾನಗಂಗಾ ಶಾಲಾ ಸಮೀಪ ಘಟನೆ ನಡೆದಿದ್ದು, ರಸ್ತೆಬದಿಯಲ್ಲಿ ಅಂದಾಜು 4–5 ವರ್ಷ ಗಂಡು ಜಿಂಕೆ ಸತ್ತಿರುವುದು ಪತ್ತೆಯಾಗಿದೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ, ಡಿಕ್ಕಿ ಹೊಡೆದ ವಾಹನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಸಿರಿಧಾನ್ಯ ಬಳಕೆ ಅರಿವು ಮೂಡಿಸಬೇಕು

ಚಾಮರಾಜನಗರ, ಡಿ.19–ಮುಂದಿನ ಪೀಳಿಗೆಗೆ ಸಿರಿಧಾನ್ಯ ಬಳಕೆ ಕುರಿತು ಅರಿವು ಮೂಡಿಸುವ ಮೂಲಕ ಆರೋಗ್ಯಯುತ ಸಮಾಜ ನಿರ್ಮಾಣ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ತಿಳಿಸಿದರು.

ನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕದ ಸ್ಪರ್ಧೆಗೆ ನವಣೆ ಹಾಗೂ ರಾಗಿ ಬೀಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಸಿರಿಧಾನ್ಯಗಳ ಬಳಕೆಯಿಂದ ಸಕ್ಕರೆ ಕಾಯಿಲೆ, ರಕ್ತದೊತ್ತಡ ಇತರೆ ಸಾಮಾನ್ಯ ಕಾಯಿಲೆಗಳಿಂದ ದೂರ ಇರಬಹುದು. ಆದ್ದರಿಂದ ಮುಂದಿನ ತಲೆಮಾರಿನ ಮಕ್ಕಳು ಮತ್ತು ಮೊಮ್ಮಕ್ಕಳು ಬಳಸುವ ಕುರಿತು ಅರಿವು ಮೂಡಿಸಿ ಅವರನ್ನು ಸದೃಢಗೊಳಿಸಬೇಕೆಂದು ಸಲಹೆ ನೀಡಿದರು.


ಚಾಮರಾಜನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಿರಿಧಾನ್ಯ ಸ್ಪರ್ಧೆಗೆ ರಾಗಿ ಬೀಸುವ ಮೂಲಕ ಜಿಪಂ ಸಿಇಓ ಮೋನಾ ರೋತ್ ಚಾಲನೆ ನೀಡಿದರು.

ಕೃಷಿ ಇಲಾಖೆ ಉಪ ನಿರ್ದೇಶಕಿ ಸುಷ್ಮಾ ಮಾತನಾಡಿ, ಜಿಲ್ಲೆಯಲ್ಲಿ ಸಿರಿಧಾನ್ಯಗಳ ಉತ್ಪಾದನೆಗೆ ಅಗತ್ಯ ಪ್ರೋತ್ಸಾಹ ನೀಡಲಾಗುತ್ತಿದೆ. ಅದನ್ನು ಉತ್ತೇಜಿಸುವ ಸಲುವಾಗಿ ಇಲಾಖೆಯಿಂದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಮಹಿಳೆಯರಿಗೆ ಸಿರಿಧಾನ್ಯಗಳ ಸ್ಪರ್ಧೆ ಆಯೋಜಿಸಿದ್ದು, 60ಕ್ಕೂ ಹೆಚ್ಚು ಮಹಿಳೆಯರು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದು, ಇದರಲ್ಲಿ 9 ಮಹಿಳೆಯರನ್ನು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಿರಿಧಾನ್ಯಗಳಿಂದ ತಯಾರಿಸಿದ್ದ ತಿಂಡಿ ತಿನಿಸುಗಳನ್ನು ಸವಿಯಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಲಕ್ಷ್ಮಿ, ಜಂಟಿ ಕೃಷಿ ನಿರ್ದೇಶಕ ಅಬೀದ್, ಸಹಾಯಕ ಕೃಷಿ ನಿರ್ದೇಶಕರಾದ ಲೀಲಾವತಿ, ರೂಪಾ, ನಿಶಾಂತ್, ಅಮೃತೇಶ್, ಶಶಿಧರ್ ಮೂರ್ತಿ ಹಾಗೂ ತೀರ್ಪುಗಾರರಾದ ಡಾ.ಜಿ.ದೀಪ, ಡಾ.ಮಮತಾ, ಡಾ.ಧನ್ಯಶ್ರೀ ಹಾಜರಿದ್ದರು.

ವಿಶೇಷಚೇತನರ ಅನುದಾನ ಸಮರ್ಪಕವಾಗಿ ಬಳಸಿ

ಕುಂದುಕೊರತೆ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಡಿ.19–ವಿವಿಧ ಇಲಾಖೆ, ಎಲ್ಲಾ ನಗರ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ವಿಶೇಷಚೇತನರ ಶ್ರೇಯೋಭಿವೃದ್ಧಿಗಾಗಿ ಮೀಸಲಿರುವ ಶೇ.5ರ ಅನುದಾನವನ್ನು ಸಮರ್ಪಕವಾಗಿ ಬಳಸಿ, ವಿಶೇಷಚೇತನ ಸ್ನೇಹಿ ವ್ಯವಸ್ಥೆ ಕಲ್ಪಿಸಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.


ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಸಭೆಯಲ್ಲಿ ಡಿಸಿ ಶಿಲ್ಪನಾಗ್ ವಿಶೇಷಚೇತನರ ಸಮಸ್ಯೆ ಆಲಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಮಟ್ಟದ ಕುಂದುಕೊರತೆ ಸಭೆಯಲ್ಲಿ ವಿಶೇಷಚೇತನರ ಸಮಸ್ಯೆ ಆಲಿಸಿ ಮಾತನಾಡಿದ ಅವರು, ವಿಶೇಷಚೇತನರಿಗೆ ಯುಡಿ ಐಡಿ ಕಾರ್ಡ್ ಹಾಗೂ ಪಡಿತರ ಚೀಟಿ ಪಡೆಯಲು ಆಧಾರ್ ಅವಶ್ಯವಾಗಿದೆ. ಈ ಸಂಬಂಧ ಅಧಿಕಾರಿಗಳು ಗ್ರಾಮ ಪಂಚಾಯಿತಿವಾರು ಮಾಹಿತಿ ಪಡೆದು ಆಧಾರ್ ಕಾರ್ಡ್ ಅಪ್‌ಡೇಟ್ ಆಗಿಲ್ಲದಿರುವುದನ್ನು ಗುರುತಿಸಬೇಕು. ಆಯಾ ಗ್ರಾಪಂನಲ್ಲಿ ಶಿಬಿರಗಳನ್ನು ಏರ್ಪಡಿಸಿ ಪಿಡಿಓ, ಅಂಗನವಾಡಿ, ಆಶಾ ಹಾಗೂ ಆರೋಗ್ಯ ಕಾರ್ಯಕರ್ತೆಯರೊಂದಿಗೆ ಸಮನ್ವಯ ಸಾಧಿಸಿ, ಶೀಘ್ರವಾಗಿ ಆಧಾರ್ ಅಪ್‌ಡೇಟ್ ಕಾರ್ಯ ಪೂರ್ಣಗೊಳಿಸುವಂತೆ ಆದೇಶಿಸಿದರು.

ಕೆಲ ಗ್ರಾಪಂನಲ್ಲಿ ಶೇ.5ರ ಮೀಸಲು ಅನುದಾನದಲ್ಲಿ ಶ್ರವಣದೋಷ ಯಂತ್ರ, ವ್ಹೀಲ್‌ಚೇರ್ ಖರೀದಿಸಿ ಸಮರ್ಪಕವಾಗಿ ವಿತರಣೆಯಾಗಿಲ್ಲದಿರುವ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಕಳೆದ ಐದು ವರ್ಷಗಳಲ್ಲಿ ಶೇ.5ರ ಅನುದಾನದಲ್ಲಿ ಖರ್ಚು–ವೆಚ್ಚದ ಮಾಹಿತಿ, ಹಣ ಪಾವತಿ, ಫಲಾನುಭವಿಗಳ ಆಯ್ಕೆ, ಇತರೆ ವಿವರವನ್ನು ತಕ್ಷಣ ಸ್ಥಳೀಯ ಲೆಕ್ಕಪರಿಶೋಧನಾ ಇಲಾಖೆಯಿಂದ ತಪಾಸಣೆ ಮಾಡಿಸಿ ವರದಿ ಸಲ್ಲಿಸಬೇಕು. ಅಲ್ಲದೇ, ಕಳೆದ ಸಾಲಿನಲ್ಲಿ ವಿಶೇಷಚೇತನರ ಮಕ್ಕಳಿಗೆ ಮಂಜೂರಾಗಿದ್ದ ವಿದ್ಯಾರ್ಥಿವೇತನ ಸರ್ಕಾರಕ್ಕೆ ವಾಪಸು ಹೋಗಿತ್ತು. ಈ ಬಾರಿ ಅದು ಮರುಕಳಿಸದಂತೆ ಎಚ್ಚರ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಕೆಎಸ್‌ಆರ್‌ಸಿಗೆ ಸಂಬಂಧಿಸಿದಂತೆ 21 ಬಗೆಯ ವಿಕಲತೆಗಳನ್ನು ಗುರುತಿಸಲಾಗಿದ್ದು, ಎಲ್ಲಾ ವಿಶೇಷಚೇತನರಿಗೂ ತಾರತಮ್ಯವಿಲ್ಲದೆ ಆದ್ಯತೆ ಮೇರೆಗೆ ಬಸ್‌ಪಾಸ್ ನೀಡಬೇಕು. ಅಶ್ವಮೇಧ ಬಸ್‌ಗಳಲ್ಲಿ ವಿಶೇಷಚೇತನರಿಗೆ ಆಸನ ಮೀಸಲಿರಿಸಬೇಕು. ಡಿಪೋನಲ್ಲಿ ಬಸ್‌ಪಾಸ್ ವಿಭಾಗ ಸೇರಿದಂತೆ ಎಲ್ಲಾ ಸರ್ಕಾರಿ ಕಚೇರಿಗಳು ಮೇಲಂತಸ್ತಿನಿಂದ ನೆಲಮಹಡಿಗೆ ಸ್ಥಳಾಂತರವಾಗಬೇಕು. ತಪ್ಪಿದಲ್ಲಿ ರ‍್ಯಾಂಪ್, ಲಿಫ್ಟ್ ವ್ಯವಸ್ಥೆ ಮಾಡಬೇಕು. ಎಲ್ಲಾ ಬಸ್ ನಿಲ್ದಾಣಗಳಲ್ಲೂ ವ್ಹೀಲ್‌ಚೇರ್ ವ್ಯವಸ್ಥೆ ಇರಬೇಕು. ವಿಶೇಷಚೇತನರಿಂದ ಯಾವುದೇ ದೂರುಗಳು ಬರದಂತೆ ನಿಗಾ ವಹಿಸಿ, ಮುಂದಿನ 15 ದಿನದೊಳಗೆ ಸಮಸ್ಯೆ ಪರಿಹರಿಸಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

3 ಸಾವಿರ ಮಾಸಾಶನ ನೀಡಲು ಮನವಿ

ವಿಶೇಷಚೇತನರಿಗೆ ಕನಿಷ್ಠ 3 ಸಾವಿರ ಮಾಸಾಶನ ನೀಡಬೇಕು. ವಸತಿ ಯೋಜನೆಯಡಿ ಸಂಬಂಧಪಟ್ಟ ವಿಆರ್‌ಡಬ್ಲ್ಯೂ ಅವರಿಂದ ಮಾಹಿತಿ ಪಡೆದು ಪಾರದರ್ಶಕ ಸಮೀಕ್ಷೆ ನಡೆಸಿ, ಮನೆ ಮಂಜೂರಾತಿ ನೀಡಬೇಕು. ವಾಹನ ವಿತರಣೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಬೇಕು. ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಲು ವಿಶೇಷಚೇತನರಿಗೆ ಅವಕಾಶ ನೀಡಬೇಕು. ಬ್ಯಾಂಕ್‌ಗಳಲ್ಲಿ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಇರಬೇಕು ಎಂದು ಸಭೆಯಲ್ಲಿ ವಿಶೇಷಚೇತನರು ಜಿಲ್ಲಾಧಿಕಾರಿಗೆ ಮನವಿ ಮಾಡಿದರು.

ನೂತನ ತಾಪಂ ಇಓಗೆ ಸನ್ಮಾನ...



ಚಾಮರಾಜನಗರ ತಾಪಂ ನೂತನ ಕಾರ್ಯನಿರ್ವಾಹಕಾಧಿಕಾರಿ ಪಿ.ಶ್ರೀನಿವಾಸ ಅವರನ್ನು ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಸಮಿತಿ ಅಧ್ಯಕ್ಷ ಆಲೂರು ಮಲ್ಲು, ಪ್ರಧಾನ ಕಾರ್ಯದರ್ಶಿ ಬಸವನಪುರ ರಾಜಶೇಖರ, ಜಿ.ಎಂ.ಶಂಕರ್, ಗ್ರಾಪಂ ಮಾಜಿ ಅಧ್ಯಕ್ಷ ದೇಮಳ್ಳಿ ಶಿವಮಲ್ಲಪ್ಪ, ಕೊತ್ತಲವಾಡಿ ಪುಟ್ಟಲಿಂಗಯ್ಯ, ಕೆಂಪರಾಜು ಪುನೀತ್ ಇದ್ದರು.

ವಿದ್ಯಾರ್ಥಿಗೆ ಶಿಕ್ಷಕ ಕಪಾಳ ಮೋಕ್ಷ: ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ ಅವರಿಗೆ ದೂರು

ಕೊಳ್ಳೇಗಾಲ: ಕ್ಷುಲ್ಲಕ ಕಾರಣಕ್ಕೆ ಪಟ್ಟಣದ ಖಾಸಗಿ ಶಿಕ್ಷಣ ಸಂಸ್ಥೆ ಶಿಕ್ಷಕ ವಿದ್ಯಾರ್ಥಿಗೆ ಕಪಾಳ ಮೋಕ್ಷ ಮಾಡಿರುವುದಾಗಿ ಪೋಷಕರು ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ ಅವರಿಗೆ ದೂರು ನೀಡಿದ್ದಾರೆ. ಶಿಕ್ಷಕ ಜಗನ್ನಾಥ್ ಭಾರದ್ವಾಜ್ ವಿರುದ್ಧ ದೂರು ನೀಡಲಾಗಿದ್ದು, ಶಿಕ್ಷಕ ಕ್ಷುಲ್ಲಕ ಕಾರಣಕ್ಕಾಗಿ 3ನೇ ತರಗತಿ ವಿದ್ಯಾರ್ಥಿ ಹಾಗೂ ನಗರಸಭೆ ಮಾಜಿ ನಾಮನಿರ್ದೇಶನ ಸದಸ್ಯ ದೇವಾಂಗಪೇಟೆ ಮಧುಚಂದ್ರ ಅವರ ಪುತ್ರನಿಗೆ ಗುರುವಾರ ಶಾಲೆಯಲ್ಲಿ ಕಪಾಳ ಮೋಕ್ಷ ಮಾಡಿದ್ದಾರೆ. ಇದರಿಂದ ಬಾಲಕನ ಕಪಾಲದಲ್ಲಿ ಹೂತ ಕಾಣಿಸಿಕೊಂಡಿದೆ.

ಶಾಲೆಯಿಂದ ಮನೆಗೆ ಬಂದ ಬಾಲಕ ಪೋಷಕರಿಗೆ ವಿಚಾರ ತಿಳಿಸಿದ್ದಾನೆ. ನಂತರ ಬಾಲಕನೊಂದಿಗೆ ಶಿಕ್ಷಕನ ಬಳಿ ತೆರಳಿದ ಪೋಷಕರು, ನಿಮ್ಮ ವರ್ತನೆ ಮತ್ತು ಕಪಾಳ ಮೋಕ್ಷ ಮಾಡಿರುವುದು ಎಷ್ಟು ಸರಿ? ಎನ್ನಾದರೂ ಜೋರಾಗಿ ಹೊಡೆದಿದ್ದರೆ ನನ್ನ ಮಗನ ಸ್ಥಿತಿ ಏನಾಗುತ್ತಿತ್ತು. ಈಗಾಗಲೇ ಕಪಾಳ ಊದಿಕೊಂಡಿದ್ದು, ಚಿಕಿತ್ಸೆ ಕೊಡಿಸಬೇಕಾಗಿದೆ. ಮುಂದೆ ಯಾವ ವಿದ್ಯಾರ್ಥಿಗೂ ಈ ತರಹ ಹೊಡೆಯಬೇಡಿ. ಶಾಲಾ ಆಡಳಿತ ಮಂಡಳಿ ಎಚ್ಚೆತ್ತುಕೊಳ್ಳಬೇಕು ಎಂದು ಪೋಷಕ ಮಧುಚಂದ್ರ ಎಚ್ಚರಿಸಿದರು. ನಂತರ ಶಿಕ್ಷಕ ಜಗನ್ನಾಥ್ ಭಾರದ್ವಾಜ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗೆ ದೂರು ನೀಡಿದರು.

ಡಿ.27ರಂದು ಎಸ್ಸಿ, ಎಸ್ಟಿ ಹಿತರಕ್ಷಣಾ ಸಮಿತಿ ಸಭೆ

ಗುಂಡ್ಲುಪೇಟೆ, ಡಿ.19– ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯನ್ನು ಡಿ.27 ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ತಾಲೂಕು ಕಚೇರಿ ಸಭಾ ಭವನದಲ್ಲಿ ಏರ್ಪಡಿಸಲಾಗಿಸಲಾಗಿದೆ.

ಸಮಿತಿ ಸದಸ್ಯರು ಅಹವಾಲುಗಳನ್ನು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಿಗೆ ಡಿ.27ರೊಳಗೆ ಸಲ್ಲಿಸಬೇಕು ಎಂದು ತಹಸೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರೀಯ ವಿದ್ಯಾಲಯ ವಾರ್ಷಿಕ ಕ್ರೀಡಾಕೂಟ...


ಚಾಮರಾಜನಗರ ಕೇಂದ್ರೀಯ ವಿದ್ಯಾಲಯದಲ್ಲಿ ನಡೆದ ಶಾಲಾ ವಾರ್ಷಿಕ ಕ್ರೀಡಾಕೂಟ ಸಮಾರೋಪವನ್ನು ಪ್ರಾಂಶುಪಾಲ ದಾವಿಂದರ್ ಸಿಂಗ್, ವಿಜಯೇಂದ್ರ ಮತ್ತು ಸುನೀಲ್ ಕುಮಾರ್ ಕ್ರೀಡಾ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ಸಮೂಹ ದೇವಾಲಯ ಹುಂಡಿಯಲ್ಲಿ 18.78 ಲಕ್ಷ ರೂ. ಸಂಗ್ರಹ


ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿ ಎಣಿಕೆ ಕಾರ್ಯ ನಡೆಯಿತು.

ಕೊಳ್ಳೇಗಾಲ, ಡಿ.19–ತಾಲೂಕಿನ ಶಿವನಸಮುದ್ರ ಸಮೂಹ ದೇವಾಲಯಗಳ ಹುಂಡಿಯಲ್ಲಿ ಒಟ್ಟು 18,78,400 ಲಕ್ಷ ರೂ. ಸಂಗ್ರಹವಾಗಿದೆ.

ಕಳೆದ ಆರು ತಿಂಗಳ ಬಳಿಕ ಮುಜರಾಯಿ ಇಲಾಖೆ ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್ ನೇತೃತ್ವದಲ್ಲಿ ನಡೆದ ಎಣಿಕೆ ಕಾರ್ಯದಲ್ಲಿ ಮಧ್ಯರಂಗನಾಥಸ್ವಾಮಿ, ಸೋಮೇಶ್ವರ ಸ್ವಾಮಿ ಹಾಗೂ ಆದಿಶಕ್ತಿ ಮಾರಮ್ಮ ದೇವಾಲಯಗಳ ಹುಂಡಿಗಳಲ್ಲಿ 18,78,400 ಲಕ್ಷ ರೂ., 5 ಗ್ರಾಂ ಚಿನ್ನ ಹಾಗೂ 13 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ.

ಎಣಿಕೆ ಕಾರ್ಯದಲ್ಲಿ ಮುಜರಾಯಿ ಇಲಾಖೆ ಕಾರ್ಯನಿರ್ವಾಹಕಾಧಿಕಾರಿ ಎನ್.ಸುರೇಶ್, ಪಾಳ್ಯ ಉಪತಹಸೀಲ್ದಾರ್ ಕೆ.ವಿ.ವಿಜಯಕುಮಾರ್, ರಾಜಸ್ವನಿರೀಕ್ಷಕರಾದ ನಿರಂಜನ್, ರಂಗಸ್ವಾಮಿ, ಗ್ರಾಮ ಆಡಳಿತಾಧಿಕಾರಿ ರಾಕೇಶ್ ಮರಾಠ, ಪ್ರದೀಪ್, ಪ್ರಸಾದ್, ಅನಿಲ್, ಮಹದೇವಸ್ವಾಮಿ, ಶಿವರಾಜ್, ಸೀಗನಾಯಕ, ಕೋಟೆಕ್ ಮಹೀಂದ್ರಾ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ್, ಗ್ರಾಮ ಸಹಾಯಕರು ಮತ್ತು ದೇವಾಲಯ ಸಿಬ್ಬಂದಿ ಭಾಗವಹಿಸಿದ್ದರು.

ಕಿಚ್ಚ ಸುದೀಪ್ ಜೊತೆ 'ಮ್ಯಾಕ್ಸ್' ಮಾತುಕತೆ



ಕನ್ನಡ ಚಿತ್ರರಂಗ ಕಂಡ ಅದ್ಭುತ ಕಲಾವಿದ ಎಂದರೆ ಕಿಚ್ಚ ಸುದೀಪ್. ಸ್ಯಾಂಡಲ್‌ವುಡ್‌ನ ಬ್ಯುಸಿಯೆಸ್ಟ್ ಸ್ಟಾರ್ ನಟ. ಕ್ರಿಸ್‌ಮಸ್ ಕೊಡುಗೆಯಾಗಿ ಸುದೀಪ್ ಅಭಿನಯದ ಮ್ಯಾಕ್ಸ್ ಸಿನಿಮಾ ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಯಲ್ಲಿ ರಿಲೀಸಾಗುತ್ತಿದೆ. ಪತ್ರಕರ್ತರೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಸುದೀಪ್, ಈ ಸಂದರ್ಭದಲ್ಲಿ ತನ್ನ ಸಿನಿ ಜರ್ನಿಯ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ.

ನನ್ನ ತಾಯಿಯ ಅಗಲಿಕೆಯನ್ನು ಇಂದಿಗೂ ಸಹ ನನಗೆ ಅರಗಿಸಿಕೊಳ್ಳಲು ಸಾಧ್ಯವಿಲ್ಲ, ಅವರು ನನ್ನ ಜೀವನದ ಭಾಗವೇ ಆಗಿದ್ದರು. ನನ್ನ ಚಿತ್ರ ರಿಲೀಸಾದಾಗ ಅವರು ಥೇಟರ್‌ನಲ್ಲಿ ಪ್ರೇಕ್ಷಕರ ಜೊತೆ ಕುಳಿತೇ ಸಿನಿಮಾ ವೀಕ್ಷಿಸುತ್ತಿದ್ದರು. ಮ್ಯಾಕ್ಸ್ ಚಿತ್ರವನ್ನು ತೆರೆಮೇಲೆ ನೋಡಬೇಕೆಂದು ಅವರಿಗೆ ತುಂಬಾ ಆಸೆಯಿತ್ತು. ಮ್ಯಾಕ್ಸ್ ಸಂಜೆ 7ರಿಂದ ಬೆಳಿಗ್ಗೆ 7ರವರೆಗೆ ಒಂದೇ ರಾತ್ರಿಯಲ್ಲಿ ನಡೆಯುವ ಥ್ರಿಲ್ಲರ್ ಕಥೆ.

ಬೆಳಗ್ಗೆ ಹೊಸದಾಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಹೊರಟಿದ್ದ ಕಾಪ್ ಆ ರಾತ್ರಿ ಎದುರಿಸಿದ ಘಟನೆಗಳೇ ಈ ಚಿತ್ರದ ಕಾನ್ಸೆಪ್ಟ್, ಸತತ 6 ತಿಂಗಳವರೆಗೆ ಶೂಟಿಂಗ್‌ನಲ್ಲಿ ತೊಡಗಿದ್ದೆವು. ದಿನದ 1 ಗಂಟೆ ಅಂತರದಲ್ಲಿ ಹಲವು ಬದಲಾವಣೆಗಳನ್ನು ಕಾಣಬಹುದು. ಆದರೆ 6 ತಿಂಗಳ ಕಾಲ ಒಂದೇ ಮೂಡ್, ಒಂದೇ ಬಾಡಿಶೇಪ್, ಕಾಸ್ಟ್ಯೂಮ್ ಹೀಗೆ ಸಿನಿಮಾದ ಕಂಟಿನ್ಯೂಟಿಗೆ ಹೊಂದಿಕೊಳ್ಳುವುದೇ ದೊಡ್ಡ ಚಾಲೆಂಜ್ ಆಗಿತ್ತು. ಮಹಾಬಲಿಪುರಂನಲ್ಲಿ ದೂಳು ತುಂಬಿದ ವಾತಾವರಣ ಹಾಗೂ ರಾತ್ರಿ ವೇಳೆಯಲ್ಲೇ ಶೂಟಿಂಗ್ ನಡೆಸಿದ್ದೇವೆ. ಸಿನಿಮಾ ತಡವಾಗಲು ಕಾರಣ ಕೋವಿಡ್. ಆ ಸಮಯದಲ್ಲಿ ನನಗೂ ಕೊರೊನಾ ಅಟ್ಯಾಕ್ ಆಗಿ ಒಂದು ವರ್ಷ ಟ್ರೀಟ್‌ಮೆಂಟ್ ತಗೋಬೇಕಾಯ್ತು, ಅದು ಸಿನಿಮಾಗೂ ಎಫೆಕ್ಟ್ ಆಯ್ತು. ಕೊನೆಗೆ ಈ ವರ್ಷದ ಕೊನೆಯ ಚಿತ್ರವಾಗಿ ರಿಲೀಸಾಗುತ್ತಿರುವುದಕ್ಕೆ ಖುಷಿಯಾಗ್ತಿದೆ. ಲೇಟಾಗಿ ಬಂದ್ರೂ, ಲೇಟೆಸ್ಟಾಗಿ ಬರ್ತಿದೆ. 2025ರಲ್ಲಿ ನನ್ನ ಮುಂದಿನ ಸಿನಿಮಾ ಬಿಲ್ಲಾ ರಂಗಾ ಭಾಷಾ ಶುರುವಾಗುತ್ತಿದೆ. ಅದನ್ನು 18 ತಿಂಗಳ ಒಳಗಾಗಿ ತೆರೆಗೆ ತರಬೇಕೆಂಬ ಯೋಜನೆಯಿದೆ ಎಂದು ವಿವರಿಸಿದ್ದಾರೆ.

ಪ್ರೀ ರಿಲೀಸ್ ಇವೆಂಟ್:

ಕಳೆದ ವಾರ ಮ್ಯಾಕ್ಸ್ ಚಿತ್ರದ ಸಿಂಹ ಮೆರೆವ ಕಾಡಿನಲ್ಲಿ ಎಂಬ ಹಾಡಿನ ಬಿಡುಗಡೆ ಹಾಗೂ ಪ್ರೀ ರಿಲೀಸ್ ಇವೆಂಟ್ ನಡೆಯಿತು. ಅನೂಪ್ ಭಂಡಾರಿ ಅವರ ಸಾಹಿತ್ಯವಿರುವ ಈ ಹಾಡಿಗೆ ವಿಜಯ್‌ಪ್ರಕಾಶ್ ಧ್ವನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ಈ ಚಿತ್ರದಲ್ಲಿ ಸುದೀಪ್, ಅರ್ಜುನ್ ಮಹಾಕ್ಷಯ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ಅವರನ್ನು ಎಲ್ಲರೂ ಮ್ಯಾಕ್ಸ್ ಎಂದು ಕರೆಯುತ್ತಿರುತ್ತಾರಂತೆ. ಕಲೈಪುಲಿ ಎಸ್.ಥಾನು ಅವರ ನಿರ್ಮಾಣದ ಈ ಚಿತ್ರಕ್ಕೆ ವಿಜಯ್ ಕಾರ್ತಿಕೇಯನ್ ಆಕ್ಷನ್ ಕಟ್ ಹೇಳಿದ್ದಾರೆ.

ಚಂದನವನದ ಚೆಲುವೆಯರಿಂದ ಪ್ರೊ ಲುಡೋ...

ಇತ್ತೀಚಿನ ದಿನಗಳಲ್ಲಿ ಕಲಾವಿದರು ಕ್ರೀಡೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ದಶಕಗಳ ಹಿಂದೆ ಸಾಹಸಸಿಂಹ ವಿಷ್ಣುವರ್ಧನ್ ಇದಕ್ಕೆ ನಾಂದಿ ಹಾಡಿದ್ದರು. ಇದೀಗ ನಟಿಯರೂ ಸಹ ಅನೇಕ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಪ್ರೊ ಲುಡೋ ಸ್ಟಾರ್ ಲೀಗ್ ಎಂಬ ಕಲಾವಿದರ ವಿಶೇಷ ಮನರಂಜನಾ ಕ್ರೀಡೆಯನ್ನು ಜನವರಿಯಲ್ಲಿ ಆಯೋಜಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಪತ್ರಿಕಾಗೋಷ್ಠಿ ಆಯೋಜಿಸಲಾಗಿತ್ತು. ಆಸ್ತ್ರ ಪ್ರೊಡಕ್ಷನ್ಸ್ ಲಂಚು ಲಾಲ್ ಆಯೋಜಿಸಿರುವ ಈ ಸ್ಟಾರ್‌ಲೀಗ್ ಸುದೇಶ್ ಭಂಡಾರಿ ಹಾಗೂ ಅಜರ್ ರಜಾಕ್ ಅವರ ನೇತೃತ್ವದಲ್ಲಿ ನಡೆಯುತ್ತಿದೆ.



ವರ್ಣರಂಜಿತ ಒಳಾಂಗಣ ಅಖಾಡದಲ್ಲಿ ನಡೆಯುವ ಲುಡೋ ಗೇಮ್ ಅಷ್ಟೇ ಆಕರ್ಷಕವಾಗಿರಲಿದೆ. ಈ ಲೀಗ್‌ನಲ್ಲಿ ಒಟ್ಟು ಎಂಟು ತಂಡಗಳಿದ್ದು, ಚಲನಚಿತ್ರ ಮತ್ತು ಕಿರುತೆರೆಯ ಒಟ್ಟು 16 ಜನ ತಾರೆಯರು ಈ ತಂಡಗಳಲ್ಲಿ ಭಾಗವಹಿಸಲಿದ್ದಾರೆ. ಇವರಲ್ಲದೆ 16 ಜನ ರೂಪದರ್ಶಿಯರೂ ಸಹ ಈ ಆಟದ ಭಾಗವಾಗಿರಲಿದ್ದಾರೆ. ಈ ಎಂಟು ತಂಡಗಳಲ್ಲಿ ಆಡುವ ಕಲಾವಿದರ ವಿವರ ಹೀಗಿದೆ.

ನವೀನ್ ಡಿ.ಪಡೀಲ್ ಮತ್ತು ಸುಂದರ್ ರೈ ಮಂದಾರ, ಮಿಮಿಕ್ರಿ ಗೋಪಿ ಮತ್ತು ವಿನುತ, ಅದ್ವಿತಿ ಶೆಟ್ಟಿ ಮತ್ತು ಅಶ್ವಿತಿ ಶೆಟ್ಟಿ, ತುಕಾಲಿ ಸಂತೋಷ್ ಮತ್ತು ಮಾನಸ ಸಂತೋಷ್, ಮಂಜು ಪಾವಗಡ ಮತ್ತು ಹುಲಿಕಾರ್ತಿಕ್, ಚಂದನಗೌಡ ಮತ್ತು ಅಮೃತ, ಕೆಂಪೇಗೌಡ ಮತ್ತು ಮಾನ್ಯಗೌಡ, ಸೀತಾರಾಮ್ ಮತ್ತು ಸಾಕ್ಷಿ ಮೇಘನಾ. ಲೀಗ್‌ನಲ್ಲಿ ಪಾಲ್ಗೊಳ್ಳುತ್ತಿರುವ ಕೆಂಪೇಗೌಡ, ಅದ್ವಿತಿಶೆಟ್ಟಿ, ಅಶ್ವಿತಿ ಶೆಟ್ಟಿ, ಮಾನ್ಯಗೌಡ, ಸೀತರಾಮ, ಚಂದನಗೌಡ, ಸಾಕ್ಷಿ ಮೇಘನ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಸಿನಿಪದಬಂಧ-556



ಉಮ್ಮತ್ತೂರು ಇಂದುಶೇಖರ್
ಮೊ.9880820462

1	2				3		4			
							5			
			6							
7					8	9			10	
11					12					
								13		
		14		15						16
						17				
18							19			

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಪ್ರಾಣಿಗಳೆರಡರ ನಡುವೆ ಇರುವ ವ್ಯತ್ಯಾಸ! 6
5.ಡೈನಾಮಿಕ್ ಹೀರೋ 4
7.ಭಾಸ್ಕರ್ ನಿರ್ದೇಶನದಲ್ಲಿ ಗದ್ದಲ ಎಬ್ಬಿಸಿದ ಚಿತ್ರ 4
8.ವಿಷ್ಣುವರ್ಧನ್-ರೋಹಿಣಿ ಅಭಿನಯದ ಚಿತ್ರ 6
11.ಆದಿತ್ಯನ ಆಂಗ್ಲ ಪ್ರೇಮ 2
12.ಗುಲಾಬಿ ಚಿತ್ರದಲ್ಲಿ ರಾಮ್ ಕುಮಾರ್ ಜೊತೆಗಾರ್ತಿ 3
14.ಗಣೇಶ ಸುಬ್ರಮಣ್ಯ ಚಿತ್ರದ ನಾಯಕಿ 3
17." _ _ _ _ _ ಹಾಡೆನ್ನ ಲಾಲಿ ನನ್ನ ಚೆಲುವಿಗೆ ಸೊಗಸಾದ ಲಾಲಿ....... ", 5
18.ರವಿಚಂದ್ರನ್ ವಿಲಾಸ ಪ್ರಿಯ 3
19.ಕಿಚ್ಚ ಸುದೀಪ್ "ಚಕ್ರವರ್ತಿ" 4

ಮೇಲಿನಿಂದ ಕೆಳಕ್ಕೆ

2.ಗೆಲುವಿನ ಸರ ಧರಿಸಿರುವ ನಟಿ 4
3.ಶಂಕರ್‌ನಾಗ್ ರೋಡಿಗಿಳಿದ ಅರಸ 4
4.ತರುಣ್‌ಚಂದ್ರ - ಮೃದುಲಾ ಅಭಿನಯದ ಚಿತ್ರ 4
6." _ _ _ _ _ _ ಸಾಕ್ಷಾತ್ಕಾರ ಒಲವೇ ಮರೆಯದ ಮಮಕಾರ..... ", 6
7.ಮುನಿಯನ ಮಾದರಿ ಚಿತ್ರದ ನಾಯಕರಲ್ಲಿ ಒಬ್ಬ 6
9.ಶಶಿಕುಮಾರ್ ರಂಪ ಮಾಡಿದ್ದಾನೆ 7
10.ಜಗ್ಗೇಶ್ - ರವಳಿ ಅಭಿನಯದ ಚಿತ್ರ 3
13.ಪುನೀತ್ ರಾಜ್‌ಕುಮಾರ್ "ದೊರೆ" 3
14.ಅವಿನಾಶ್ ತಾರಾಪತ್ನಿ 4
15.ಮಾಲೆಯ ನಡುವೆ ನೀಡಿದ ಆತಿಥ್ಯ 3
16.ಶಶಿಕುಮಾರ್ ದಿನವಿಡೀ ದುಡಿದರೂ ಅರಸನೇ! 4

ಸಿನಿ ಪದಬಂಧ 555ರ ಉತ್ತರ

ಮಾ	ಗಿ	ಯ	ಕ	ನ	ಸು		ಒಂ			
	ಳಿ				ಪ್ರ		ದೇ	ವ	ಯಾ	ನಿ
	ಬೇ		ಮ		ಭಾ		ಗು			
ಬೇ	ಟೆ	ಗಾ	ರ		ತ	ವ	ರಿ	ನ	ಸಿ	ರಿ
ಡಿ			ಣ			ಜ್ರ			ಪಾ	
ಬಂ	ಡಿ		ಮೃ		ಕ	ದ	ನ		ಯಿ	
ದ			ದಂ			ಜ		ಕಂ		
ವ		ಗ	ಗ	ನ		ಲ		ಪ		ಬಂ
ಳು		ಜ		ಳಿ		ಪಾ	ವ	ನ	ಗಂ	ಗಾ
		ಪ		ನಿ		ತ				ರ
ಆ	ರ	ತಿ					ಬೆ	ಳ್ಳಿ	ಯ	ಪ್ಪ

ವಿಜೇತರು: ಎಸ್.ರಾಜಣ್ಣ, ಎಚ್.ಎಂ.ಸರ್ಕಲ್, ಹಾಡ್ಲಿ ಪೋಸ್ಟ್, ಮಳವಳ್ಳಿ ತಾ, ಮಂಡ್ಯ ಜಿಲ್ಲೆ-571475

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಚಿತ್ರತಾರೆ ಕೊಡಗಿನ ತಪಸ್ವಿನಿಯ 'ಕಾಫಿ ಪ್ರೇಮ'!

ಕೊಡಗಿನ ಬೆಡಗಿ ತಪಸ್ವಿನಿ ಪೊಣಚ್ಚ, ಚಿತ್ರರಂಗದ ಉದಯೋನ್ಮುಖ ನಟಿ. ಜೊತೆ-ಜೊತೆಗೆ ಕಾಫಿ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೊಡಗಿನ ಕಾಫಿ ಘಮವನ್ನು ವಿದೇಶಕ್ಕೂ ಹರಡುತ್ತಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯವಾಗಿದ್ದ ತಪಸ್ವಿನಿ ಪೊಣಚ್ಚ, ಬಣ್ಣದ ಲೋಕಕ್ಕೆ ಬಯಸಿ ಬಂದವರಲ್ಲ. ಮೈಸೂರಿನ ಖ್ಯಾತ ಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್, ತಮ್ಮ ಸಂದೇಶ್ ಪ್ರೊಡಕ್ಷನ್ ಅಡಿ ರಿಷಬ್ ಶೆಟ್ಟಿ ನಾಯಕನಾಗಿ 'ಹರಿಕಥೆ ಅಲ್ಲ ಗಿರಿಕಥೆ' ಚಿತ್ರವನ್ನು ನಿರ್ಮಿಸುವ ವೇಳೆ ಇನ್‌ಸ್ಟಾಗ್ರಾಂನಲ್ಲಿ ತಪಸ್ವಿನಿ ಅವರ ಫೋಟೋವನ್ನು ನೋಡಿ ಅವರನ್ನು ಈ ಚಿತ್ರಕ್ಕೆ ಆಯ್ಕೆ ಮಾಡಿದ್ದರು.

ಹೀಗೆ 'ಹರಿಕಥೆ ಅಲ್ಲ ಗಿರಿಕಥೆ' ಸಿನಿಮಾದಲ್ಲಿ ರಿಷಬ್ ಶೆಟ್ಟಿ ಜೊತೆ ನಟಿಸಿದರು. ಕರಣ್ ಅನಂತ್ ಮತ್ತು ಅನಿರುದ್ಧ್ ಮಹೇಶ್ ನೆರವಿಂದ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು.

ನಟನೆಯಲ್ಲಿ ಯಾವುದೇ ಅನುಭವ ಅಥವಾ ತರಬೇತಿ ಇಲ್ಲದ ತಪಸ್ವಿನಿಗೆ ರಿಷಬ್ ಶೆಟ್ಟಿ ಸಿನಿಮಾದಲ್ಲಿ ನಟಿಸಲು ದೊರೆತ ಅವಕಾಶದ ಮೂಲಕ ತಪಸ್ವಿನಿ ತಮ್ಮ ಅದೃಷ್ಟ ಪರೀಕ್ಷೆಗಿಳಿದಿದ್ದರು.

ನಂತರ 'ಬಿಚ್ಚುಗತ್ತಿ'ಯ ಮೂಲಕ ಸ್ಯಾಂಡಲ್‌ವುಡ್ ಸಿನಿರಸಿಕರ ಮನಗೆದ್ದಿದ್ದ ನಟ ರಾಜವರ್ಧನ್‌ರ 'ಗಜರಾಮ' ಚಿತ್ರಕ್ಕೂ ನಾಯಕಿಯಾದರು. ಸಾಕಷ್ಟು ಅವಕಾಶಗಳು ಅರಸಿ ಬಂದರೂ ತಾವು ಬಣ್ಣದ ಲೋಕದಲ್ಲಿ ಹೆಚ್ಚಿನ ಸಿನಿಮಾಗಳನ್ನು ಮಾಡಬೇಕು ಎಂಬುದಕ್ಕಿಂತ ಉತ್ತಮ ಚಿತ್ರಗಳಲ್ಲಷ್ಟೇ ನಟಿಸಬೇಕು ಎಂಬ ಗುರಿಯೊಂದಿಗೆ ತಮಗೆ ಕಥೆ ಇಷ್ಟವಾದರೆ, ಆ ಪಾತ್ರಕ್ಕೆ ಹೊಂದಿಕೊಳ್ಳುತ್ತೇನೆ ಎಂಬ ವಿಶ್ವಾಸ ಬಂದರೆ ಮಾತ್ರ ಚಿತ್ರಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ.


ಇವರು ಕಾಫಿ ಎಸ್ಟೇಟ್ ಕೂಡ ಹೊಂದಿರುವುದರಿಂದ ಸಹಜವಾಗಿಯೇ ಕಾಫಿ ಮೇಲೆ ಅಪಾರ ಪ್ರೀತಿ. ವಿಶೇಷ ಕಾಫಿ ಬಗ್ಗೆ ಸರ್ಟಿಫಿಕೇಟ್ ಪಡೆದಿದ್ದಾರೆ. ಕಾಫಿ ಕುರಿತು ಇನ್ನೂ ಹೆಚ್ಚಿನ ವಿಚಾರ ಅರಿಯಲು ಯುರೋಪ್ ಪ್ರವಾಸ ಕೈಗೊಂಡಿದ್ದಾರೆ. ಜೊತೆಗೆ ವಿದೇಶದಲ್ಲೂ ಕಾಫಿ ಬಗ್ಗೆ ಪ್ರಚಾರ ಮಾಡುವ ಉದ್ದೇಶವಿದ್ದು, ಕೊಡಗಿನ ಕಾಫಿ ಘಮ ಅಲ್ಲೂ ಹರಡುತ್ತಿದ್ದಾರೆ. ಚಿತ್ರರಂಗದಲ್ಲಿ ಏರಿಳಿತಗಳು ಸಾಮಾನ್ಯವಾಗಿದ್ದು, ಭವಿಷ್ಯ ಹೇಗೆ ರೂಪುಗೊಳ್ಳುತ್ತದೆ ಎಂಬುದರ ಬಗ್ಗೆ ಹೇಳಲಾಗದು ಎಂಬುದನ್ನು ಅರಿತಿರುವ ತಪಸ್ವಿನಿ, ಕಾಫಿ ವ್ಯಾಪಾರದಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ. ತಾವು ಕಾಫಿ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಅಗತ್ಯವಿದೆ ಎಂದು ನಯವಾಗಿಯೇ ಹೇಳುವ ಇವರು, ತಮ್ಮ ನಿರ್ಧಾರಕ್ಕೆ ಪೋಷಕರ ಬೆಂಬಲವಿದೆ. ತಾವು ಸ್ವಾವಲಂಬಿಯಾಗಲು ಇದು ಸಹಾಯ ಮಾಡಿದೆ ಎನ್ನುತ್ತಾರೆ.



ತಪಸ್ವಿನಿ ಪೊಣಚ್ಚ

ಇಂದಿನಿಂದ ಉಪ್ಪಿಯ 'UI' ಪ್ರಪಂಚ

ಚಂದನವನದ ಗಣ್ಯರಿಂದ ಪ್ರೀ ರಿಲೀಸ್



ಜಿ.ಮನೋಹರನ್ ಮತ್ತು ಕೆ.ಪಿ.ಶ್ರೀಕಾಂತ್ ನಿರ್ಮಿಸಿರುವ ಒಂಭತ್ತು ವರ್ಷಗಳ ಬಳಿಕ ಉಪೇಂದ್ರ ನಿರ್ದೇಶಿಸಿ, ನಟಿಸಿರುವ ಬಹು ನಿರೀಕ್ಷಿತ 'UI' ಚಿತ್ರದ ಪ್ರೀ ರಿಲೀಸ್ ಇವೆಂಟ್ ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್, ದುನಿಯಾ ವಿಜಯ್, ಡಾಲಿ ಧನಂಜಯ, ಪ್ರಿಯಾಂಕಾ ಉಪೇಂದ್ರ, ನಿರ್ಮಾಪಕರಾದ ಉದಯ್ ಕೆ ಮೆಹ್ತಾ, ರಮೇಶ್ ರೆಡ್ಡಿ, ಕಾರ್ತಿಕ್ ಗೌಡ, ಯೋಗಿ ಜಿ ರಾಜ್, ಜಗದೀಶ್, ನಿರ್ದೇಶಕರಾದ ಪವನ್ ಒಡೆಯರ್, ಡಾ.ಸೂರಿ, ವೀರೇಶ ಚಿತ್ರಮಂದಿರದ ಕುಶಾಲ್ ಮುಂತಾದ ಗಣ್ಯರು ಪ್ರೀ ರಿಲೀಸ್ ಇವೆಂಟ್‌ನಲ್ಲಿ ಭಾಗಿಯಾಗಿ 'UI' ಗೆ ಶುಭ ಕೋರಿದರು.

ನಾನು 'ಶ್' ಚಿತ್ರದ ಪ್ರೀಮಿಯರ್ ಶೋ ಅನ್ನು ಪಲ್ಲವಿ ಚಿತ್ರಮಂದಿರದಲ್ಲಿ ನೋಡಿದ್ದೆ. ಆನಂತರ 'ಓಂ' ಚಿತ್ರದ ಚಿತ್ರೀಕರಣ ಸಮಯದಲ್ಲಿ ಉಪೇಂದ್ರ ಅವರ ಕಾರ್ಯವೈಖರಿ ನೋಡಿ, ನೀವು ಭಾರತ ಚಿತ್ರರಂಗದ ಮಹಾನ್ ನಿರ್ದೇಶಕರಲ್ಲೊಬ್ಬರಾಗುತ್ತೀರಿ ಎಂದು ಹೇಳಿದ್ದೆ. ಆಗಿನಿಂದಲೂ ನನಗೆ ಉಪೇಂದ್ರ ಅವರ ಕಂಡರೆ ವಿಶೇಷ ಪ್ರೀತಿ. ನಾನು ಕೂಡ 'UI' ಚಿತ್ರವನ್ನು ನೋಡುವ ಕಾತರದಲ್ಲಿದ್ದೇನೆ ಎಂದು ಶಿವರಾಜಕುಮಾರ್ ತಿಳಿಸಿದರು.

ನಾವು ಉಪೇಂದ್ರ ಅವರ ನಿರ್ದೇಶನಕ್ಕೆ ಅಭಿಮಾನಿಗಳು. ಅವರ ಚಿತ್ರಗಳನ್ನು ನೋಡಿ ಬೆಳೆದವರು ನಾವು. ಒಂಭತ್ತು ವರ್ಷಗಳ ನಂತರ ಉಪೇಂದ್ರ ಅವರು ನಿರ್ದೇಶಿಸಿರುವ ಈ ಚಿತ್ರವನ್ನು ನೋಡಲು ಕಾಯುತ್ತಿರುವುದಾಗಿ ದುನಿಯಾ ವಿಜಯ್ ಹಾಗೂ ಡಾಲಿ ಧನಂಜಯ್ ಹೇಳಿದರು.

ಇಂದು ನಮ್ಮ ಚಿತ್ರಕ್ಕೆ ಪ್ರೋತ್ಸಾಹ ನೀಡಲು ಬಂದಿರುವ ಶಿವಣ್ಣ, ವಿಜಯ್, ಧನಂಜಯ್ ಸೇರಿದಂತೆ ಎಲ್ಲಾ ಗಣ್ಯರಿಗೆ ಧನ್ಯವಾದ ಎಂದು ಮಾತನಾಡಿದ ನಾಯಕ ಹಾಗೂ ನಿರ್ದೇಶಕ ಉಪೇಂದ್ರ, ಈ ಚಿತ್ರ ಆರಂಭವಾಗಲು ಕಾರಣ ಕೆ.ಪಿ.ಶ್ರೀಕಾಂತ್. ಐವತ್ತು ವರ್ಷಗಳ ಇತಿಹಾಸವಿರುವ ಲಹರಿ ಸಂಸ್ಥೆ ಈ ಚಿತ್ರ ನಿರ್ಮಾಣ ಮಾಡಿದ್ದು, ಮನೋಹರನ್ ಹಾಗೂ ಶ್ರೀಕಾಂತ್ ಅವರು ನಿರ್ಮಾಪಕರಾಗಿದ್ದಾರೆ. ನವೀನ್, ಲಹರಿ ವೇಲು, ನಾಗೇಂದ್ರ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. ಇದು ನನ್ನೊಬ್ಬನ ಚಿತ್ರವಲ್ಲ. ನನ್ನ ತಂಡದ ಚಿತ್ರ. ಈ ಚಿತ್ರ ಉತ್ತಮವಾಗಿ ಮೂಡಿಬರಲು ಇವರೆಲ್ಲರ ಸಹಕಾರವೇ ಕಾರಣ. ಈ ಸಮಯದಲ್ಲಿ ಚಿತ್ರತಂಡದ ಪ್ರತಿಯೊಬ್ಬರಿಗೂ ಧನ್ಯವಾದ ತಿಳಿಸುತ್ತೇನೆ. ಇದೇ ಡಿಸೆಂಬರ್ 20ರಂದು ನಮ್ಮ ಚಿತ್ರ ಬಿಡುಗಡೆಯಾಗುತ್ತಿದೆ. ಎಲ್ಲರೂ ನೋಡಿ ಎಂದರು.

ಇಂದು ಆಗಮಿಸಿರುವ ಎಲ್ಲಾ ಗಣ್ಯರಿಗೂ ಹಾಗೂ ಚಿತ್ರತಂಡದವರಿಗೆ ಧನ್ಯವಾದ. ಇದೇ ಇಪ್ಪತ್ತರಂದು ವಿಶ್ವದಾದ್ಯಂತ ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಚಿತ್ರವಾಗಿ 'UI' ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಈಗಾಗಲೇ ಮುಂಗಡ ಬುಕ್ಕಿಂಗ್ ಆರಂಭವಾಗಿದ್ದು, ಆಲ್‌ಮೋಸ್ಟ್ ಫುಲ್ ಆಗಿದೆ. ಆರಂಭದಲ್ಲೇ ನಮ್ಮ ಚಿತ್ರಕ್ಕೆ ಸಿಗುತ್ತಿರುವ ಬೆಂಬಲಕ್ಕೆ ಮನ ತುಂಬಿ ಬಂದಿದೆ ಎಂದರು ನಿರ್ಮಾಪಕ ಕೆ.ಪಿ.ಶ್ರೀಕಾಂತ್ ಹಾಗೂ ಸಹ ನಿರ್ಮಾಪಕ ನವೀನ್.

ಚಿತ್ರದ ನಾಯಕಿ ರೀಷ್ಮಾ ನಾಣಯ್ಯ, ಕಲಾವಿದರಾದ ರವಿಶಂಕರ್, ಕಾಕ್ರೋಜ್ ಸುಧೀ, ನಿಧಿ ಸುಬ್ಬಯ್ಯ, ನೀತು, ಕಾರ್ಯಕಾರಿ ನಿರ್ಮಾಪಕ ಲಹರಿ ವೇಲು ಹಾಗೂ ವಿತರಕರಾದ ಕೆ.ವಿ.ಎನ್ ಸಂಸ್ಥೆಯ ಸುಪ್ರೀತ್ ಮುಂತಾದವರು 'UI' ಕುರಿತು ಮಾತನಾಡಿದರು.



ಅಂಬೇಡ್ಕರ್ ಕುರಿತು ಅವಹೇಳನಕಾರಿ ಹೇಳಿಕೆ

ಅಮಿತ್ ಶಾ ವಿರುದ್ಧ ತಿ.ನರಸೀಪುರ, ಹುಣಸೂರಲ್ಲಿ ಪ್ರತಿಭಟನೆ



ಅಂಬೇಡ್ಕರ್ ಕುರಿತು ಅಮಿತ್ ಶಾ ನೀಡಿದ ಹೇಳಿಕೆ ಖಂಡಿಸಿ ತಿ.ನರಸೀಪುರ, ಹುಣಸೂರಲ್ಲಿ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ/ಹುಣಸೂರು, ಡಿ.19– ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆ ಖಂಡಿಸಿ ತಿ.ನರಸೀಪುರ ಹಾಗೂ ಹುಣಸೂರಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ತಿ.ನರಸೀಪುರ: ಅಂಬೇಡ್ಕರ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಅಮಿತ್ ಶಾ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ, ಗಡಿಪಾರು ಮಾಡುವಂತೆ ಒತ್ತಾಯಿಸಿ ತಾಲೂಕು ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಮಿನಿವಿಧಾನಸೌಧ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ದಸಂಸ ಜಿಲ್ಲಾ ಸಂಚಾಲಕ ಕೆಂಪಯ್ಯಹುಂಡಿ ಆರ್.ರಾಜು ಮಾತನಾಡಿ, ರಾಜ್ಯಸಭೆಯಲ್ಲಿ ಸಂವಿಧಾನ ಮೇಲಿನ ಚರ್ಚೆ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಅವರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ದಸಂಸ ತೀವ್ರವಾಗಿ ಖಂಡಿಸುತ್ತದೆ. ಹೀಗಾಗಿ ಅಮಿತ್ ಶಾ ಅವರ ಸಂಸತ್ ಸದಸ್ಯತ್ವ ರದ್ದಾಗಬೇಕು. ಅವರು ಯಾವುದೇ ಸಂವಿಧಾನಿಕ ಹುದ್ದೆಯಲ್ಲಿ ಮುಂದುವರೆಯಬಾರದು ಮತ್ತು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕನ್ನಾಂಬುಕನಹಳ್ಳಿ ಮರಿಸ್ವಾಮಿ, ಮನೋಜ್ ಕುಮಾರ್, ನಿಲಸೋಗೆ ಕುಮಾರ್, ಸೋಮನಾಥಪುರ ಗೋವಿಂದರಾಜು, ತೊಟ್ಟವಾಡಿ ರಾಜಪ್ಪ, ಕೊಳತ್ತೂರು ಪ್ರಭಾಕರ್, ಪರಶುರಾಮ್, ಸೋಸಲೆ ಶಿವಕುಮಾರ್, ಕೇಶವಮೂರ್ತಿ, ಉಕ್ಕಲಗೆರೆ ಮಹದೇವಸ್ವಾಮಿ, ರವಿಕಾಂತ್, ಶಿವರಾಜು ಮತ್ತಿತರರಿದ್ದರು.

ಹುಣಸೂರು: ರಾಜ್ಯಸಭೆಯಲ್ಲಿ ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ನಡೆ ಖಂಡಿಸಿ ದಲಿತ ಸಂಘರ್ಷ ಸಮಿತಿ (ಡಾ.ಡಿ.ಜಿ.ಸಾಗರ್ ಬಣ) ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಅಮಿತ್ ಶಾಗೆ ಧಿಕ್ಕಾರ, ಅಂಬೇಡ್ಕರ್ ವಿರೋಧಿ ಅಮಿತ್ ಶಾಗೆ ಧಿಕ್ಕಾರ, ಅಂಬೇಡ್ಕರ್ ಅವರನ್ನು ಅಪಮಾನಗೊಳಿಸಿದ ಅಮಿತ್ ಶಾ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬ ಘೋಷಣೆ ಕೂಗಿ ಅಮಿತ್ ಶಾ ಭಾವಚಿತ್ರ ದಹಿಸಿ ಪ್ರತಿಭಟನೆ ನಡೆಸಿದರು.

ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ ಮಾತನಾಡಿ, ದೇಶದ ಆತ್ಮಸಾಕ್ಷಿಯಂತಿರುವ ಸಂಸತ್ತಿನಲ್ಲೇ ಗೃಹ ಸಚಿವ ಅಮಿತ್ ಶಾ ಸಂವಿಧಾನ ಕರ್ತೃ ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಸರಿಯಲ್ಲ. ಸಂವಿಧಾನ ಇಲ್ಲದಿದ್ದರೆ ನಮ್ಮ ಪ್ರಧಾನಿ ಎಲ್ಲೋ ಚಹಾ ಮಾರಬೇಕಾಗಿತ್ತು. ಗೃಹ ಮಂತ್ರಿ ವ್ಯಾಪಾರ ಮಾಡಿ ಬದುಕು ನಡೆಸಬೇಕಿತ್ತು. ಆದರೆ ಇವರು ದೇಶದ ಅತ್ಯುನ್ನತ ಸ್ಥಾನದಲ್ಲಿರಲು ಅಂಬೇಡ್ಕರ್ ನೀಡಿದ ಸಂವಿಧಾನವೇ ಕಾರಣ ಎಂದರು. ಅಮಿತ್ ಶಾ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ದಸಂಸ ಮುಖಂಡ ಮಂಜು, ವಾಸು, ದಸಂಸ ನಗರ ಸಂಚಾಲಕ ರಂಗನಾಥ್, ಹಿರಿಯ ದಲಿತ ಮುಖಂಡರಾದ ರಾಜಪ್ಪ, ಕೆಇಬಿ ನಿವೃತ್ತ ನೌಕರರಾದ ಸಿ.ಪುಟ್ಟಮಲ್ಲು, ವೀರಭದ್ರಯ್ಯ, ಜೆ.ಮಹಾದೇವ ಇದ್ದರು.

ವರುಣದಲ್ಲೂ ಪ್ರತಿಭಟನೆ



ಅಂಬೇಡ್ಕರ್ ಬಗ್ಗೆ ಕೇಂದ್ರ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ವರುಣ ಗ್ರಾಮದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮುಖಂಡರಾದ ಮಣಿ, ರವಿ, ಚಿಕ್ಕದೇವಯ್ಯ, ರಾಜು, ಮಹಾದೇವ್, ಸಿದ್ದಯ್ಯ, ಗುರುಪ್ರಸಾದ್, ಸೋಮಣ್ಣ, ರಾಮು, ಅಣ್ಣಯ್ಯ, ಪುಟ್ಟರಾಮು, ಶಾಂತರಾಜು ಇನ್ನಿತರರಿದ್ದರು.

ನಂ.ಗೂಡು: ಸಾರ್ವಜನಿಕ, ತಾಯಿ–ಮಕ್ಕಳ ಆಸ್ಪತ್ರೆ ಮೇಲ್ದರ್ಜೆಗೇರಿಸಲು ಕ್ರಮ

ನಂಜನಗೂಡು, ಡಿ.19– ನಗರದ ಸಾರ್ವಜನಿಕ, ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಿಗೆ ಮೂಲಸೌಕರ್ಯ ಕಲ್ಪಿಸಿ ಮೇಲ್ದರ್ಜೆಗೇರಿಸುವಂತೆ ಸದನದಲ್ಲಿ ಚರ್ಚಿಸಲಾಗಿದ್ದು, ಶೀಘ್ರ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.



ದರ್ಶನ್

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ನಂಜನಗೂಡು ಕ್ಷೇತ್ರವಲ್ಲದೇ ಸಿಎಂ ಸಿದ್ದರಾಮಯ್ಯನವರ ವರುಣ ಕ್ಷೇತ್ರವೂ ಸೇರಿ 2.5 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ತಜ್ಞರು ಮತ್ತು ವೈದ್ಯಕೀಯ ಸಿಬ್ಬಂದಿ ಕೊರತೆ ಇರುವ ಕಾರಣ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಶೀಘ್ರ ತಜ್ಞ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ನೇಮಕಗೊಳಿಸಿ, ಅಗತ್ಯ ಮೂಲ ಸೌಕರ್ಯ ಒದಗಿಸುವಂತೆ ಸದನದಲ್ಲಿ ಗಮನ ಸೆಳೆಯಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಸಚಿವರು ರಾಷ್ಟ್ರೀಯ ಆರೋಗ್ಯ ಮಿಷನ್ ಮಾರ್ಗಸೂಚಿಯಂತೆ ಯಾವ ಆಸ್ಪತ್ರೆಗಳಲ್ಲಿ ಹೆಚ್ಚು ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬುದನ್ನು ಸರ್ವೇ ನಡೆಸಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಅತೀ ಶೀಘ್ರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಗೆ ವೈದ್ಯರನ್ನು ನೇಮಕಗೊಳಿಸಿ ಅಗತ್ಯ ಮೂಲಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ರವಾಸೋದ್ಯಮ ಕೇಂದ್ರವನ್ನಾಗಿಸಲು ಕ್ರಮ: ತಾಲೂಕಿನ ಬದನವಾಳು ಗ್ರಾಮ ಸ್ವಾತಂತ್ರ್ಯ ಹೋರಾಟದ ಇತಿಹಾಸವುಳ್ಳ ಗ್ರಾಮವಾಗಿದ್ದು, ರಾಷ್ಟ್ರಪಿತ ಮಹಾತ್ಮ ಗಾಂಧಿಯವರು 1929 ರಲ್ಲಿ ಬದನವಾಳು ಗ್ರಾಮದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರ ಸ್ಥಾಪಿಸಿದ್ದಾರೆ. ಈ ಕೇಂದ್ರವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸುವುದಾಗಿ ಕಳೆದ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ. ಈಗಾಗಲೇ ಈ ಬಗ್ಗೆ ಅನುಷ್ಠಾನ ಸಮಿತಿ ರಚನೆ ಮಾಡಿ ವರದಿ ಸಲ್ಲಿಸಲಾಗಿದೆ. ಆದ್ದರಿಂದ ಅತಿ ಹೆಚ್ಚು ಅನುದಾನ ಬಿಡುಗಡೆಗೊಳಿಸಿ ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸುವಂತೆ ಬೆಳಗಾವಿಯಲ್ಲಿ ನಡೆದ ಸದನದಲ್ಲಿ ಮನವಿ ಮಾಡಿದ್ದೇನೆ. ನನ್ನ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕಖರ್ಗೆ ಅವರು ಮುಖ್ಯಮಂತ್ರಿಗಳ ಪರವಾಗಿ ಉತ್ತರ ನೀಡಿ ಅತೀ ಹೆಚ್ಚು ಅನುದಾನ ನೀಡಿ ಬದನವಾಳು ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರವನ್ನು ಅಭಿವೃದ್ಧಿಗೊಳಿಸಿ ಮುಂದಿನ ವರ್ಷದೊಳಗೆ ಉತ್ತಮ ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸುವ ಭರವಸೆ ನೀಡಿದ್ದಾರೆ ಎಂದರು.

ಸರಗೂರಲ್ಲಿ ವಿಶ್ವ ಏಡ್ಸ್ ದಿನಾಚರಣೆ



ಕಾರ್ಯಕ್ರಮದಲ್ಲಿ ಸಾಮಾನ್ಯ ಚಿಕಿತ್ಸಾ ತಜ್ಞ ಡಾ.ನಾಗೇಶ್ ಮಾತನಾಡಿದರು.

ಸರಗೂರು, ಡಿ.19– ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ವಿಶ್ವ ಏಡ್ಸ್ ದಿನಾಚರಣೆ ಪ್ರಯುಕ್ತ ಹೆಚ್‌ಐವಿ ಮತ್ತು ಏಡ್ಸ್ ಕುರಿತು ಜನಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆಸ್ಪತ್ರೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಶಂಕರ್ ಮಾತನಾಡಿ, ಈ ವರ್ಷದ ಘೋಷವಾಕ್ಯದಂತೆ ವಿಶ್ವ ಆರೋಗ್ಯ ಸಂಸ್ಥೆ ಪ್ರಸ್ತುತಪಡಿಸಿರುವ ಗುರಿ ಬಗ್ಗೆ ವಿವರಿಸುತ್ತಾ ಕನಿಷ್ಠ ಶೇ.95 ರಷ್ಟು ಮಂದಿ ಕಾಯಿಲೆ ಬಗ್ಗೆ ಅರಿವು ಪಡೆದುಕೊಳ್ಳಬೇಕು. ಅಲ್ಲದೇ ಸೋಂಕಿತರು ಚಿಕಿತ್ಸೆ ಪಡೆದುಕೊಳ್ಳಬೇಕು. ಬಳಿಕ ಅವರಲ್ಲಿ ವೈರಸ್ ಪ್ರಮಾಣ ತಗ್ಗಬೇಕು ಎಂದರು.

ಜಿಲ್ಲಾ ಕ್ಷಯರೋಗ ಮತ್ತು ಏಡ್ಸ್ ನಿಯಂತ್ರಣಾಧಿಕಾರಿ ಡಾ.ಎಂ.ಎಸ್ ಜಯಂತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಹೆಚ್‌ಐವಿ ಏಡ್ಸ್ ನಿಯಂತ್ರಣಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, 2023–24ರ ಅಂಕಿ ಅಂಶಗಳನ್ನು ಗಮನಿಸಿದಾಗ ಹೆಚ್‌ಐವಿ ಏಡ್ಸ್ ಸೋಂಕಿಗೆ ತುತ್ತಾಗುವವರ ಸಂಖ್ಯೆ ಇಳಿಮುಖಗೊಂಡಿದೆ. ಇದು ಪ್ರತಿಯೊಬ್ಬರ ಸಹಕಾರ ಮತ್ತು ಆರೋಗ್ಯ ಕಾರ್ಯಕರ್ತರಿಂದ ಸಾಧ್ಯವಾಗುತ್ತಿದ್ದು, ಜೊತೆಗೆ ಪ್ರತಿಯೊಬ್ಬ ನಾಗರಿಕರು ಜಾಗೃತರಾಗಿ ಇದರ ನಿಯಂತ್ರಣಕ್ಕೆ ಕೈಜೋಡಿಸಿದರೆ ಹೆಚ್‌ಐವಿ ಹರಡುವಿಕೆಯನ್ನು ಶೂನ್ಯಕ್ಕೆ ತರಲು ಸಾಧ್ಯ ಎಂದರು.

ಸಾಮಾನ್ಯ ಚಿಕಿತ್ಸಾ ತಜ್ಞ ಡಾ.ನಾಗೇಶ್ ಮಾತನಾಡಿ, ಪ್ರತಿಯೊಬ್ಬರೂ ಸಾಮಾನ್ಯ ಆರೋಗ್ಯ ತಪಾಸಣೆ ಜೊತೆಗೆ ಹೆಚ್‌ಐವಿ ಸೋಂಕು ಇದೆ ಅಥವಾ ಇಲ್ಲವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಒಂದು ವೇಳೆ ಕಾಯಿಲೆಗೆ ತುತ್ತಾದಲ್ಲಿ ಯಾರೂ ಭಯಪಡಬೇಕಿಲ್ಲ. ಇದಕ್ಕೆ ಸೂಕ್ತ ಚಿಕಿತ್ಸೆ ಮತ್ತು ಆಪ್ತಸಲಹೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಲಭ್ಯವಿರುತ್ತದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಡಾ.ಮೆರೆನ್ ರೋಸ್, ಮಕ್ಕಳ ತಜ್ಞ ಡಾ. ಅರುಣ್ ಕುಮಾರ್, ಆಸ್ಪತ್ರೆ ವ್ಯವಸ್ಥಾಪಕಿ ಸಂಧ್ಯಾ, ಆಯುರ್ವೇದ ಹಿರಿಯ ತಜ್ಞ ಡಾ.ಪ್ರಶಾಂತ್ ಎಸ್.ಬಿಂಜಾಲ್ ಬಾವಿ, ಕಣ್ಣಿನ ತಜ್ಞ ಡಾ.ನರೇಂದ್ರ ರಾಮಕೃಷ್ಣ, ಡಾ.ಅಭಿಷೇಕ್, ಸಿಬ್ಬಂದಿಗಳಾದ ವೆಂಕಟಸ್ವಾಮಿ, ರೂಪೇಶ್, ನಾಗರತ್ನ, ಯೋಗೇಶ್ವರಿ, ಮಮತ, ಸಂಗೀತ, ಸುಧಾರಾಣಿ, ವರ್ಷಿತ, ನಿಂಗರಾಜು, ರಮೇಶ್ ಎಂ.ಪಿ, ಗೋಪಾಲಕೃಷ್ಣ, ನವೀನ್ ಕುಮಾರ್, ಅಭಿನಂದನ್, ಪ್ರಮೋದ್, ಲತಾ, ಪ್ರಕಾಶ್, ಕೀರ್ತನ ಆಸ್ಪತ್ರೆ ಸಿಬ್ಬಂದಿ ವರ್ಗ ಹಾಗೂ ಸಾರ್ವಜನಿಕರು ಭಾಗಿಯಾಗಿದ್ದರು.

ಸಮರಸತಾ ರಥಯಾತ್ರೆಗೆ ಸ್ವಾಗತ



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಬಳಿ ಆಗಮಿಸಿದ ವಿಶ್ವ ಹಿಂದೂ ಪರಿಷತ್ ಸಮರಸತಾ ರಥ ಯಾತ್ರೆಯನ್ನು ಯುವ ಬ್ರಿಗೇಡ್ ಸಂಘಟಕ ಚಂದ್ರಶೇಖರ್, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ ಸ್ವಾಗತಿಸಿದರು.

ನಿರ್ಗತಿಕರಿಗೆ ನಿವೇಶನ ನೀಡುವ ಬಗ್ಗೆ ಡಿಸಿಗೆ ತಪ್ಪು ಮಾಹಿತಿ ನೀಡಿದ ಆರೋಪ

ಸಾಲಿಗ್ರಾಮ ತಹಸೀಲ್ದಾರ್ ವಿರುದ್ಧ ಪ್ರತಿಭಟನೆ



ತಹಸೀಲ್ದಾರ್ ವಿರುದ್ಧ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಲಾಯಿತು.

ಸಾಲಿಗ್ರಾಮ, ಡಿ.19– ನಿರ್ಗತಿಕರಿಗೆ ನಿವೇಶನ ನೀಡುವುದನ್ನು ತಪ್ಪಿಸಲು ತಹಸೀಲ್ದಾರ್ ಅವರು ಜಿಲ್ಲಾಧಿಕಾರಿಗಳಿಗೆ ಸಮರ್ಪಕ ಮಾಹಿತಿ ನೀಡದೇ ತಪ್ಪು ಮಾಹಿತಿ ಮಾಡಿದ್ದಾರೆ ಎಂದು ಆರೋಪಿಸಿ ದಸಂಸ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಇಲ್ಲಿನ ತಾಲೂಕು ಕಚೇರಿ ಎದುರು ಜವಾಯಿಸಿದ ಪ್ರತಿಭಟನಾಕಾರರು, ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ರಾಜ್ಯ ಸಮಿತಿ ಸಂಚಾಲಕ ಲಿಂಗರಾಜ ಮಲ್ಲಾಡಿ ಮಾತನಾಡಿ, ಚುಂಚನಕಟ್ಟೆಯಲ್ಲಿ ಕಳೆದ 40 ವರ್ಷಗಳಿಂದ ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದು, ನಿರ್ಗತಿಕ ಕುಟುಂಬಗಳಿಗೆ ನಿವೇಶನ ನೀಡುವುದನ್ನು ತಪ್ಪಿಸುವ ಉದ್ದೇಶದಿಂದ ಸಾಲಿಗ್ರಾಮ ತಹಸೀಲ್ದಾರ್ ನರಗುಂದ ಅವರು ಜಿಲ್ಲಾಧಿಕಾರಿಗೆ ಸಮರ್ಪಕ ಮಾಹಿತಿ ನೀಡದೆ ತಪ್ಪು ಮಾಹಿತಿ ಮಾಡಿದ್ದಾರೆ ಎಂದು ಆರೋಪಿಸಿದರು.

ನಿರ್ಗತಿಕರಿಗೆ ನಿವೇಶನ ನೀಡುವಂತೆ 94ಸಿ ಯೋಜನೆಯಡಿ ಹಲವು ಬಾರಿ ಅರ್ಜಿ ಸಲ್ಲಿಸುವ ಜೊತೆಗೆ ಉಪ ವಿಭಾಗಾಧಿಕಾರಿಗಳನ್ನು ಸ್ಥಳಕ್ಕೆ ಬರುವಂತೆ ಮನವಿ ಮಾಡಿ ನಿರ್ಗತಿಕರ ವಾಸದ ಸ್ಥಳಕ್ಕೆ ಕರೆತಂದು, ಜನರು ಅನುಭವಿಸುತ್ತಿರುವ ಕಷ್ಟಗಳನ್ನು ತೋರಿಸಿದಾಗ ಅಂದು ಹುಣಸೂರು ಉಪವಿಭಾಗಾಧಿಕಾರಿಯವರು ನಿವೇಶನ ಕೊಡುವ ಭರವಸೆ ಕೊಟ್ಟಿದ್ದರು. ಆದರೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ನಿರ್ಗತಿಕ ಕುಟುಂಬಗಳ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಲ್ಲಿ ಹಿರಿಯ ಅಧಿಕಾರಿಗಳು ಮುಂದಾದರೂ ಸಾಲಿಗ್ರಾಮ ತಹಸೀಲ್ದಾರ್ ಅವರು ನೀಡಿರುವ ಉದಾಸೀನತೆಯಿಂದ 85ಕ್ಕೂ ಹೆಚ್ಚು ಕುಟುಂಬಗಳಿಗೆ ಅನ್ಯಾಯವಾಗುತ್ತಿದೆ. ಕುಟುಂಬಗಳಿಗೆ ನಿವೇಶನ ಸಿಗದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ನೀಡಿದರು.

ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರು ಸಮಸ್ಯೆ ಬಗೆಹರಿಸುವಂತೆ ಅರ್ಜಿ ಹಿಡಿದು ತಾಲೂಕು ಕಚೇರಿಗೆ ಬಂದರೆ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ರುದ್ರಭೂಮಿ ಇಲ್ಲದೇ ಹಲವು ಗ್ರಾಮಗಳ ಜನರು ಅಂತ್ಯಕ್ರಿಯೆಯನ್ನು ಕಾಲುವೆ ಮತ್ತು ಕೆರೆಯಲ್ಲಿ ಮಾಡುವ ಸ್ಥಿತಿ ಉಂಟಾದರೂ ತಾಲೂಕು ಆಡಳಿತ ಸಮಸ್ಯೆ ಬಗೆಹರಿಸಲು ಮುಂದಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎಸ್‌ಸಿ, ಎಸ್‌ಟಿ ಜಾಗೃತ ಸಮಿತಿ ಜಿಲ್ಲಾ ಸಂಚಾಲಕ ದಿವಾಕರ್, ಚಂದ್ರು, ಗ್ರಾಪಂ ಸದಸ್ಯ ಲೋಕೇಶ್, ಸಿಡಿಸಿ ಸದಸ್ಯ ಸಂತೋಷ್, ಮಂಜು, ಡಿ.ದೇವರಾಜ್, ಸುಧಾಕರ್, ಬಸವರಾಜು ಮತ್ತು ಚುಂಚನಕಟ್ಟೆ ಅಲೆಮಾರಿ ಸಮಾಜದ ಮುಖಂಡರು ಭಾಗವಹಿಸಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಹುಣಸೂರು, ಡಿ.19– ಗಾವಡಗೆರೆ ಹಾಗೂ ಹನಗೋಡು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಡಿ.21ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತಾಲೂಕಿನ ಹನಗೋಡು, ಹೆಗ್ಗಂದೂರು, ಕಾಮಗೌಡನಹಳ್ಳಿ, ದಾಸನಪುರ, ಹಿಂದುಗುಡ್ಲು, ಕೋಣನಹೊಸಹಳ್ಳಿ, ನೇರಳಕುಪ್ಪೆ, ಬಿಲ್ಲೇನಹೊಸಹಳ್ಳಿ, ಶೆಟ್ಟಿಹಳ್ಳಿ, ಕಡೇಮನುಗನಹಳ್ಳಿ, ಹೆಬ್ಬಾಳ, ಬಿ.ಆರ್.ಕಾವಲು, ಕರ್ಣಕುಪ್ಪೆ, ಕಣಗಾಲು, ಹೆಮ್ಮಿಗೆ, ಕಚುವಿನಹಳ್ಳಿ, ಕಾಳಬೂಚನಹಳ್ಳಿ, ಅಟ್ಟೂರು, ಶಿಂಡೇನಹಳ್ಳಿ, ಗಾವಡಗೆರೆ, ಚಿಕ್ಕಾಡಿಗನಹಳ್ಳಿ, ಮಾರಗೌಡನಹಳ್ಳಿ, ಹಿರಿಕ್ಯಾತನಹಳ್ಳಿ, ಶಿರೇನಹಳ್ಳಿ, ಮೋದೂರು, ಚಿಟ್ಟಿಕ್ಯಾತನಹಳ್ಳಿ, ಹರವೆ, ರಾಮನಹಳ್ಳಿ, ವೈಲಾಂಬೂರು, ಬಿಳಿಕೆರೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸದೃಢ ದೇಹ, ಮನಸ್ಸಿಗೆ ಕ್ರೀಡೆ ಅವಶ್ಯಕ

ಕ್ಷೇತ್ರ ದೈಹಿಕ ಶಿಕ್ಷಣ ಸಂಯೋಜಕ ಎಸ್.ನಾಗೇಂದ್ರ



ಕ್ರೀಡಾಕೂಟವನ್ನು ಕ್ಷೇತ್ರ ದೈಹಿಕ ಸಂಯೋಜಕ ಎಸ್.ನಾಗೇಂದ್ರ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಡಿ.19– ಸದೃಢ ದೇಹ ಮತ್ತು ಮನಸ್ಸು ಹೊಂದಲು ಕ್ರೀಡೆ ಅವಶ್ಯಕ ಎಂದು ಕ್ಷೇತ್ರ ದೈಹಿಕ ಶಿಕ್ಷಣ ಸಂಯೋಜಕ ಎಸ್.ನಾಗೇಂದ್ರ ತಿಳಿಸಿದರು.

ಪಟ್ಟಣದ ಆದಿ ಚುಂಚನಗಿರಿ ಶಿಕ್ಷಣ ಸಂಸ್ಥೆಯ ಪ್ರಾಥಮಿಕ ಮತ್ತು ಆಂಗ್ಲ ಪ್ರೌಢಶಾಲಾ ವಿದ್ಯಾರ್ಥಿಗಳ ಪೋಷಕರಿಗೆ ಆಯೋಜಿಸಿದ್ದ ಕ್ರೀಡಾ ಕೂಟ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಕ್ರೀಡೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಉದ್ಯೋಗಾವಕಾಶವೂ ಸಹ ಕ್ರೀಡಾ ಕ್ಷೇತ್ರದಲ್ಲಿರುವವರಿಗೆ ದೊರೆಯುತ್ತಿದೆ ಎಂದರು.

ದೇಶದ ಅನೇಕ ಕ್ರೀಡಾಪಟುಗಳು ಒಲಿಂಪಿಕ್ಸ್ ಸೇರಿದಂತೆ ಅನೇಕ ಪ್ರತಿಷ್ಠಿತ ಕ್ರೀಡೆಗಳಲ್ಲಿ ಉನ್ನತ ಸಾಧನೆ ಮಾಡುತ್ತಿದ್ದಾರೆ. ಅಂತಹವರ ಸಾಲಿನಲ್ಲಿ ನಮ್ಮ ಕ್ರೀಡಾಪಟುಗಳು ಇರಬೇಕು ಎಂದು ಆಶಾಭಾವನೆ ವ್ಯಕ್ತಪಡಿಸಿದರು. ಕೇವಲ ಬೆಟ್ಟಿಂಗ್‌ಗಾಗಿ ಕ್ರೀಡೆ ಆಡದೇ, ದೇಶಕ್ಕಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು ಎಂದರು. ಇದೇ ವೇಳೆ ವಿವಿಧ ಆಟೋಟಗಳಲ್ಲಿ ಜಯ ಗಳಿಸಿದ ಪೋಷಕರಿಗೆ ಬಹುಮಾನ ವಿತರಿಸಲಾಯಿತು.

ಪ್ರಾಂಶುಪಾಲರಾದ ಡಾ.ಜೆಎನ್. ವೆಂಕಟೇಶ್, ಭೈರೇಗೌಡ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಬಿ.ಸತೀಶ್ ಆರಾಧ್ಯ, ಮುಖ್ಯ ಶಿಕ್ಷಕರಾದ ಎ.ಸಿ.ಭೈರಪ್ಪ, ನಂದಿನಿ, ದೈಹಿಕ ಶಿಕ್ಷಕರಾದ ಲೋಕೇಶ್, ರಾಜೇಗೌಡ, ಶಿವಕುಮಾರ್, ಕೈಸರ್ ಪಾಷ, ಶಿಲ್ಪಶ್ರೀ, ಪಾರ್ವತಿ, ಸಂತೋಷ್ ಕುಮಾರ್, ಸೋಮಶೇಖರ್, ಅಂಕಪ್ಪ, ರಮೇಶ್, ಚೈತ್ರ, ಪೋಷಕರು ಭಾಗವಹಿಸಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು



ಕೆ.ಆರ್.ನಗರ, ಡಿ.19– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ಗುರುವಾರ ತಾಲೂಕಿನ ಬಡಕನಕೊಪ್ಪಲು ಗ್ರಾಮದ ಬಳಿ ನಡೆದಿದೆ.

ಭೇರ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಯೋಗಾಲಯ ತಾಂತ್ರಿಕ ಅಧಿಕಾರಿ ಡಿ.ಎಸ್.ಪ್ರಕಾಶ್ (58) ಸಾವನ್ನಪ್ಪಿದವರು. ಈತ ಎಂದಿನಂತೆ ಸಂಜೆ ಕೆಲಸ ಮುಗಿಸಿಕೊಂಡು ತಮ್ಮ ಹೊಂಡಾ ಶೈನ್ ಬೈಕ್‌ನಲ್ಲಿ ಕೆ.ಆರ್.ನಗರಕ್ಕೆ ತೆರಳುತ್ತಿದ್ದ ವೇಳೆ ಹಾಸನ– ಮೈಸೂರು ಹೆದ್ದಾರಿಯ ಬಡಕನಕೊಪ್ಪಲು ಗ್ರಾಮದ ಬಳಿ ಎದುರಿನಿಂದ ಅತಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ತೀವ್ರ ಗಾಯಗೊಂಡ ಅವರನ್ನು ಕೆ.ಆರ್.ನಗರ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಬಳಿಕ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಮಿತ್ ಶಾ ಹೇಳಿಕೆ ತಿರುಚಿ 'ಕೈ' ಗೊಂದಲ ಸೃಷ್ಟಿ

ಬಿಜೆಪಿ ಜಿಲ್ಲಾ ಗ್ರಾಮಾಂತರ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಸುಂದರೇಶನ್ ಆರೋಪ

ನಂಜನಗೂಡು, ಡಿ.19– ಕಾಂಗ್ರೆಸ್ ಪಕ್ಷ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಾತುಗಳನ್ನು ತಿರುಚಿ ಸಾಮಾಜಿಕ ಮಾಧ್ಯಮಗಳ ಮೂಲಕ ಜನರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸಿ ಅಂಬೇಡ್ಕರ್ ಅವರ ಹೆಸರನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ಜಿಲ್ಲಾ ಗ್ರಾಮಾಂತರ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಸುಂದರೇಶನ್ ಆರೋಪಿಸಿದರು.



ಕಾಂಗ್ರೆಸ್ ವಿರುದ್ಧ ಯುವ ಮೋರ್ಚಾ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಬಿಜೆಪಿ ಕಚೇರಿ ಎದುರು ಯುವ ಮೋರ್ಚಾ ಪದಾಧಿಕಾರಿಗಳು ಹಮ್ಮಿಕೊಂಡಿದ್ದ ದಿಢೀರ್ ಪ್ರತಿಭಟನೆಯಲ್ಲಿ ಭಾಗವಹಿಸಿ ನಂತರ ಮಾತನಾಡಿದ ಅವರು, ಕಾಂಗ್ರೆಸ್ ಅಂಬೇಡ್ಕರ್ ಅವರನ್ನು 2 ಬಾರಿ ಚುನಾವಣೆಯಲ್ಲಿ ಸೋಲಿಸಿ ಅವಮಾನಿಸಿತು. ಅಲ್ಲದೇ ಅವರನ್ನು ಸಂವಿಧಾನ ಸಭೆಗೆ ಪ್ರವೇಶಿಸಿದಂತೆ ಸಂಚು ಮಾಡಿ ತಡೆದರು. ಜೊತೆಗೆ ಇಂದಿರಾ ಗಾಂಧಿ ಸರ್ಕಾರವು 42ನೇ ತಿದ್ದುಪಡಿ ಮೂಲಕ ಸಂವಿಧಾನ ಪೀಠಿಕೆ ಮತ್ತು ರಚನೆ ಬದಲಾಯಿಸಿತು. ಇಷ್ಟು ಸಾಲದು ಎಂಬಂತೆ ಅವರನ್ನು ಚುನಾವಣೆಯಲ್ಲಿ ಸೋಲಿಸಿದ ವ್ಯಕ್ತಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಅವರ ಮರಣ ನಂತರ ದೆಹಲಿಯಲ್ಲಿ ಅವರ ಸಮಾಧಿಗೆ ಜಾಗ ನೀಡಲಿಲ್ಲ. ಹೀಗೆ ಹೆಜ್ಜೆ ಹೆಜ್ಜೆಗೂ ಅಂಬೇಡ್ಕರ್ ಅವರನ್ನು ಅವಮಾನಿಸಿ ಜೀವನದ ಉದ್ದಕ್ಕೂ ಕಣ್ಣೀರು ತರಿಸಿದ ಕಾಂಗ್ರೆಸ್ ಪಕ್ಷ ಇಂದು ಅವರನ್ನು ರಾಜಕೀಯ ಉದ್ದೇಶಕ್ಕಾಗಿ ಮತ್ತು ಚುನಾವಣೆಗಳಿಗಾಗಿ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಬಿಜೆಪಿ ಪಕ್ಷ ವಿ.ಪಿ.ಸಿಂಗ್ ಸರ್ಕಾರದಲ್ಲಿ ಅಂಬೇಡ್ಕರ್ ಅವರಿಗೆ ಮರಣ ನಂತರ ಭಾರತ ರತ್ನ ಪ್ರಶಸ್ತಿ ನೀಡಿದ್ದಲ್ಲದೆ, ಪ್ರಧಾನಿ ಮೋದಿ ಅವರು ಅವರ ಗೌರವಾರ್ಥ ಪಂಚತೀರ್ಥವನ್ನು ಅಭಿವೃದ್ಧಿಪಡಿಸಿ ಸಂವಿಧಾನ ಪುಸ್ತಕವನ್ನು ಆನೆ ಮೇಲೆ ಮೆರವಣಿಗೆ ಮಾಡುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದರು. ಅಮಿತ್ ಶಾ ಹೇಳಿಕೆ ತಿರುಚಿ ಅವರ ಮೇಲೆ ಸುಳ್ಳು ಪ್ರಚಾರ ಮಾಡುವ ಮೂಲಕ ಜನರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸುತ್ತಿರುವ ಕಾಂಗ್ರೆಸ್ ವರಿಷ್ಠರು ರಾಷ್ಟ್ರದ ಜನತೆ ಕ್ಷಮೆಯಾಚಿಸಬೇಕು ಇಲ್ಲದಿದ್ದಲ್ಲಿ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಬಿಜೆಪಿ ನಗರಧ್ಯಕ್ಷ ಸಿದ್ದರಾಜು ಮಾತನಾಡಿ, ಕಾಂಗ್ರೆಸ್ ಲೋಕಸಭೆಯಲ್ಲಿ ಗೊಂದಲ ಸೃಷ್ಟಿಸಿ ಬಿಜೆಪಿ ಸಂಸದರ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ಅಮಿತ್ ಶಾ ಹೇಳಿಕೆ ತಿರುಚಿರುವ ಕಾಂಗ್ರೆಸ್ ಪಕ್ಷಕ್ಕೆ ಅವರ ವಿರುದ್ಧ ಮಾತನಾಡುವ ನೈತಿಕ ಹಕ್ಕಿಲ್ಲ. ಕಾಂಗ್ರೆಸ್ ಮುಖಂಡರು ಫೋಟೋ ತೆಗೆಸುವ ವೇಳೆ ಅಂಬೇಡ್ಕರ್ ಭಾವಚಿತ್ರವನ್ನು ಕೆಳಗೆ ಇಟ್ಟು ಅಂಬೇಡ್ಕರ್ ಅವರಿಗೆ ಹೇಗೆ ಮರ್ಯಾದೆ ನೀಡಿದೆ ಎಂಬುದಕ್ಕೆ ಈ ಚಿತ್ರಪಟವೇ ಸಾಕ್ಷಿ ಎಂದು ಚಿತ್ರಪಟವನ್ನು ಪ್ರದರ್ಶನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಪಕ್ಷದ ತಾಲೂಕು ಯುವ ಮೋರ್ಚಾ ಅಧ್ಯಕ್ಷ ಸಿದ್ದರಾಜು, ತಾಲೂಕು ನಗರ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ನಗರ ಎಸ್.ಸಿ.ಮೋರ್ಚಾ ಅಧ್ಯಕ್ಷ ಜಯರಾಮು, ಯುವ ಮೋರ್ಚಾ ಪದಾಧಿಕಾರಿಗಳಾದ ಮನೋಜ್, ಹೇಮಂತ, ಸಚಿನ್, ಶ್ರೇಯಸ್ ಉಪಸ್ಥಿತರಿದ್ದರು.

ನಿಧನ



ಜಯಮ್ಮ

ತಿ.ನರಸೀಪುರ, ಡಿ.19– ತಾಲೂಕಿನ ಮುದ್ದಬೀರನಹುಂಡಿ ಗ್ರಾಮದ ಜಯಮ್ಮ(82) ಗುರುವಾರ ನಿಧನರಾದರು. ಮೃತರು ಪತ್ರಿಕಾ ವಿತರಕ ಪುಟ್ಟಸ್ವಾಮಿ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಮ್ಮಯ್ಯ



ಹುಣಸೂರು, ಡಿ.19– ನಗರದ ಸರಸ್ವತಿಪುರಂ ನಿವಾಸಿ, ಉದ್ಯಮಿ ಶ್ರೀನಿವಾಸ್ ಅವರ ತಂದೆ ತಮ್ಮಯ್ಯ(75) ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರಘು

ಹಿರೀಕ್ಯಾತನಹಳ್ಳಿ, ಡಿ.19– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ನಿವಾಸಿ, ವಿಶ್ವಕರ್ಮ ಸಂಘದ ಕಾರ್ಯದರ್ಶಿ ರಘು(41) ಗುರುವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಡಾ ಹಗರಣದ ತನಿಖೆಯಂತೆ ಅದರ ಹಿಂದಿನ ಆಯುಕ್ತ ದಿನೇಶ್‌ಕುಮಾರ್ ಅಮಾನತು ಸಹ ಗೊಂದಲಮಯ!

ಒಮ್ಮೆ ಅಮಾನತು ಎನ್ನುವ ನಗರಾಭಿವೃದ್ಧಿ ಸಚಿವ ಮತ್ತೊಮ್ಮೆ ವಾಪಸ್ ಪಡೆಯಲಾಗಿದೆ; ಮಗದೊಮ್ಮೆ ಇಲ್ಲ...ಇಲ್ಲ... ಅಮಾನತಿನಲ್ಲಿದ್ದಾರೆಂಬ ಮರಗುಳಿ ಮಾತು!



ದಿನೇಶ್‌ಕುಮಾರ್

ಮೈಸೂರು, ಡಿ.19(ಆರ್‌ಕೆ)– ನಿಯಮ ಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡಿ ಭಾರೀ ಭ್ರಷ್ಟಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗುತ್ತಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅಮಾನತು ಹಿಂಪಡೆಯಲಾಗಿತ್ತೆ? ಇಲ್ಲವೇ ಎಂಬುದರ ಬಗ್ಗೆ ಗೊಂದಲ ಮೂಡಿದೆ.

2024ರ ಆಗಸ್ಟ್ 31ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನ ಕಾರ್ಯದರ್ಶಿ ಉಮಾದೇವಿ ಅವರು ಜಿ.ಟಿ.ದಿನೇಶ್ ಕುಮಾರ್ ಅವರನ್ನು ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ಅಮಾನತುಪಡಿಸಿ ಆದೇಶ ಹೊರಡಿಸಿದ್ದರು.

ಮುಡಾ ಹಗರಣ ಸಂಬಂಧ ತನಿಖೆಗೆ ಅನುಮತಿ ನೀಡಿದ್ದ ರಾಜ್ಯಪಾಲರ ಕ್ರಮ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸರ್ಕಾರವು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಜಿ.ಟಿ.ದಿನೇಶ್ ಕುಮಾರ್ ಅವರ ಅಮಾನತು ಆದೇಶವನ್ನು ತೆರವುಗೊಳಿಸಲಾಗಿದೆ ಎಂದು 2024ರ ಸೆ.12ರಂದು ತಿಳಿಸಿತ್ತು.

ಸೆಪ್ಟೆಂಬರ್ 3ರ ಆದೇಶ: ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಎರಡನೇ ಭಾರಿ ಸೇವೆಯಿಂದ ಅಮಾನತುಗೊಳಿಸಿ ಸೆಪ್ಟೆಂಬರ್ 3ರಂದು ಅಧೀನ ಕಾರ್ಯದರ್ಶಿ ಉಮಾದೇವಿ ಆದೇಶ ಹೊರಡಿಸಿದ್ದಾರೆ. ಮುಡಾ ನಿವೇಶನ ಹಂಚಿಕೆ ಅಕ್ರಮ ಎಂದು ತಾಂತ್ರಿಕ ಸಮಿತಿ ವರದಿ ಹಾಗೂ ಕಾಲ-ಕಾಲಕ್ಕೆ ಸರ್ಕಾರ ನೀಡಿದ್ದ ನಿರ್ದೇಶನಗಳನ್ನು ಪಾಲಿಸದಿರುವುದರಿಂದ ಅಮಾನತ್ತುಗೊಳಿಸಲಾಗಿದೆ ಎಂದು ಉಮಾದೇವಿ ಅವರು ಈ ಆದೇಶದಲ್ಲಿ ತಿಳಿಸಿದ್ದರು.

ಒಂದು ವೇಳೆ ಆಗಸ್ಟ್ 31ರ ಅಮಾನತು ಆದೇಶ ಚಾಲ್ತಿಯಲ್ಲಿದ್ದರೆ, ಸೆಪ್ಟೆಂಬರ್ 3ರಂದು ಏಕೆ ಮತ್ತೆ ಅಮಾನತುಗೊಳಿಸಲಾಯಿತು? ಅಲ್ಲದೆ ಸೆ.3ರಂದು ಎರಡನೇ ಬಾರಿಗೆ ದಿನೇಶ್ ಕುಮಾರ್ ಅಮಾನತುಗೊಂಡಿದ್ದರೂ ಸೆ.24ರಂದು ಹೈಕೋರ್ಟ್‌ಗೆ ಯಾಕೆ ತಪ್ಪು ಮಾಹಿತಿ ನೀಡಲಾಯಿತು. ಇದರಲ್ಲಿ ಸ್ಪಷ್ಟತೆ ಇಲ್ಲದಿರುವುದು ಕಂಡು ಬಂದಿದೆ. ಇಷ್ಟಾದರೂ ನಿನ್ನೆಯಷ್ಟೇ ಅಧಿವೇಶನದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆ ಸಂಬಂಧ ಮಾತನಾಡಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಜಿ.ಟಿ.ದಿನೇಶ್ ಕುಮಾರ್ ಅಮಾನತು ಆದೇಶವನ್ನು ತೆರವುಗೊಳಿಸಿಲ್ಲ ಎಂದು ಸ್ಪಷ್ಟಪಡಿಸಿದರು.



ತಾಂತ್ರಿಕ ದೋಷ ಎಂದ ಸಚಿವ: ತಾಂತ್ರಿಕ ದೋಷದಿಂದಾಗಿ ಅಮಾನತು ಆದೇಶ ಹಿಂಪಡೆಯಲಾಗಿದೆ ಎಂದು ಹೈಕೋರ್ಟ್‌ಗೆ ಮಾಹಿತಿ ನೀಡಿದ್ದೆವು. ನಂತರ ಅಮಾನತು ಆದೇಶ ಚಾಲ್ತಿಯಲ್ಲಿದೆ ಎಂದು ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಲಾಗಿದೆ ಎಂದು ಸದನದಲ್ಲಿ ಭೈರತಿ ಸುರೇಶ್ ಹೇಳಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಕೆ.ಆರ್. ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು, ಹೈಕೋರ್ಟ್‌ನಲ್ಲಿ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರೇ ಜಿ.ಟಿ.ದಿನೇಶ್ ಕುಮಾರ್ ಅಮಾನತ್ತು ಆದೇಶವನ್ನು ಹಿಂಪಡೆಯಲಾಗಿದೆ ಎಂದು ನ್ಯಾಯಮೂರ್ತಿ ಮುಂದೆ ಹೇಳಿದ್ದರು ಎಂದು ತಿಳಿಸಿದಾಗ, ಭೈರತಿ ಸುರೇಶ್, ಸರ್ಕಾರವು ಅಮಾನತು ಹಿಂಪಡೆದಿಲ್ಲ. ತಾಂತ್ರಿಕ ಕಾರಣದಿಂದ ಗೊಂದಲ ಉಂಟಾಗಿತ್ತು ಎಂದರು.

ಮುಡಾ ನಿವೇಶನ ಹಂಚಿಕೆ ಪ್ರಕರಣವು ಸುದ್ದಿ ಮಾಧ್ಯಮಗಳ ಮೂಲಕ ಬಯಲಾಗುತ್ತಿದ್ದಂತೆಯೇ, ಜುಲೈ 1ರಂದು ಸಚಿವ ಭೈರತಿ ಸುರೇಶ್ ಅವರೇ ದಿನೇಶ್ ಕುಮಾರ್‌ನನ್ನು ವರ್ಗಾವಣೆಗೆ ಆದೇಶಿಸಿದ್ದರು. ಆದರೆ ಅವರಿಗೆ ಸ್ಥಳ ನಿಯೋಜನೆ ಮಾಡಿರಲಿಲ್ಲ.

ಆದರೆ, ಆಗಸ್ಟ್ 29ರಂದು ಅವರನ್ನು ಹಾವೇರಿ ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ ಸರ್ಕಾರ ನಿಯೋಜಿಸಿ, ಸಾರ್ವಜನಿಕ ವಲಯದಲ್ಲಿ ಅಚ್ಚರಿ ಮೂಡಿಸಿತ್ತು. ಆಗಸ್ಟ್ 31ರಂದು ದಿನೇಶ್ ಕುಮಾರ್‌ನನ್ನು ಸೇವೆಯಿಂದ ಅಮಾನತುಗೊಳಿಸಲಾಗಿತ್ತು. ಇದೀಗ ಸೆಪ್ಟೆಂಬರ್ 3ರಂದು ಮತ್ತೆ ಅಮಾನತು ಆದೇಶ ಹೊರಡಿಸಿರುವುದು ಸಂಶಯಕ್ಕೆ ಅನುವು ಮಾಡಲಾಗಿದೆ.

ಮತ್ತೊಬ್ಬ ಆಯುಕ್ತರ ವಿರುದ್ಧ ಕ್ರಮವಿಲ್ಲ: ದಿನೇಶ್ ಕುಮಾರ್‌ನನ್ನು ಸೇವೆಯಿಂದ ಅಮಾನತುಗೊಳಿಸಿದೆಯಾದರೂ, ಮತ್ತೋರ್ವ ಮುಡಾ ಮಾಜಿ ಕಮಿಷ್ನರ್ ಡಾ. ಡಿ.ಬಿ. ನಟೇಶ್ ವಿರುದ್ಧ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಜಾರಿ ನಿರ್ದೇಶನಾಲಯ (ಇಡಿ) ಹಾಗೂ ಲೋಕಾಯುಕ್ತ ಅಧಿಕಾರಿಗಳು ನಟೇಶರನ್ನು ವಿಚಾರಣೆಗೊಳಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪುಷ್ಪ-2 (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ-2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ-2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ-2 (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಪ್ರಭಾ	
ಪುಷ್ಪ-2 (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಯುಐ (2024) (ಕ): ಬೆ.9.30ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಮ.2.35ಕ್ಕೆ, ಸಂ.5ಕ್ಕೆ, ರಾ.7.25ಕ್ಕೆ, ಮಾರ್ಕೋ (ಮ): ರಾ.9.55ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9ಕ್ಕೆ, ಪುಷ್ಪಾ 2 (ತೆ): ಮ.12.05ಕ್ಕೆ, ವಿಡುತಲೈ 2 (ತ): ಮ.3.55ಕ್ಕೆ, ರಾ.10.05ಕ್ಕೆ, ವನ್ವಾಸ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 3	ಇಡಿ ಎಕ್ಸ್ಟ್ರಾ ಡಿಸೆಂಟ್ (ಮ): ಬೆ.9.50ಕ್ಕೆ, ಪುಷ್ಪಾ 2 (ಕ): ಮ.12.15ಕ್ಕೆ, ಸಂ.6.10ಕ್ಕೆ, ಹರಿದಾಸರ ದಿನಚರಿ (ಕ): ಸಂ.4.05ಕ್ಕೆ, ಬಚ್ಚಲ ಮಲ್ಲಿ (ತೆ): ರಾ.10.05ಕ್ಕೆ.
ಸ್ಕ್ರೀನ್ 4	ಯುಐ (2024) (ಕ): ಬೆ.8.30ಕ್ಕೆ, ಬೆ.11.10ಕ್ಕೆ, ಮ.1.50ಕ್ಕೆ, ಸಂ.4.30.ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಕ್ಷರ ದಾಸೋಹ ನೌಕರರ ಪ್ರತಿಭಟನೆ ಮುಂದುವರಿಕೆ

ವೇತನ ಹೆಚ್ಚಳವೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ



ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅಕ್ಷರ ದಾಸೋಹದ ಕಾರ್ಯಕರ್ತರು ಗುರುವಾರವೂ ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.19(ಎಂಟಿವೈ)– ವೇತನ ಹೆಚ್ಚಳ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಕಾರ್ಯಕರ್ತರು ನಡೆಸುತ್ತಿರುವ ಅಹೋರಾತ್ರಿ ಧರಣಿ ಮೂರನೇ ದಿನವಾದ ಗುರುವಾರವೂ ಮುಂದುವರೆಯಿತು.

ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಡಿ.17ರಂದು ಅಹೋರಾತ್ರಿ ಧರಣಿ ಆರಂಭಿಸಿದ್ದ ಅಕ್ಷರ ದಾಸೋಹದ ಕಾರ್ಯಕರ್ತರು ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

ಮಧ್ಯಾಹ್ನದ ಬಿಸಿಯೂಟ ಯೋಜನೆ ಪ್ರಾರಂಭವಾಗಿ 24 ವರ್ಷಗಳು ಕಳೆಯುತ್ತಿವೆ. ಲಕ್ಷಾಂತರ ಮಕ್ಕಳಿಗೆ ಹಾಲು, ಬಿಸಿ ಆಹಾರ ನೀಡಿ, ಶಾಲೆ ಸ್ವಚ್ಛತೆ ಮಾಡುವುದರ ಜತೆಗೆ ಶಾಲೆಯ ದಿನನಿತ್ಯದ ಕೆಲಸ ಮಾಡಲು ಹೆಚ್ಚು ಪರಿಶ್ರಮ ಬೇಕು. ಬಿಸಿಯೂಟ ಯೋಜನೆಯ ಮಹತ್ವ ಅರಿತು ಉತ್ತರಪ್ರದೇಶ ಮತ್ತು ಪಂಜಾಬ್‌ನಲ್ಲಿ ಹೈಕೋರ್ಟ್ ವರ್ಷದ 12 ತಿಂಗಳು ಕೆಲಸ ಹಾಗೂ ಕನಿಷ್ಠಕೂಲಿ ನೀಡಲು ಆದೇಶಿಸಿದೆ. ಆದರೆ ರಾಜ್ಯದಲ್ಲಿ ಬಿಸಿಯೂಟ ತಯಾರಕರನ್ನು ಕಡೆಗಣಿಸಲಾಗಿದೆ. ಕಳೆದ ಜುಲೈ ತಿಂಗಳಿನಲ್ಲಿ ನಿವೃತ್ತಿ ಹೊಂದಿದ ಬಿಸಿಯೂಟ ನೌಕರರಿಗೆ ಇಡಿಗಂಟು ಜಾರಿ ಮಾಡಲು ರಾಜ್ಯ ಸರ್ಕಾರ ಹಣಕಾಸು ಇಲಾಖೆ ಸೇವೆಯ ಆಧಾರಿತವಾಗಿ ನೀಡಲು ಶಿಫಾರಸ್ಸು ಮಾಡಿದೆ. ಆದರೆ ಇದುವರೆಗೆ ಜಾರಿ ಆಗಿಲ್ಲ. ತಕ್ಷಣ ಇದನ್ನು ಜಾರಿ ಮಾಡಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಗೌರವ ಧನ 26 ಸಾವಿರ ರೂ. ಹೆಚ್ಚಿಸಬೇಕು. 12 ಸಾವಿರ ವೇತನ ಕೊಡಬೇಕು. ನಿವೃತ್ತಿಯಾದವರಿಗೆ ಇಡಿಗಂಟು ಕೂಡಲೇ ಜಾರಿ ಆಗಬೇಕು. ಉತ್ತಮ ಅಡುಗೆ ಕೇಂದ್ರಗಳನ್ನು ನಿರ್ಮಿಸಬೇಕು. ಎಂಡಿಎಂ ಯೋಜನೆಗೆ ಪ್ರತ್ಯೇಕ ನಿರ್ದೇಶನಾಲಯ ಮಾಡಬೇಕು. ಕ್ಲಸ್ಟರ್ ಸಭೆಗಳನ್ನು ಕಡ್ಡಾಯವಾಗಿ ಪ್ರತಿ ಜಿಲ್ಲೆಯಲ್ಲಿ ಮಾಡಬೇಕು. ಕೆಲಸದ ಅವಧಿಯನ್ನು 4 ಗಂಟೆಯಿಂದ 6 ಗಂಟೆಗೆ ಅಕ್ಷರ ದಾಸೋಹ ಕೈಪಿಡಿಯಲ್ಲಿ ಬದಲಾಯಿಸಬೇಕು. ಅಕ್ಷರ ದಾಸೋಹ ಯೋಜನೆ ಸಂಪೂರ್ಣವಾಗಿ ಶಿಕ್ಷಣ ಇಲಾಖೆಯಡಿಯಲ್ಲಿಯೇ ನಡೆಯಬೇಕು. ಕೆಲಸದ ಸ್ಥಳದಲ್ಲಿ ಮರಣ ಹೊಂದಿದರೆ 25 ಲಕ್ಷ ರೂ ಪರಿಹಾರ ಕೊಡಬೇಕು. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಘೋಷಣೆ ಮಾಡಿದ 6000 ರೂ ಗೌರವಧನ ಹೆಚ್ಚಿಸಬೇಕು. ಹಾಜರಾತಿ ಆಧಾರದಲ್ಲಿ ಕೆಲಸದಿಂದ ತೆಗೆಯುವ ಕ್ರಮ ನಿಲ್ಲಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಮುಖಂಡರಾದ ಮಂಜುಳಾ, ಮಂಗಳಮ್ಮ ಮಂಜುಳಾ, ಉಮಾದೇವಿ, ಲೀಲಾವತಿ, ಬಿ.ಎ.ಶಿವಣ್ಣ, ಸರಸ್ವತಿ, ಶೋಭ, ಕುಮಾರಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಡಾ.ಅಂಬೇಡ್ಕರ್ ಕುರಿತ ಅಮಿತ್ ಶಾ ಹೇಳಿಕೆ ಖಂಡಿಸಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ



ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ವಿಚಾರದಲ್ಲಿ ಹೇಳಿಕೆ ನೀಡಿರುವ ಕೇಂದ್ರ ಸಚಿವ ಅಮಿತ್ ಶಾ ವಜಾಗೊಳಿಸಲು ಆಗ್ರಹಿಸಿ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಡಿ.19(ಎಂಟಿವೈ)– ಸಂಸತ್‌ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಿರುದ್ಧ ಅಪಮಾನ ಮಾಡುವ ಹೇಳಿಕೆ ನೀಡಿರುವ ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಿ, ಬಂಧಿಸುವಂತೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಇಂದು ಬೆಳಗ್ಗೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿದರು. ಅಲ್ಲದೆ, ಅಮಿತ್ ಶಾ ಭಾವಚಿತ್ರ ಸುಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಅಮಿತ್ ಶಾ ಅವರು ಡಾ. ಅಂಬೇಡ್ಕರ್ ಅವರ ಬಗ್ಗೆ ಬಿಜೆಪಿ ಅಂತರಂಗದ ಅಭಿಪ್ರಾಯವನ್ನು ಬಹಿರಂಗವಾಗಿ ದೇಶದ ಮುಂದೆ ತೆರೆದಿಟ್ಟಿದ್ದಾರೆ. ಅವರ ಮಾತು ಅಂಬೇಡ್ಕರ್ ಬಗ್ಗೆ ಅವರಿಗಿರುವ ಅಸಹನೆಯನ್ನು ತೋರಿಸುತ್ತದೆ ಎಂದು ಆರೋಪಿಸಿದರು.

ಈ ಹಿಂದೆ ಮೀಸಲಾತಿ ಬೇಡ ಎನ್ನುತ್ತಿದ್ದವರು ಇಂದು ನಮಗೆ ಮೀಸಲಾತಿ ಬೇಕು. ನಮ್ಮನ್ನು ಮೀಸಲಾತಿಯಡಿಯಲ್ಲಿ ಸೇರಿಸಿ ಎಂದು ಹೋರಾಟ ಮಾಡುತ್ತಿದ್ದಾರೆ. ಸ್ವತಃ ಅಮಿತ್ ಶಾ ಶೇ.10 ಮೀಸಲಾತಿಯಡಿಯಲ್ಲಿ ಬರುತ್ತಾರೆ. ಅಂತಹವರು ಇಂದು ಸಂವಿಧಾನ ನೀಡಿದ ಬಾಬಾ ಸಾಹೇಬ್ ವಿರುದ್ಧ ಅಸಹನೆಯಿಂದ ಮಾತನಾಡುತ್ತಿರುವುದು ಅವರ ಕೀಳು ಮನಸ್ಥಿತಿಯನ್ನು ತೋರಿಸುತ್ತದೆ ಎಂದು ಕಿಡಿಕಾರಿದರು.

ಡಾ.ಅಂಬೇಡ್ಕರ್ ಭಾರತಕ್ಕೆ ವ್ಯಸನ ಅಲ್ಲ, ಈ ದೇಶದ ಶಕ್ತಿ. ಅಂಬೇಡ್ಕರ್ ಇಲ್ಲದ ಭಾರತವನ್ನು ನೆನೆಯುವುದು ಸಹ ಕಷ್ಟಸಾಧ್ಯ. ಅಂತಹದರಲ್ಲಿ ಅಂಬೇಡ್ಕರ್ ಬಗ್ಗೆ ಮಾತನಾಡಿರುವುದು ಅಮಿತ್ ಷಾ ಅವರ ಮೂರ್ಖತನವನ್ನು ಎತ್ತಿ ತೋರಿಸುತ್ತದೆ. ಈ ಭೂಮಿಯಲ್ಲಿ ಸೂರ್ಯ-ಚಂದ್ರ ಇರುವವರೆಗೆ ಅಂಬೇಡ್ಕರ್ ಪ್ರಾತಃ ಸ್ಮರಣೀಯರಾಗಿರುತ್ತಾರೆ. ಬಿಜೆಪಿಯವರು ಅಂಬೇಡ್ಕರ್ ಅವರನ್ನು ಮರೆಮಾಚಲು ಪ್ರಯತ್ನಿಸಿದಷ್ಟು, ಅಂಬೇಡ್ಕರ್ ಕೊಟ್ಟ ಸಂವಿಧಾನ ನಮ್ಮ ದೇಶದ ಸರ್ವತೋಮುಖ ಅಭಿವೃದ್ಧಿಗೆ ಮುನ್ನಡೆಯ ಹಾದಿಗೆ ಬೆಳಕಾಗುತ್ತದೆ ಎಂದು ತಿಳಿಸಿದರು.

ಡಾ.ಅಂಬೇಡ್ಕರ್ ಮತ್ತು ಅವರು ಕೊಟ್ಟಿರುವ ಸಂವಿಧಾನ ಇಲ್ಲದೆ ಇದ್ದರೆ ಅಮಿತ್ ಶಾ ಗೃಹ ಸಚಿವರಾಗಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ, ಕೂಡಲೇ ರಾಷ್ಟ್ರಪತಿಗಳು ಮಧ್ಯ ಪ್ರವೇಶ ಮಾಡಿ, ಪ್ರಧಾನಮಂತ್ರಿಗಳಿಗೆ ಸಲಹೆ ನೀಡಿ ಇಂತಹ ಸಚಿವರನ್ನು ಸಂಪುಟದಿಂದ ಕೈಬಿಡಲು ಸೂಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್, ಕೆ.ಆರ್. ಬ್ಯಾಂಕ್ ಮಾಜಿ ಅಧ್ಯಕ್ಷ ವಾಸು, ಮಾಜಿ ಮೇಯರ್‌ಗಳಾದ ನಾರಾಯಣ್, ಟಿ.ಬಿ. ಚಿಕ್ಕಣ್ಣ, ಮುಖಂಡರಾದ ಕೆ.ವಿ. ಮಲ್ಲೇಶ್, ಎಂ.ಕೆ. ಅಶೋಕ್, ಯತಿರಾಜ್, ಜಿ.ಸೋಮಶೇಖರ್, ಶ್ರೀಧರ್, ಜೋಗಿ ಮಹೇಶ್, ಮಂಜು, ವೀಣಾ, ಲತಾ ಮೋಹನ್, ಪುಟ್ಟಣ್ಣ, ರವಿಶಂಕರ್, ಶಿವಣ್ಣ ದಾಸ್, ಬಾಲಪ್ಪ, ಶಂಕರ್, ವಿಶ್ವನಾಥ್, ಗುಣಶೇಖರ್, ವೆಂಕಟೇಶ್, ಹರೀಶ್, ಮಹ್ಮದ್ ಫಾರೂಖ್, ಗಣೇಶ್, ಆನಂದ್, ಸುರೇಶ್, ಮಹೇಂದ್ರ, ಭವ್ಯಾ, ಚಂದ್ರಕಲಾ, ಮಹದೇವಮ್ಮ, ಕುಪ್ಪಮ್ಮ, ನಾಗರತ್ನಾ, ಮಂಜುನಾಥ್, ಇಂದ್ರಮ್ಮ ಲೋಕೇಶ್, ದಿನೇಶ್, ಕೃಷ್ಣ, ವಿಜಯ್ ಕುಮಾರ್, ಭಾಗ್ಯ ಚಂದ್ರಶೇಖರ್ ಸೇರಿದಂತೆ ಇನ್ನಿತರು ಪಾಲ್ಗೊಂಡಿದ್ದರು.

ಪೆನ್ಷನರ್ ಡೇ



ನೈಋತ್ಯ ರೈಲ್ವೇ ವಿಭಾಗೀಯ ಕಚೇರಿಯಲ್ಲಿ ರೈಲ್ವೇ ಪೆನ್ಷನರ್ ವೆಲ್‌ಫರ್ ಅಸೋಸಿಯೇಷನ್ ವತಿಯಿಂದ ಪೆನ್ಷನರ್‌ಡೇ ಆಚರಿಸಲಾಯಿತು. ಸಂಘದ ಅಧ್ಯಕ್ಷ ಪಾರ್ಥಸಾರಥಿ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್, ವಿಭಾಗೀಯ ಸಹಾಯಕ ಹಣಕಾಸು ಮ್ಯಾನೇಜರ್ ಭಗತ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ

ಹಿಂದೆ ಆಯುಕ್ತರಾಗಿದ್ದ ನಟೇಶ್, ದಿನೇಶ್ ಕುಮಾರ್ ಅಮಾನತಿಗೆ ಆಗ್ರಹ



ಮುಡಾ ಹಿಂದಿನ ಆಯುಕ್ತರಾದ ಡಿ.ಬಿ.ನಟೇಶ್, ಜಿ.ಟಿ.ದಿನೇಶ್ ಕುಮಾರ್ ಅಮಾನತಿಗೆ ಆಗ್ರಹಿಸಿ ವಿದ್ಯಾವಂತ ನಿರುದ್ಯೋಗಿಗಳ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.19(ಎಂಟಿವೈ)– ಮುಡಾ ನಿವೇಶನ ಹಂಚಿಕೆ ಹಗರಣದ ಪ್ರಮುಖ ಪಾತ್ರಧಾರಿಗಳೂ ಆದ ಹಿಂದಿನ ಆಯುಕ್ತರಾದ ಡಿ.ಬಿ.ನಟೇಶ್, ಜಿ.ಟಿ.ದಿನೇಶ್ ಕುಮಾರ್ ಅವರನ್ನು ಅಮಾನತಿನಲ್ಲಿಟ್ಟು, ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಒತ್ತಾಯಿಸಿ ವಿದ್ಯಾವಂತ ನಿರುದ್ಯೋಗಿಗಳ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ, 2023-24ರಲ್ಲಿ ಮುಡಾದಲ್ಲಿ ನಡೆದ ಹಗರಣಕ್ಕೆ ಡಿ.ಬಿ.ನಟೇಶ್, ಜಿ.ಟಿ.ದಿನೇಶ್ ಕುಮಾರ್ ಕಾರಣ. ಈ ಇಬ್ಬರನ್ನು ಅಮಾನತು ಮಾಡಬೇಕು. ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಬಹಳ ವರ್ಷಗಳಿಂದ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ, ವಂಚಿತರಾಗಿರುವ ಎಲ್ಲಾ ಜಾತಿಯ ಜನರಿಗೆ ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು.

ಮುಡಾ ಸಾರ್ವಜನಿಕರಿಗೆ, ಬಡವರಿಗೆ ನಿವೇಶನ, ಮನೆಗಳನ್ನು ನಿರ್ಮಾಣ ಮಾಡಿ ಕೊಡುವ ಸಂಸ್ಥೆ. ಆದರೆ ಈ ಸಂಸ್ಥೆಗೆ ಸರ್ಕಾರದಿಂದ ಕೋಟ್ಯಾಂತರ ರೂ ಅನುದಾನ ಬರುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳದೆ ಪೋಲು ಮಾಡುತ್ತಿರುವ ಸಂಸ್ಥೆಯಾದರೂ ಯಾಕೆ ಬೇಕು. ಕೂಡಲೇ ಮುಡಾ ಕಚೇರಿಯನ್ನು ಬಂದ್ ಮಾಡಬೇಕು ಎಂದು ಕಿಡಿಕಾರಿದರು.

ಮುಡಾಗೆ ಸುಮಾರು ವರ್ಷಗಳಿಂದಲೂ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕೂಡಲೇ ಖಾಲಿ ಇರುವ ನಿವೇಶನಗಳನ್ನು ಹಂಚಿಕೆ ಮಾಡಬೇಕು. 50:50 ಅನುಪಾತದಲ್ಲಿ ನೀಡಿರುವ ನಿವೇಶನಗಳ ಕ್ರಯಪತ್ರಗಳನ್ನು ರದ್ದುಪಡಿಸಬೇಕು. 2022-23ನೇ ಸಾಲಿನಲ್ಲಿ ಅಧ್ಯಕ್ಷರಾಗಿದ್ದ ಹೆಚ್.ವಿ.ರಾಜೀವ್ ಅಕ್ರಮವಾಗಿ ಒಂದೇ ದಿನದಲ್ಲಿ ನೂರಾರು ನಿವೇಶನ ಮತ್ತು ಮನೆಗಳ ಖಾತೆ ಮಾಡಿಕೊಟ್ಟಿರುವುದನ್ನು ರದ್ದುಮಾಡಬೇಕು. ಅಕ್ರಮವಾಗಿ ನಿವೇಶನ ಪಡೆದು ಅದನ್ನು ರಿಯಲ್ ಎಸ್ಟೇಟ್‌ಗೆ ಬಳಸುತ್ತಿರುವುದನ್ನು ಪತ್ತೆ ಮಾಡಿ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಘದ ರಾಜ್ಯಾಧ್ಯಕ್ಷ ಕೊಣ್ಣೂರು ಶ್ರೀಧರ್ ಮೂರ್ತಿ, ಪುಟ್ಟಮಾದಯ್ಯ, ಅಭಿ, ಮನೋಜ್, ರಮೇಶ್, ರಾಜು, ಪಾಪಣ್ಣ, ಶಿವು ಪಾಲ್ಗೊಂಡಿದ್ದರು.

ವೈಟ್ ಬೋರ್ಡ್ ಕಾರುಗಳನ್ನು ಬಾಡಿಗೆಗೆ ಓಡಿಸುತ್ತಿರುವ ಆರೋಪ

ಕ್ರಮಕ್ಕೆ ಆಗ್ರಹಿಸಿ ಯೆಲ್ಲೋ ಬೋರ್ಡ್ ಕಾರು ಮಾಲೀಕರು, ಚಾಲಕರ ದಿಢೀರ್ ಪ್ರತಿಭಟನೆ



ಮೈಸೂರಿನ ಆರ್‌ಟಿಓ ಕಚೇರಿ (ಮೈಸೂರು ಪಶ್ಚಿಮ) ಎದುರು ಗುರುವಾರ ಯೆಲ್ಲೋ ಬೋರ್ಡ್ ಕಾರುಗಳ ಮಾಲೀಕರು ಮತ್ತು ಚಾಲಕರು ಪ್ರತಿಭಟನೆ ನಡೆಸಿದರು.

ಮೈಸೂರು,ಡಿ.19(ಪಿಎಂ)– ನಗರದಲ್ಲಿ ನಿಯಮಬಾಹಿರವಾಗಿ ವೈಟ್ ಬೋರ್ಡ್ ಕಾರುಗಳನ್ನು ಬಾಡಿಗೆಗೆ ಓಡಿಸುತ್ತಿರುವುದು ನಡೆಯುತ್ತಿದ್ದರೂ ಆರ್‌ಟಿಓ ಅಧಿಕಾರಿಗಳು ಸೂಕ್ತ ಕ್ರಮ ವಹಿಸುತ್ತಿಲ್ಲ ಎಂದು ಆರೋಪಿಸಿ ಯೆಲ್ಲೋ ಬೋರ್ಡ್ ಕಾರುಗಳ ಮಾಲೀಕರು ಮತ್ತು ಚಾಲಕರು ಕರ್ನಾಟಕ ಚಾಲಕರ ಯೂನಿಯನ್ ನೇತೃತ್ವದಲ್ಲಿ ಗುರುವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ (ಮೈಸೂರು ಪಶ್ಚಿಮ) ಎದುರು ಜಮಾಯಿಸಿದ ಯೆಲ್ಲೋ ಬೋರ್ಡ್ ಕಾರುಗಳ ಮಾಲೀಕರು ಮತ್ತು ಚಾಲಕರು, ಆರ್‌ಟಿಓ ಅಧಿಕಾರಿಗಳ ವಿರುದ್ಧ ದಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಾಲಕ ಸುನೀಲ್ ಮಾತನಾಡಿ, ವೈಟ್ ಬೋರ್ಡ್‌ನಲ್ಲಿ ಅನೇಕರು ಬಾಡಿಗೆಗೆ ಹೋಗುತ್ತಿದ್ದಾರೆ. ಇದು ನಿಯಮ ಬಾಹಿರ. ಅಂತಹವರ ವಿರುದ್ಧ ಕ್ರಮ ವಹಿಸುವಂತೆ ಈಗಾಗಲೇ ಹಲವು ಬಾರಿ ಆರ್‌ಟಿಓ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ಆದರೂ ಸ್ಪಂದಿಸುತ್ತಿಲ್ಲ ಎಂದು ಕಿಡಿಕಾರಿದರು.

ಮತ್ತೊಬ್ಬ ಚಾಲಕ ರವಿ ಮಾತನಾಡಿ, ನಾವೇ ಈಗಾಗಲೇ ಬಾಡಿಗೆಗೆ ಓಡಿಸುತ್ತಿದ್ದ ವೈಟ್ ಬೋರ್ಡ್ ಕಾರುಗಳನ್ನು ಹಿಡಿದು ಆರ್‌ಟಿಓ ಕಚೇರಿ ಹಾಗೂ ಸಂಬಂಧಿಸಿದ ಪೊಲೀಸ್ ಠಾಣೆಗೂ ದೂರು ನೀಡಿದ್ದೇವೆ. ಆದರೆ ಅಂತಹ ವೈಟ್ ವಾಹನ ಮಾಲೀಕರ ವಿರುದ್ಧ ಆರ್‌ಟಿಓ ಅಧಿಕಾರಿ ಕ್ರಮ ಜರುಗಿಸುತ್ತಿಲ್ಲ ಎಂದು ಆರೋಪಿಸಿದರು.

ಚಾಲಕ ದೇವರಾಜು ಮಾತನಾಡಿ, ಒಂದು ತಿಂಗಳ ಹಿಂದೆ ಏಳು ವಾಹನಗಳನ್ನು ಹಿಡಿದಿದ್ದೆವು. ಈ ಪೈಕಿ ಮೂರು ವಾಹನ ಇದೇ ಆವರಣದಲ್ಲಿ ನಿಂತಿವೆ. ಈ ಸಂಬಂಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಮಾಹಿತಿ ಸಹ ನಮಗೆ ನೀಡಿಲ್ಲ. ನಾವಿಲ್ಲಿ ಪ್ರತಿಭಟನೆ ನಡೆಸುತ್ತಿದ್ದರೂ ಕಚೇರಿಯಲ್ಲಿ ಯಾವುದೇ ಅಧಿಕಾರಿಗಳು ಇಲ್ಲ. ನಮಗೆ ಅನ್ಯಾಯ ಆಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಯೆಲ್ಲೋ ಬೋರ್ಡ್ ಕಾರು ಚಾಲಕರಾದ ಎಸ್.ಮಂಜುನಾಥ್, ಕೆ.ಗಣೇಶ್, ದಿನೇಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸ್ನೇಹಮಯಿ ಕೃಷ್ಣಗೆ ನಾನು ಆಮಿಷವೊಡ್ಡಿಲ್ಲ; ಅವರ ಭೇಟಿ ಕೂಡ ಮಾಡಿಲ್ಲ: ಹರ್ಷ ಸ್ಪಷ್ಟನೆ



ಮೈಸೂರು, ಡಿ.19(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟ ನಡೆಸುತ್ತಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣರಿಗೆ ನಾನು ಯಾವುದೇ ಆಮಿಷ ವೊಡ್ಡಿಲ್ಲ ಎಂದು ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ನೆಂದು ಹೇಳಿಕೊಳ್ಳುವ ಹರ್ಷ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ತನಕ ಸ್ನೇಹಮಯಿ ಕೃಷ್ಣ ಅವರನ್ನು ನಾನು ಭೇಟಿ ಮಾಡಿಲ್ಲ. ಒಂದೇ ಒಂದು ದೂರವಾಣಿ ಕರೆ ಕೂಡ ಮಾಡಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ನಗರ ಪಾಲಿಕೆ ಚುನಾವಣೆ ವಿಳಂಬ ಆಗುತ್ತಿರುವ ಬಗ್ಗೆ ಕಾನೂನು ಹೋರಾಟ ನಡೆಸುವ ಸಂಬಂಧ ಸಲಹೆ ಕೇಳಲು ಸ್ನೇಹಮಯಿ ಕೃಷ್ಣ ಅವರನ್ನು ಭೇಟಿ ಮಾಡಬೇಕು ಅಂದುಕೊಂಡಿದ್ದೆ ಕಳೆದ ವಾರ ಮುಡಾ ಬಳಿ ಸ್ನೇಹಮಯಿ ಕೃಷ್ಣ ದೃಶ್ಯ ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಿದ್ದರು. ಅದೇ ರಸ್ತೆಯಲ್ಲಿ ಹೋಗುತ್ತಿದ್ದ ನಾನು ಸ್ನೇಹಮಯಿ ಕೃಷ್ಣ ಭೇಟಿ ಮಾಡಲು ಪ್ರಯತ್ನಿಸಿದೆ ಆದರೆ ಅವರು ಪತ್ರಕರ್ತರ ಜೊತೆ ಮಾತನಾಡುತ್ತಿದ್ದರಿಂದ ಭೇಟಿ ಸಾಧ್ಯವಾಗಲಿಲ್ಲ.

ನಗರ ಪಾಲಿಕೆ ಚುನಾವಣೆ ವಿಳಂಬವಾಗುತ್ತಿರುವ ಬಗ್ಗೆ ಚರ್ಚೆ ಮಾಡಲು ನನ್ನ ಆತ್ಮೀಯ ಶ್ರೀನಿಧಿ ಜೊತೆ ಸ್ನೇಹಮಯಿ ಕೃಷ್ಣ ಅವರ ಗುಂಡೂರಾವ್ ನಗರದ ಮನೆಗೆ ಹೋಗಿದ್ದೆ. ಆದರೆ ಸ್ನೇಹಮಯಿ ಕೃಷ್ಣ ಮನೆಯಲ್ಲಿ ಇಲ್ಲದಿರುವ ವಿಚಾರ ತಿಳಿಯಿತು. ಮುಡಾ ಪ್ರಕರಣದಲ್ಲಿ ನಿಮ್ಮ ತಂದೆ ಒನ್ ಮ್ಯಾನ್ ಆರ್ಮಿಯಾಗಿ ಹೋರಾಟ ಮಾಡುತ್ತಿದ್ದಾರೆ ಎಂದು ಅವರ ಮಗನ ಬಳಿ ಪ್ರಶಂಸೆ ವ್ಯಕ್ತಪಡಿಸಿ, ಅಲ್ಲಿಂದ ನಿರ್ಗಮಿಸಿದ್ದೆವು ಎಂದು ಹರ್ಷ ತಿಳಿಸಿದರು.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಕಾನೂನು ಹೋರಾಟದಿಂದ ಹಿಂದೆ ಸರಿಯುವಂತೆ ನಾನು ಆಮಿಷವೊಡ್ಡಿದ್ದೇನೆ ಎಂಬ ಸ್ನೇಹಮಯಿ ಕೃಷ್ಣಆರೋಪದಿಂದ ಶಾಕ್ ಆಗಿದೆ. ನನ್ನ ಬಗ್ಗೆ ಅವರು ಮಾಡುತ್ತಿರುವ ಎಲ್ಲಾ ಆರೋಪಗಳು ಶುದ್ಧ ಸುಳ್ಳು ಎಂದರು.


ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರನ್ನು ನಾನು ಈ ತನಕ ನೋಡಿಲ್ಲ. ಮುಖ್ಯಮಂತ್ರಿ ಪತ್ನಿಯಾದ ಯಾದ ಅವರೆಲ್ಲಿ, ನಾವೆಲ್ಲಿ ಮುಡಾ ವಿಚಾರವಾಗಿ ನಾನು ಈ ತನಕ ಯಾರನ್ನೂ ಭೇಟಿ ಮಾಡಿಲ್ಲ. ಇದು ನನಗೆ ಸಂಬಂಧಪಡದ ವಿಚಾರ ಎಂದು ಹೇಳಿದರು.

ಹರ್ಷನಿಗೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ

ಬಿಜೆಪಿ ಜಿಲ್ಲಾ ವಕ್ತಾರ ಮೋಹನ್ ಪ್ರತಿಕ್ರಿಯೆ

ಮೈಸೂರು, ಡಿ.19(ಬಿಎಲ್‌ಯು)– ತಾನು ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಎಂದು ಹೇಳಿಕೊಳ್ಳುತ್ತಿರುವ ಹರ್ಷನಿಗೂ, ಬಿಜೆಪಿಗೂ ಯಾವುದೇ ಸಂಬಂಧವಿಲ್ಲ ಎಂದು ಬಿಜೆಪಿ ಮೈಸೂರು ಜಿಲ್ಲಾ ವಕ್ತಾರ ಎಂ.ಎ.ಮೋಹನ್ ಸ್ಪಷ್ಟಪಡಿಸಿದ್ದಾರೆ.

ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಜೊತೆ ಬಿಜೆಪಿ ಮುಖಂಡ ಹರ್ಷ ಸಂಧಾನ ನಡೆಸಿ, ಹಣದ ಆಮಿಷವೊಡ್ಡಿದ್ದಾರೆಂಬ ಪತ್ರಿಕಾ ವರದಿ ಬಗ್ಗೆ ಮೋಹನ್ ಸ್ಪಷ್ಟನೆ ನೀಡಿದ್ದಾರೆ. 2011 ರಂದು ನಡೆದ ನಗರ ಪಾಲಿಕೆ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದ ವಾರ್ಡ್ ಸಂಖ್ಯೆ 36 ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹರ್ಷ ಸೋಲು ಅನುಭವಿಸಿದ್ದರು. ನಂತರದ ದಿನಗಳಲ್ಲಿ ಹರ್ಷ ಪಕ್ಷದ ಚಟುವಟಿಕೆಗಳಿಂದ ಮುಕ್ತರಾಗಿದ್ದಾರೆ ಎಂದು ತಿಳಿಸಿದ್ದಾರೆ. ಹರ್ಷ ಬಿಜೆಪಿಯಿಂದ ದೂರ ಉಳಿದಿದ್ದಾರೆ. ಸಿದ್ದರಾಮಯ್ಯ ಪರ ಸಂಧಾನ ನಡೆಸಲು ಪ್ರಯತ್ನಿಸಿದ್ದ ಹರ್ಷ ಅವರ ಅನುಯಾಯಿ ಆಗಿರಬೇಕು ಅಥವಾ ಕಾಂಗ್ರೆಸ್ ಸೇರುವ ಹುನ್ನಾರದಲ್ಲಿರಬೇಕು ಎಂದು ಮೋಹನ್ ಹೇಳಿದ್ದಾರೆ.



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖಿತಪ್ತ
ಶ್ರೀಮತಿ ನಿಂಗಮ್ಮ, ಲೇಟ್ ಗೌಡ ನಿಂಗೇಗೌಡರ ಕುಟುಂಬವರ್ಗ, ಶ್ರೀಮತಿ ಅನಸೂಯ ಮೃತರ ಪತ್ನಿ ಮತ್ತು ಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಹೂಟಗಳ್ಳಿ
ಶ್ರೀ ನಾಗರಾಜು
ನಿಧನ: 20.12.2015

7ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖಿತಪ್ತರು
ಪತ್ನಿ: ಹೇಮಾ ಹಾಗೂ ಕುಟುಂಬವರ್ಗದವರು
P. ಸತೀಶ್
(ಗ್ರಾಮ ಪಂಚಾಯಿತಿ S.D.A.)

12ನೇ ವರ್ಷದ ಸವಿನೆನಪು



ವಿ ಬಾಲಕೃಷ್ಣ (ಬಾಲಣ್ಣ) ಉದ್ಯಮಿ
(ನಂದಿನಿ ಉತ್ಪನ್ನಗಳ ಅಧಿಕೃತ ಮಾರಾಟಗಾರರು)
ನೀವು ನಮ್ಮನ್ನಗಲಿ 12 ವರ್ಷ ಕಳೆದರೂ ಸದಾ ನಮ್ಮ ನೆನಪಿನಲ್ಲಿ ನಿಮ್ಮ ಮಾರ್ಗದರ್ಶನದಂತೆ ನಡೆಯುತ್ತಿರುವೆವು.
ದುಃಖತಪ್ತರು : ಪತ್ನಿ, ಮಕ್ಕಳು, ಸೊಸೆ, ಅಳಿಯ ಹಾಗೂ ಮೊಮ್ಮಕ್ಕಳು ಹಾಗೂ ಕುಟುಂಬವರ್ಗ ವಿ.ಪಾಪಣ್ಣ ಅಂಡ್ ಬ್ರದರ್ಸ್ ಸಿಬ್ಬಂದಿ ವರ್ಗ, ಮೈಸೂರು ಹಾಗೂ ಸ್ನೇಹ ಅಸೋಸಿಯೇಟ್ಸ್ ಸಿಬ್ಬಂದಿವರ್ಗ, ಬೆಂಗಳೂರು

IN THE COURT OF HON'BLE VII ADDL. SENIOR CIVIL JUDGE AND JMFC AT MYSURU
OS. NO.26/2024

Plaintiff : Syed Abbas S/o Late Syed Yousuf, Aged about 44 Years, R/at No.2345/1, Mission Hospital Road, Mandi Mohalla, Mysuru City

-V/s-

Defendant : Adil Khan Dhurani S/o Azeeazulla Khan Dhurani, Aged About 30 Years. R/at No. 2348/1, Mission Hospital Road, Mandi Mohall, Mysuru City

PUBLIC NOTICE

The above Defendant is hereby notified that the Plaintiff has filed the above case against you seeking specific performance of Contract and that you are hereby called upon to appear before this Court in person or by your pleader duly instructed on 24.01.2025 by 11 A.M failing which the matter will be decided in accordance with law.

SCHEDULE

The Property bearing Door No.763/2 Measuring East-West 72 Feet, South-North 30 Feet Consisting of 800 square Feet of RCC, Mosaic Flooring House, situated at North-East of Mahadevapura Layout, Udayagiri, Lashkar Mohalla, Mysuru City. East by: Road, West by: Private Property North by: Drainage, South by.: Property bearing Site No.763/3. Given under my hand and Seal of the Court, this 18th day of December, 2024

By order of court : Court of Senior Civil Judge & CJM Mysore

Advocate for the Plaintiff: Dr. M N Ravishankar, Advocate, No.513, 1st Floor, Thyagaraja Road, Near Agrahara, Mysuru - 570 004, Mobile No. 9448750181

ಗೌರವಾನ್ವಿತ ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮೈಸೂರು
ಸಿಮಿಸ್ ಸಂಖ್ಯೆ : 1911 / 2024

ಅರ್ಜಿದಾರರು :1) ಶ್ರೀಮತಿ. ಉಮಾ .ಕೆ. ಕೋಂ ಲೇಟ್ ಶಾಜಿ. ಕೆ. ವಯಸ್ಸು ಸುಮಾರು 46 ವರ್ಷ,
2) ಪ್ರತ್ಯುಷ್ ಬಿನ್ ಲೇಟ್ ಶಾಜಿ. ಕೆ. ವಯಸ್ಸು ಸುಮಾರು 17 ವರ್ಷ,
3) ಅಶ್ವತಿ ಬಿನ್ ಲೇಟ್ ಶಾಜಿ. ಕೆ. ವಯಸ್ಸು ಸುಮಾರು 11 ವರ್ಷ, 2 ಮತ್ತು 3ನೇ ಅರ್ಜಿದಾರರು ಅಪ್ರಾಪ್ತ ವಯಸ್ಕರಾಗಿದ್ದು, ಇವರ ಮೈನರ್ ಗಾರ್ಡಿಯನ್ ಆಗಿ 1ನೇ ಅರ್ಜಿದಾರರು ಪ್ರತಿನಿಧಿಸಲ್ಪಡುತ್ತಾರೆ. ಎಲ್ಲರ ವಾಸ: ಮನೆ ನಂ.308, 4ನೇ ಕ್ರಾಸ್, 3ನೇ ಹಂತ, ನಾಯ್ಡುನಗರ, ಮೈಸೂರು.
ವಿರುದ್ಧ
ಎದುರುದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.


ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ 1ನೇ ಅರ್ಜಿದಾರರ ಗಂಡ, 2 ಮತ್ತು 3ನೇ ಅರ್ಜಿದಾರರ ತಂದೆಯವರಾದ ಶಾಜಿ ಕೆ. ಬಿನ್ ಕೆ. ಕೃಷ್ಣನ್ ರವರು ದಿನಾಂಕ 17.07.2023 ರಂದು ಮನೆ ನಂ.308, 4ನೇ ಕ್ರಾಸ್, 3ನೇ ಹಂತ, ನಾಯ್ಡುನಗರ, ಮೈಸೂರು ಇಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅರ್ಜಿದಾರರು ಈ ಘನ ನ್ಯಾಯಾಲಯದಲ್ಲಿ ಶಾಜಿ ಕೆ. ಬಿನ್ ಕೆ. ಕೃಷ್ಣನ್ ರವರ ಮರಣ ಪ್ರಮಾಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಶಾಜಿ ಕೆ. ಬಿನ್ ಕೆ. ಕೃಷ್ಣನ್ ರವರು ದಿನಾಂಕ 17.07.2023 ರಂದು ಮರಣ ಹೊಂದಿರುವ ಬಗ್ಗೆ ಅರ್ಜಿದಾರರು ಮರಣ ಪ್ರಮಾಣ ಪತ್ರವನ್ನು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಯಾವುದಾದರೂ ವ್ಯಕ್ತಿಗಳು ತಮ್ಮ ಹಿತಾಸಕ್ತಿ / ತಕರಾರು ಏನಾದರೂ ಇದ್ದಲ್ಲಿ ಸದರಿ ಪ್ರಕರಣವು ಈ ಘನ ನ್ಯಾಯಾಲಯದಲ್ಲಿ ದಿನಾಂಕ 15/1/25 ರಂದು ಸುನಾವಣೆಗೆ ನಿಗದಿಯಾಗಿದ್ದು, ಆ ದಿನ ಯಾವುದೇ ಹಿತಾಸಕ್ತಿ ಇರುವ ವ್ಯಕ್ತಿಗಳು ಬೆಳಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ನೀವಾಗಲೀ, ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ ತಾವು ಹಾಜರಾಗದೇ ಇದ್ದ ಪಕ್ಷದಲ್ಲಿ ನಿಮ್ಮ ಗೈರು ಹಾಜರಿಯನ್ನೇ ಪರಿಗಣಿಸಿ ನ್ಯಾಯಾಲಯವು ಮುಂದಿನ ಕ್ರಮ ಕೈಗೊಳ್ಳುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತೇವೆ.


ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಪ್ರಧಾನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮೈಸೂರು
ಅರ್ಜಿದಾರರ ಪರ ವಕೀಲರು
ಸಹಿ/– ಬಿ.ಪಿ.ರಾಜೇಶ್, ವಕೀಲರು, #514, ಬಿಂದ್ಯಾ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಮೈಸೂರು



ಮೊದಲನೇ ವರ್ಷದ ಸವಿನೆನಪು



ಶ್ರೀಮತಿ ದೇವಮ್ಮ
ಲೇ॥ ಜೆ ಪುಟ್ಟಲಿಂಗಯ್ಯನವರ ಧರ್ಮಪತ್ನಿ (ಕೆಎಸ್‌ಆರ್‌ಟಿಸಿ) ನಾಡನಹಳ್ಳಿ
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಾವುಗಳು ನಿಮ್ಮ ನೆನಪಿನಲ್ಲೇ ಇರುತ್ತೇವೆ ಹಾಗೂ ನಿಮ್ಮ ಆಶೀರ್ವಾದಗಳು ನಮ್ಮ ಜೊತೆಯಲ್ಲಿ ಇರುತ್ತದೆ.
ದುಃಖಿತಪ್ತರು: ನಿಮ್ಮ ಪ್ರೀತಿಯ ತಮ್ಮನಾದ T.ರಂಗಸ್ವಾಮಿ, ಸರ್ಕಾರಿ ಉತ್ತನಹಳ್ಳಿ (CPWD Rtd.,) ಮತ್ತು ಕುಟುಂಬದವರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು, ನಾಡನಹಳ್ಳಿ, ಮೈಸೂರು ತಾ॥



PUBLIC NOTICE

Our client proposes to acquire absolute ownership of the residential house property currently bearing No.853/D and as per Form-2 issued by Mysore City Corporation Property No. 36-4-568-3B, Ward 36, situated at Gokulam 3rd Stage, V.V Mohalla, Mysuru measuring East to West 45 feet and North to South 51 feet, totally measuring 255 square yards comprising of RCC construction of about 120.77 Sq.Mts in Ground Floor and 120.77 Sq.Mts in First Floor, Mosaic Flooring which is more fully described in the schedule below referred to as the Property from its present owner, N. Usha Rani (the "Owner"). The Owner has represented that, she has not mortgaged, created any lien or encumbered the Property or part thereof in any manner and that the Owner has not entered into any other agreement of sale /development agreement/ memorandum of understanding /arrangement etc., with any person/s with regard to the Property. The Owner has further represented that she is the absolute owner of the Property having clear and marketable, right, title and interest therein and that apart from her, there is no other person/s having any right, title or claim over the Property. Any person/s, entity, trust, firm, HUF, institution (corporate or otherwise) having claims, demand, right, title or interest, minor's claim or any right of whatsoever nature capable of establishing such claim, demand, right, title or interest with respect to the Property shall lodge their written objections/claims together with all documentary evidence within Ten (10) days from the date of this notice with the undersigned. Failing to do so, it shall be presumed that, the ownership and title of the Owner with respect to the Property is clear, marketable, and free from all encumbrances of any kind whatsoever, and our client shall then proceed to complete the proposed sale transaction. Any claims or alleged interests, which are received without documentary evidence or received after **Ten (10) days** from the date of publication of this notice, shall be deemed to be invalid and not binding on the parties to the proposed transaction

SCHEDULE OF THE PROPERTY

All that piece and parcel of the residential house bearing No.853/D and as per Form-2 issued by Mysore City Corporation Property No. 36-4-568-3B, Ward 36, situated at Gokulam 3 rd Stage, V.V Mohalla, Mysuru measuring East to West 45 feet and North to South 51 feet, totally measuring 255 square yardscomprising of RCC construction of about 120.77 Sq. Mts in Ground Floor and 120.77 Sq.Mts in First Floor, Mosaic Flooring and bounded on the : East By : Property No. 853/E, West By : Property No. 853/C, North By : Road and South By : Property No. 853/A.

Sd/- **Dinesh Solanki,**
Advocate, Solanki Associates,
1197, 12/2, KRB Road, Chamarajapuram, Mysuru.
Ph : 9343430011.
advdineshsolanki@rediffmail.com
Date : 19-12-2024.


ಮೈಸೂರು ಅರಮನೆ ಮಂಡಳಿ
ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು
ದೂರವಾಣಿ ಸಂ:0821-2421051 ಇಮೇಲ್: ddmysorepalace@gmail.com

ಸಂಖ್ಯೆ: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ:13/2024–25 ದಿನಾಂಕ: 16.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ.18.50 ಲಕ್ಷಗಳ ಅರಮನೆ ವಿದ್ಯುತ್ ಉಪ–ವಿಭಾಗಕ್ಕೆ ಸಂಬಂಧಿಸಿದ ಒಟ್ಟು 04 ಸಂಖ್ಯೆ ಅಭಿವೃದ್ಧಿ/ದುರಸ್ಥಿ/ಖರೀದಿ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ / ನೋಂದಾಯಿತ ಏಜೆನ್ಸಿ / ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 30–12–2024 ಸಂಜೆ 4:00 ಗಂಟೆಯವರೆಗೆ.** (2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ **ದಿನಾಂಕ:31–12–2024 ಸಂಜೆ 4:00 ಗಂಟೆಯವರೆಗೆ.** (3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ **ದಿನಾಂಕ: 01–01–2025 ಸಂಜೆ 4.00 ಗಂಟೆಯವರೆಗೆ.** (4) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 01–01–2025 ಸಂಜೆ 4.30 ಗಂಟೆಗೆ.** (5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ. 5.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.3.50 ಲಕ್ಷಗಳು. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕು ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದ್ದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು
DIPR/MYS/KAVITA/977/2024-25



PUBLIC NOTICE

Notice is hereby given to the general public that our client is intending to purchase the below mentioned schedule property from its owner M/s Jinansh Ventures LLP, having its office #131/2, 1st floor, Hansraj Galli, Halladakeri, Mysore-570001.

All person/s having any claim against or in respect of the schedule property mentioned hereunder are any part thereof by way of sale, exchange, gift, mortgage (equitable / registered or otherwise), Trust, in heritance, family arrangement, maintenance, bequest, partnership, possession, lease, sub-lease, tenancy, license, lien, charge, pledge, easement or otherwise howscever are hereby requested to notify the same in writing to us with supporting documentary evidence at the address mentioned hereunder within 14 days from the date hereon, failing which the claim/s, if any, of such person/s will be considered to have been waived and or abandoned and our client shall proceed to purchase the schedule property.

SCHEDULE PROPERTY

All that piece and parcel of the Residential Site bearing No.1942, measuring East to West - 24meters and North to South - 15Meters, Totally measuring 360Sq.Mts, situated at Hanchya-Sathagally-B-Zone, Nazarbad Mohalla, Mysore, bounded on; East by: Road, West by: Site No.1945-1946, North by: Site No.1943, South by: Site No.1941.

Prabhu Associates
Sd/- H.P.Darshan Shetty, BAL, LL.B., LL.M., KAR 1367 / 2012
H.P.Gagan Shetty, BBA, LL.B., LL.M., KAR 1521 / 2020
Advocates
#1533, 1st Floor, Navagraha temple Street, Agrahara, K.R. Mohalla, Mysuru-24
Mob : 95908 07007 / 89040 40406
Date : 18.12.2024, Place : Mysore

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ನಾಗಮಂಗಲ ಉಪ ವಿಭಾಗ, ನಾಗಮಂಗಲ
T.B.Extension, Nagamangala Pin code: 571 432
Gmail ID: acfnagamangala@gmail.com
ಸಂ:ಸಸಂ:ಎನ್.ಎಂ.ಜಿ/ಟೆಂಡರ್/2024–25 ದಿ:16.12.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ಮತ್ತು 2024–25ನೇ ಸಾಲಿನಲ್ಲಿ ನೊಂದಾವಣೆಯಾಗಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಈ ವಿಭಾಗದ ವಲಯಗಳಲ್ಲಿ ಮುಂಗಡ ಕಾಮಗಾರಿ ಮತ್ತು 8*12 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ವೆಬ್ ಸೈಟ್ http://kppp.karnataka.gov.in ರಲ್ಲಿ ಈ ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಟೆಂಡರ್ ವೇಳಾಪಟ್ಟಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ನಾಗಮಂಗಲ ಉಪ ವಿಭಾಗ, ನಾಗಮಂಗಲ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/508/2024–25


ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.

ಸಂಖ್ಯೆ:ಮೈನಪ್ರಾನಯೋಶಾ:ಭೂಉಬ:ಸಯೋ-1/44/2024-25, ದಿನಾಂಕ: 10.12.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮದ ಸ.ನಂ.297/3ರ 00–35 ಗುಂಟೆ ಮತ್ತು 297/4ರ 00–35 ಗುಂಟೆ ಒಟ್ಟು 01 ಎಕರೆ 30ಗುಂಟೆ ವಿಸ್ತೀರ್ಣದ** ಜಮೀನುಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ **ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀಮತಿ ಸರ್ದಾರ್ ಡರ್ಲಾ ಮತ್ತು ಶ್ರೀಮತಿ ಪ್ರಿಯಾಂಕ** ಇವರುಗಳು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ **ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570005** ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು,
ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/RO940/2024-25